ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ನವೆಂಬರ್ 4 ಶುಕ್ರವಾರ 2022
ಸಂಪುಟ: 43 | ಸಂಚಿಕೆ: 197 | ಪುಟಗಳು: 10
ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com
₹4

ಆಸ್ಪತ್ರೆಗೆ ಮಗು ಕರೆದೊಯ್ಯಬೇಕು... ಮತ್ತೆ ಇಂಥ ತಪ್ಪು ಮಾಡಲ್ಲ ಬಿಡಿ ಸಾ...

● ಕಾನೂನಿಗೂ ಕರುಣೆ ಇಲ್ಲದಾಯ್ತಾ...: ಹೆಲ್ಮೆಟ್ ಧರಿಸಿಲ್ಲ ಎಂಬ ಕಾರಣಕ್ಕೆ ಆಸ್ಪತ್ರೆಗೆ ತೆರಳುತ್ತಿದ್ದ ದಂಪತಿಗೆ ಪೊಲೀಸರ ಕಿರುಕುಳ ಆರೋಪ ● ಗಂಟೆಗಟ್ಟಲೇ ಹಸುಗೂಸಿನೊಂದಿಗೆ ರಸ್ತೆಯಲ್ಲಿ ಕೂತಿದ್ದ ತಾಯಿ ಕಂಡು ಮಮ್ಮಲ ಮರುಗಿದ ಸಾರ್ವಜನಿಕರು; ಆಕ್ರೋಶ

ಮಂಡ್ಯ,ನ.3–ಕಾನೂನಿಗೆ ಕರುಣೆ ಇಲ್ಲದಾಯ್ತಾ... ಏಳೆಂಟು ತಿಂಗಳ ಹಸುಗೂಸಿನೊಂದಿಗೆ ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗೆಂದು ಬೈಕ್‌ನಲ್ಲಿ ತೆರಳುತ್ತಿದ್ದ ದಂಪತಿ ತಡೆದ ಸಂಚಾರಿ ಪೊಲೀಸರು ದಂಡ ಪಾವತಿಸುವವರೆಗೂ ನಾವು ಬಿಡೆವು ಎಂದು ಪಟ್ಟು ಹಿಡಿದಿದ್ದರಿಂದ ತಾಯಿ ಮತ್ತು ಮಗು ಕಾದು ಕಾದು ಹೈರಾಣಾದ ಹೃದಯ ಕಲಕುವ ಚಿತ್ರಣ ಕಂಡ ಸಾರ್ವಜನಿಕರು ಪೊಲೀಸರಿಗೆ ಹಿಡಿಶಾಪ ಹಾಕಿದ್ದಾರೆ.

ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಹೋಬಳಿಯ ಯಗುಚಗುಪ್ಪೆ ಗ್ರಾಮದ ಅಭಿಷೇಕ್, ತನ್ನ ಬೈಕ್‌ನಲ್ಲಿ ಏಳೆಂಟು ತಿಂಗಳ ಹಸುಗೂಸಿನೊಂದಿಗೆ ಪತ್ನಿಯನ್ನು ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ಕರೆತಂದಿದ್ದಾರೆ. ಅಭಿಷೇಕ್ ಹಾಗೂ ಅವರ ಪತ್ನಿ ಹೆಲ್ಮೆಟ್ ಧರಿಸದ ಹಿನ್ನೆಲೆಯಲ್ಲಿ ಸಂಚಾರಿ





ಎಎಸ್‌ಐ ರಘುಪ್ರಕಾಶ್ ಮಂಡ್ಯದ ಮಹಾವೀರ್ ವೃತ್ತದಲ್ಲಿ ಬೈಕ್ ಅಡ್ಡಗಟ್ಟಿ, ಕೀ ಕಸಿದುಕೊಂಡು 500 ರೂ. ದಂಡ ಪಾವತಿಸಿ, ಬೈಕ್ ತೆಗೆದುಕೊಂಡು ಹೋಗುವಂತೆ ತಾಕೀತು ಮಾಡಿದ್ದಾರೆ. ಸಂಚಾರ ಪೊಲೀಸರಲ್ಲಿ ಅಭಿಷೇಕ್, ತನ್ನ ಬಳಿ ಹಣವಿಲ್ಲ. ಮಿಮ್ಸ್ ಆಸ್ಪತ್ರೆಯಲ್ಲಿ ಮಗು ಹಾಗೂ ಪತ್ನಿಗೆ ಉಚಿತ ಸಾಮಾನ್ಯ ತಪಾಸಣೆಗೆ ಬಂದಿದ್ದು, ಮತ್ತೊಮ್ಮೆ ಈ ರೀತಿ ತಪ್ಪು ಮಾಡುವುದಿಲ್ಲ. ದಯವಿಟ್ಟು ಬಿಟ್ಟು ಬಿಡಿ ಎಂದು ಪರಿಪರಿಯಾಗಿ ಅಂಗಲಾಚಿದ್ದಾರೆ.

ಯಾವುದಕ್ಕೂ ಕಿವಿಗೊಡದ ಪೊಲೀಸಪ್ಪ, ದಂಡ ಪಾವತಿಸಲೇಬೇಕೆಂದು ಪಟ್ಟು ಹಿಡಿದಿದ್ದಾರೆ. ಇದನ್ನು ಕಂಡ ಸ್ಥಳೀಯರು, ದಾರಿಹೋಕರು ಮರುಗಿ, ಮಗು ಇದೆ, ದಯವಿಟ್ಟು ಬಿಟ್ಟು ಬಿಡಿ ಸಾರ್... ಎಂದು ಅಭಿಷೇಕ್ ಮತ್ತು ಆತನ ಪತ್ನಿ, ಮಗು ಪರ ಬೇಡಿದರೂ ಮನ ಕರಗದ ಎಎಸ್‌ಐ, ದಂಡ ಕಟ್ಟದೇ ಬಿಡುವುದ್ಹೇಗೆ ಎಂದು ಹೇಳಿ ಗದರಿಸಿದ್ದಾರೆ.

ಕಾದು... ಕಾದು... ಬಳಿಕ ವಿಧಿ ಇಲ್ಲದೇ ಪತ್ನಿ ಹಾಗೂ ಮಗುವನ್ನು ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಪಾದಚಾರಿ ಮಾರ್ಗದಲ್ಲಿ ಕೂರಿಸಿ, ತನ್ನ ಸ್ನೇಹಿತನ ಕಾಡಿ–ಬೇಡಿ, ಆತನಿಂದ ಗೂಗಲ್ ಪೇ ಮೂಲಕ ಹಣ ಸ್ವೀಕರಿಸಿದ್ದಾರೆ. ವಿವಿ ರಸ್ತೆಯ ಎಟಿಎಂಗೆ ಓಡಿ ಹೋಗಿ ▶ 7ನೇ ಪುಟಕ್ಕೆ

ಪೊಲೀಸರ ವರ್ತನೆಗೆ ಮಾಜಿ ಸಿಎಂ ಹೆಚ್‌ಡಿಕೆ ಆಕ್ರೋಶ



ಬೆಂಗಳೂರು: ಬೈಕ್‌ನಲ್ಲಿ ಮಗುವನ್ನು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದ ವೇಳೆ ಹೆಲ್ಮೆಟ್ ಧರಿಸಿಲ್ಲ ಎಂಬ ಕಾರಣಕ್ಕೆ ದಂಪತಿಗೆ ಪೊಲೀಸರು ಕಿರುಕುಳ ನೀಡಿರುವ ಕುರಿತು ಜೆಡಿಎಸ್ ನಾಯಕ, ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಬಿಜೆಪಿ ಸರ್ಕಾರವು ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಹಾಳು ಮಾಡಿದೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿ ಎಂದು ವಾಗ್ದಾಳಿ ನಡೆಸಿರುವ ಕುಮಾರಸ್ವಾಮಿ, ಹೆಲ್ಮೆಟ್ ಧರಿಸದ ಕಾರಣಕ್ಕೆ ಅಡ್ಡಗಟ್ಟಿದ ಪೊಲೀಸರು ಬೈಕಿನ ಕೀ ಕಿತ್ತುಕೊಂಡು, ಹಣಕ್ಕಾಗಿ ಪೀಡಿಸಿದ್ದಾರೆ. ಹಣವಿಲ್ಲದ ದಂಪತಿ ರಸ್ತೆಯಲ್ಲೇ ಪರದಾಡಿದ್ದಾರೆ. ಆ ಮಗುವಿನ ತಂದೆ ಹಣಕ್ಕಾಗಿ ಪರಿತಪಿಸಿದ್ದಾರೆ. ಆ ತಾಯಿ ಅನಾರೋಗ್ಯಕ್ಕೆ ತುತ್ತಾಗಿದ್ದ ಮಗುವನ್ನು ರಸ್ತೆ ಬದಿಯಲ್ಲಿಯೇ ಮಡಿಲಲ್ಲಿಟ್ಟುಕೊಂಡು ಅನುಭವಿಸಿದ ವೇದನೆ ಕಂಡೂ ಈ ಪೊಲೀಸರಿಗೆ ಕರುಣೆ ಇಲ್ಲದಾಯಿತೇ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಘಟನೆ ಬಿಜೆಪಿ ಸರ್ಕಾರದ ಕೆಟ್ಟ ಆಡಳಿತಕ್ಕೆ ಹಿಡಿದ ಕನ್ನಡಿ. ಮನುಷ್ಯತ್ವ ಸತ್ತ ಸರ್ಕಾರದ ಇನ್ನೊಂದು ಕರಾಳಮುಖ ಎನ್ನದೇ ವಿಧಿ ಇಲ್ಲ ಎಂದು ಹೆಚ್‌ಡಿಕೆ ಟೀಕಿಸಿದ್ದಾರೆ. ▶ 7ನೇ ಪುಟಕ್ಕೆ

ವರಿಷ್ಠರಿಂದಲೇ ಅಭ್ಯರ್ಥಿಗಳ ಆಯ್ಕೆ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟನೆ ● ಮಾಜಿ ಸಂಸದರಾದ ಮುದ್ದಹನುಮೇಗೌಡ, ಚಿತ್ರನಟ ಶಶಿಕುಮಾರ್, ನಿವೃತ್ತ ಐಎಎಸ್ ಅಧಿಕಾರಿ ಅನಿಲ್ ಕುಮಾರ್ ಇತರರು ಬಿಜೆಪಿ ಸೇರ್ಪಡೆ ● ನಮ್ಮದೇನು ಇಲ್ಲ; ವರಿಷ್ಠರ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಬೇಕು; ನನ್ನ ಸ್ಪರ್ಧೆಯನ್ನು ಅವರೇ ನಿರ್ಧರಿಸ್ತಾರೆ: ಬೊಮ್ಮಾಯಿ



ಬೆಂಗಳೂರಲ್ಲಿ ವಿವಿಧ ಪಕ್ಷದ ಮುಖಂಡರು ಸಿಎಂ ಬೊಮ್ಮಾಯಿ ನೇತೃತ್ವದಲ್ಲಿ ಬಿಜೆಪಿಗೆ ಸೇರ್ಪಡೆಯಾದರು.

ಬೆಂಗಳೂರು,ನ.3(ಕೆಎಂಶಿ)–ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಆಯ್ಕೆಯನ್ನು ವರಿಷ್ಠರೇ ಮಾಡಲಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಂದಿಲ್ಲಿ ಪ್ರಕಟಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರು ಹಾಗೂ ಮಾಜಿ ಸಂಸದ ಮುದ್ದಹನುಮೇಗೌಡ, ಚಿತ್ರನಟ ಶಶಿಕುಮಾರ್, ನಿವೃತ್ತ ಐಎಎಸ್ ಅಧಿಕಾರಿ ಅನಿಲ್ ಕುಮಾರ್ ಸೇರಿದಂತೆ ಹಲವು ಮುಖಂಡರನ್ನು ಬಿಜೆಪಿಗೆ ಸೇರ್ಪಡೆ ಮಾಡಿಕೊಂಡು ಮಾತನಾಡಿದ ಅವರು, ಚುನಾವಣೆಯಲ್ಲಿ ನಾನು ಕಣಕ್ಕಿಳಿಯಬೇಕೇ ಬೇಡವೇ ಎಂಬ ನಿರ್ಧಾರವನ್ನು ವರಿಷ್ಠರೇ ಮಾಡಲಿದ್ದಾರೆ.

ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಗೆ ಈಗಾಗಲೇ ವರಿಷ್ಠರು ಚಾಲನೆ ನೀಡಿದ್ದಾರೆ. ಪಕ್ಷದ ಸಿದ್ಧಾಂತ ಒಪ್ಪಿ ಕಮಲದ ಕೈ ಹಿಡಿಯುವವರನ್ನು, ವರಿಷ್ಠರು ಕೈಬಿಡುವುದಿಲ್ಲ. ಪಕ್ಷದ ತೀರ್ಮಾನಕ್ಕೆ ನೀವು, ನಾವೆಲ್ಲರೂ ಬದ್ಧರಾಗಿರಬೇಕು. ಟಿಕೆಟ್ ನೀಡುವ ಅಂತಿಮ ನಿರ್ಧಾರವನ್ನು ಸಂಸದೀಯ ಮಂಡಳಿ ಕೈಗೊಳ್ಳುತ್ತದೆ. ಪಕ್ಷದ ವರಿಷ್ಠರು ಬಲವಾಗಿದ್ದಾರೆ. ಅವರಿಗೆ ಇಡೀ ರಾಷ್ಟ್ರದಲ್ಲಿ ಕಮಲವನ್ನು ಅರಳಿಸಬೇಕು ಎಂಬ ಅಪೇಕ್ಷೆ ಇದೆ. ಆ ನಿಟ್ಟಿನಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲು ಚುನಾವಣೆಯಲ್ಲಿ ಸ್ಪರ್ಧೆಗಿಳಿಯುವ ಅಭ್ಯರ್ಥಿಗಳ ಆಯ್ಕೆಯೇ ಪ್ರಮುಖ ಮಾನದಂಡ. ಹಲವು ಕೋನಗಳಿಂದ ಪರಿಶೀಲನೆ ಮಾಡಿ, ಅಭ್ಯರ್ಥಿಗಳ ಆಯ್ಕೆ ಮಾಡುತ್ತಾರೆ. ಹೀಗಾಗಿ ಯಾರಿಗೂ ಭರವಸೆ ನೀಡಲಾಗುವುದಿಲ್ಲ. ಟಿಕೆಟ್ ಹಂಚಿಕೆ ನಮ್ಮ ಕೈಯ್ಯಲ್ಲಿ ಇಲ್ಲ ಎಂದು ವೇದಿಕೆಯಿಂದಲೇ ಕಾರ್ಯಕರ್ತರಿಗೆ ಸಂದೇಶ ನೀಡಿದರು.

ಪ್ರಮುಖ ನಾಯಕರ ಭಾಜಪ ಸೇರ್ಪಡೆಯಿಂದ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸಂಪೂರ್ಣ ಜನಮನ್ನಣೆ ಪಡೆಯುವ ದಿಕ್ಸೂಚಿ ನಿಚ್ಚಳವಾಗಿದೆ ಎಂದರು. ಇಂದು ಕಾಂಗ್ರೆಸ್ ಪಕ್ಷದಲ್ಲಿರುವ ಹತ್ತು ಹಲವಾರು ▶ 8ನೇ ಪುಟಕ್ಕೆ

ವಿಧಾನಸಭೆ ಚುನಾವಣೆ ನಂತರ ರಾಜ್ಯ ಕಾಂಗ್ರೆಸ್ ಮನೆ ಬಾಗಿಲು ಬಂದ್

● ಬಿಜೆಪಿ ರಾಜ್ಯಾಧ್ಯಕ್ಷ ಕಟೀಲ್ ಭವಿಷ್ಯ
● ರಾಹುಲ್ ಗಾಂಧಿ ಪಾದಯಾತ್ರೆ ಹೋದ ಬೆನ್ನಲ್ಲೇ ಕೊಳ್ಳೇಗಾಲ ನಗರಸಭೆಯಲ್ಲಿ ಬಿಜೆಪಿ ಜಯಭೇರಿ ಇದಕ್ಕೆ ಸಾಕ್ಷಿ

ಬೆಂಗಳೂರು, ನ.3(ಕೆಎಂಶಿ)– ರಾಜ್ಯ ವಿಧಾನಸಭೆ ಚುನಾವಣೆ ವೇಳೆಗೆ ರಾಜ್ಯ ಕಾಂಗ್ರೆಸ್ ಮನೆ ಬಾಗಿಲು ಮುಚ್ಚಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಭವಿಷ್ಯ ನುಡಿದಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಇಂದು ಮುಖಂಡರ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಇದೊಂದು ವಿಶೇಷ ಸಂದರ್ಭ ಮಾತ್ರವಲ್ಲ; ರಾಜಕೀಯ ಬದಲಾವಣೆಯ ಸಂಕೇತವೂ ಆಗಿದೆ. ರಾಹುಲ್ ಗಾಂಧಿ ಭಾರತ್ ಜೋಡೋ ಯಾತ್ರೆ ಮೂಲಕ ತೆರಳಿದಲ್ಲೆಲ್ಲ ಕಾಂಗ್ರೆಸ್ ಪಕ್ಷ ಸೋತಿದೆ. ಕೊಳ್ಳೇಗಾಲ ನಗರಸಭೆಯ 7 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ 6 ಸ್ಥಾನಗಳನ್ನು ಬಿಜೆಪಿ ಗೆದ್ದಿರುವುದೇ ಇದಕ್ಕೆ ಸಾಕ್ಷಿ ಎಂದರು. ವಿಜಾಪುರದಲ್ಲೂ ಬಿಜೆಪಿ ಅತೀ ಹೆಚ್ಚು ಸ್ಥಾನ ಗೆದ್ದಿದೆ. ಕಾಂಗ್ರೆಸ್ ಮನೆ ಖಾಲಿ ಆಗುವುದರ ಸಂಕೇತ ಇದಾಗಿದೆ.

ಡಿ.1, 5ಕ್ಕೆ ಗುಜರಾತ್ ವಿಧಾನಸಭೆ ಚುನಾವಣೆ

● ಎರಡು ಹಂತದಲ್ಲಿ ಮತದಾನ ● ಡಿ.8ಕ್ಕೆ ಫಲಿತಾಂಶ

ನವದೆಹಲಿ,ನ.3– ಬಹು ನಿರೀಕ್ಷಿತ ಗುಜರಾತ್ ವಿಧಾನಸಭಾ ಚುನಾವಣೆಯ ವೇಳಾಪಟ್ಟಿಯನ್ನು ಚುನಾವಣಾ ಆಯೋಗ ಪ್ರಕಟಿಸಿದೆ. ಗುರುವಾರ ಮಧ್ಯಾಹ್ನ ಸುದ್ದಿಗೋಷ್ಠಿ ನಡೆಸಿದ ಕೇಂದ್ರ ಚುನಾವಣಾ ಆಯುಕ್ತ ರಾಜೀವ್‌ಕುಮಾರ್, ಡಿಸೆಂಬರ್ 1 ಮತ್ತು 5ಕ್ಕೆ ಎರಡು ಹಂತಗಳಲ್ಲಿ ಮತದಾನ ನಡೆಯಲಿದ್ದು, ಡಿ.8ಕ್ಕೆ ಫಲಿತಾಂಶ ಹೊರ ಬೀಳಲಿದೆ ಎಂದರು.



ಹಿಮಾಚಲಪ್ರದೇಶ ವಿಧಾನಸಭಾ ಚುನಾವಣೆಯ ಫಲಿತಾಂಶವು ಕೂಡ ಅಂದೇ ಹೊರಬೀಳಲಿದೆ. ನ.5ರಂದು ಅಧಿಸೂಚನೆ ಹೊರಬೀಳಲಿದೆ. ನಾಮಪತ್ರ ಸಲ್ಲಿಸಲು ನ.14 ಮತ್ತು ನಾಮಪತ್ರ ▶ 8ನೇ ಪುಟಕ್ಕೆ

ಮೈಸೂರಲ್ಲಿ ಕಿದ್ವಾಯಿ ಕ್ಯಾನ್ಸರ್ ಘಟಕ ಸ್ಥಾಪನೆಗೆ 50 ಕೋಟಿ ಬಿಡುಗಡೆ: ಸಂಪುಟ ಒಪ್ಪಿಗೆ

ಬೆಂಗಳೂರು, ನ.3–ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಸಂಸ್ಥೆಯ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ಕಿದ್ವಾಯಿ ಪ್ರಾದೇಶಿಕ ಕ್ಯಾನ್ಸರ್ ಕೇಂದ್ರವನ್ನು ನಿರ್ಮಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಂಪುಟ ಸಭೆ ಅನುಮೋದನೆ ನೀಡಿದ್ದು, ಇದಕ್ಕಾಗಿ 50 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಒಪ್ಪಿದೆ.

ಮೈಸೂರಿನಲ್ಲಿ 350 ಹಾಸಿಗೆಗಳ ಫೆರಿಫೆರಲ್ ಕ್ಯಾನ್ಸರ್ ಕೇಂದ್ರ ಆರಂಭಿಸಲು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿದ್ದರು. ಇದಕ್ಕೆ 60 ಕೋಟಿ ರೂ.ಗಳ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿತ್ತು. ಆದರೆ 50 ಕೋಟಿ ರೂ.ಗಳಿಗೆ ಸೀಮಿತಗೊಳಿಸಿ, ಯೋಜನೆಗೆ ಸಂಪುಟ ಅನುಮೋದನೆ ನೀಡಿದೆ. ಮೈಸೂರಲ್ಲಿ ಕಿದ್ವಾಯಿ ಆಸ್ಪತ್ರೆ ನಿರ್ಮಿಸುವ ಸಂಬಂಧ 50 ಕೋಟಿ ರೂ. ಆರ್ಥಿಕ ನೆರವಿನೊಂದಿಗೆ ಅನುಮೋದನೆ ನೀಡುವಂತೆ ಸಂಸದ ಪ್ರತಾಪ್ ಸಿಂಹ ಮತ್ತು ಶಾಸಕ ಎಲ್.ನಾಗೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು. ಇತ್ತೀಚೆಗೆ ಮೈಸೂರಿಗೆ ಭೇಟಿ ನೀಡಿದ್ದ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರನ್ನು ಭೇಟಿ ಮಾಡಿದ್ದ ಸಂಸದ ಪ್ರತಾಪ್ ಸಿಂಹ ಮೈಸೂರು ಜಿಲ್ಲೆ ಸೇರಿದಂತೆ ಕೊಡಗು, ಚಾಮರಾಜನಗರ, ▶ 8ನೇ ಪುಟಕ್ಕೆ

ಶ್ರೀಮಂತ ವಿಚ್ಛೇದಿತ ಮಹಿಳೆಯರಿಗೆ ವಂಚಿಸುತ್ತಿದ್ದ ಕೇರಳ ವ್ಯಕ್ತಿ ವಿರುದ್ಧ ಕೇಸ್

ನಂಬಿಸಿ ವಿವಾಹವಾಗಿ ಹಣ, ಚಿನ್ನಾಭರಣ ಸುಲಿಗೆ ಮಾಡಿದ ಬಗ್ಗೆ ಬೆಂಗಳೂರು, ಹೈದರಾಬಾದ್, ಕೇರಳದಲ್ಲಿ ಪ್ರಕರಣ ದಾಖಲು

ಮೈಸೂರು, ನ.3– ಉದ್ಯಮಿಯ ಸೋಗಿನಲ್ಲಿ ಡೈವರ್ಸಿ ಮ್ಯಾಟ್ರಿಮೋನಿ ವೆಬ್‌ಸೈಟ್ ಮೂಲಕ ಶ್ರೀಮಂತ ವಿಚ್ಛೇದಿತ ಮಹಿಳೆಯರನ್ನು ವಿವಾಹವಾಗಿ ಅವರಿಂದ ಹಣ ಹಾಗೂ ಚಿನ್ನಾಭರಣ ಪಡೆದು ಕೇರಳ ವ್ಯಕ್ತಿಯೋರ್ವ ವಂಚಿಸುತ್ತಿರುವ ಬಗ್ಗೆ ಬೆಂಗಳೂರಿನ ವಿವಿಧ ಠಾಣೆಗಳಲ್ಲಿ ಹಾಗೂ ಕೇರಳ ಮತ್ತು ಹೈದರಾಬಾದ್‌ನಲ್ಲಿ ಪ್ರಕರಣಗಳು ದಾಖಲಾಗಿವೆ.

ಕೇರಳದ ಸುನೀಶ್ ಪಿಳ್ಳೈ (33) ಎಂಬಾತನೇ ಅಂತರ ರಾಜ್ಯ ವಂಚಕನಾಗಿದ್ದು, ಈತನ ಪತ್ನಿ ಮೈಸೂರಿನವರೇ ಆದ ಪ್ರೀತಿಸಿಂಗ್ (34) ಎಂಬುವರು ಕೂಡ ವರದಕ್ಷಿಣೆ ಕಿರುಕುಳ ದೂರನ್ನು ದಾಖಲು ಮಾಡಿದ್ದಾರೆ.

ಬೆಂಗಳೂರಿನ ಯಲಹಂಕದಲ್ಲಿರುವ 40 ವರ್ಷ ವಯೋಮಾನದ ಸಾಫ್ಟ್‌ವೇರ್ ಇಂಜಿನಿಯರ್ ಕಳೆದ 10 ವರ್ಷದ ಹಿಂದೆ ಪತಿಯಿಂದ ವಿಚ್ಛೇದನ ಪಡೆದಿದ್ದರು. ಅವರಿಗೆ 12 ವರ್ಷದ ಮಗನೂ ಇದ್ದಾನೆ. ಡೈವರ್ಸಿ ಮ್ಯಾಟ್ರಿಮೋನಿಯಲ್ಲಿ ಅವರನ್ನು ಪರಿಚಯವಾದ ಸುನೀಶ್‌ಪಿಳ್ಳೈ, ತಾನೂ ಕೂಡ ವಿಚ್ಛೇದಿತನೆಂದು ತಿಳಿಸಿದ್ದಲ್ಲದೆ, ತಾನು ಎಬಿಜಿಎಸ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿ ಹೊಂದಿದ್ದು, ವಿದೇಶಗಳಿಗೆ ತರಕಾರಿ ರಫ್ತು ಮಾಡುತ್ತಿರುವುದಾಗಿ ನಂಬಿಸಿದ್ದಾನೆ. ▶ 8ನೇ ಪುಟಕ್ಕೆ

ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗೆ ವಯೋಮಿತಿ 2 ವರ್ಷ ಹೆಚ್ಚಳ

ಒಂದು ಬಾರಿಗೆ ಅನ್ವಯವಾಗಿ ನಿರ್ಧಾರ



ಬೆಂಗಳೂರು, ನ.3– ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆ ನೇಮಕಾತಿಗೆ ಒಂದು ಬಾರಿಗೆ ಅನ್ವಯವಾಗುವಂತೆ ಅಭ್ಯರ್ಥಿಗಳ ಗರಿಷ್ಠ ವಯೋಮಿತಿಯನ್ನು ಎರಡು ವರ್ಷ ಹೆಚ್ಚಿಸಿ ಸರ್ಕಾರ ಆದೇಶಿಸಿದೆ. ▶ 7ನೇ ಪುಟಕ್ಕೆ

5 ದಿನಗಳಿಂದ ನಾಪತ್ತೆಯಾಗಿದ್ದ ಶಾಸಕ ರೇಣುಕಾಚಾರ್ಯ ಸಹೋದರನ ಪುತ್ರ ಶವವಾಗಿ ಪತ್ತೆ!



ಹೊನ್ನಾಳಿ ಬಳಿ ತುಂಗಭದ್ರ ಮೇಲ್ದಂಡೆ ನಾಲೆಯಲ್ಲಿ ಕಾರಿನ ಹಿಂಬದಿ ಸೀಟ್‌ನಲ್ಲಿ ಮೃತದೇಹ ಪತ್ತೆ; ಸಾಕಷ್ಟು ಅನುಮಾನ

ದಾವಣಗೆರೆ, ನ.3– ಕಳೆದ ಐದು ದಿನಗಳ ಹಿಂದೆ ನಿಗೂಢವಾಗಿ ನಾಪತ್ತೆಯಾಗಿದ್ದ ಹೊನ್ನಾಳಿ ಶಾಸಕ ಎಂ.ಪಿ.ರೇಣುಕಾಚಾರ್ಯ ಸಹೋದರನ ಪುತ್ರ ಚಂದ್ರಶೇಖರ್(24) ಶವ ಕಾರಿನ ಸಮೇತ ತುಂಗಭದ್ರಾ ಮೇಲ್ದಂಡೆ ನಾಲೆಯಲ್ಲಿ ಗುರುವಾರ ಪತ್ತೆಯಾಗಿದೆ.

ನ್ಯಾಮತಿ ಮತ್ತು ಹೊನ್ನಾಳಿ ನಡುವೆ ರೇಣುಕಾಚಾರ್ಯ ಅವರ ಮನೆ ಇರುವ ಹೊನ್ನಾಳಿಗೆ ಕೇವಲ 5 ಕಿ.ಮೀ. ಅಂತರದಲ್ಲಿ ಅವರ ಶವ ಪತ್ತೆಯಾಗಿದ್ದು, ಕಾರಿನ ಹಿಂಬದಿ ಸೀಟಿನಲ್ಲಿ ಕೊಳೆತ ಸ್ಥಿತಿಯಲ್ಲಿ ಶವ ಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

ರೇಣುಕಾಚಾರ್ಯ ಅವರ ಸಹೋದರ ಎಂ.ಪಿ.ರಮೇಶ್ ಪುತ್ರ ಚಂದ್ರಶೇಖರ್ ಅ.30ರಂದು ರಾತ್ರಿ ನಿಗೂಢವಾಗಿ



ಚಂದ್ರಶೇಖರ್

ನಾಪತ್ತೆಯಾಗಿದ್ದರು. ಇದಕ್ಕೂ ಮುನ್ನ ಅಂದು ಸಂಜೆ ಅವರು ಚಿಕ್ಕಮಗಳೂರು ಜಿಲ್ಲೆಯ ಗೌರಿಗದ್ದೆಗೆ ಹೋಗಿ ವಿನಯ್ ಗುರೂಜಿ ಆಶೀರ್ವಾದ ಪಡೆದು ರಾತ್ರಿ ವಾಪಸ್ಸಾಗುವ ವೇಳೆ 11 ಗಂಟೆ ಸುಮಾರಿನಲ್ಲಿ ದೆಹಲಿ ಸ್ನೇಹಿತರ ಜೊತೆ ಕೊನೆಯದಾಗಿ ಮಾತನಾಡಿದ್ದರು. 11.36ರಲ್ಲಿ ಹೊನ್ನಾಳಿ ಪಟ್ಟಣದ ಸರ್ಕಲ್‌ನಲ್ಲಿರುವ ಟವರ್‌ನಲ್ಲಿ ಅವರ ಕೊನೆಯ ಮೊಬೈಲ್ ಲೊಕೇಷನ್ ಪತ್ತೆಯಾಗಿದ್ದು, ನಂತರ ಸ್ವಿಚ್ ಆಫ್ ಆಗಿದೆ. ಇಂದು ಚಂದ್ರಶೇಖರ್ ಶವ ದೊರೆತ ಪ್ರದೇಶದ ಮೊಬೈಲ್‌ಗಳು ಕೂಡ ಹೊನ್ನಾಳಿ ಸರ್ಕಲ್ ಟವರ್‌ನಲ್ಲೇ ಕಾರ್ಯ ನಿರ್ವಹಿಸುತ್ತದೆ. ಹೀಗಾಗಿ ಅವರು ಭಾನುವಾರ ರಾತ್ರಿ 11.36ರಲ್ಲಿ ಕಾರಿನ ಸಮೇತ ನಾಲೆಗೆ ಬಿದ್ದು ಮೃತಪಟ್ಟಿರಬಹುದು ಎಂದು ಹೇಳಲಾಗಿದೆ.

ಕಾರಿನ ಮುಂಭಾಗದ ಗಾಜುಗಳು ಒಡೆದಿದ್ದು, ಹಿಂಭಾಗವೂ ಜಖಂಗೊಂಡಿದೆ. ಈ ಕಾರಿನಲ್ಲಿ ಚಂದ್ರಶೇಖರ್ ಹೊರತುಪಡಿಸಿ ಬೇರೆ ಯಾರೂ ಪ್ರಯಾಣಿಸಿದಂತೆ ಮೇಲ್ನೋಟಕ್ಕೆ ಕಂಡುಬರುತ್ತಿಲ್ಲ. ಅವರೇ ಕಾರು ಚಾಲನೆ ಮಾಡಿಕೊಂಡು ಬಂದು ನಿಯಂತ್ರಣ ತಪ್ಪಿ ನಾಲೆಗೆ ಬಿದ್ದಿದ್ದರೆ ಶವ ಚಾಲಕನ ಸೀಟ್‌ನಲ್ಲಿ ಇರಬೇಕಾಗಿತ್ತು. ಆದರೆ ಹಿಂಬದಿಯ ಸೀಟ್‌ನಲ್ಲಿ ಶವ ದೊರೆತಿರುವುದರಿಂದ ಅವರನ್ನು ಹತ್ಯೆ ಮಾಡಿದ ನಂತರ ಕಾರಿನಲ್ಲಿ ಶವವಿಟ್ಟು ಕಾರನ್ನು ▶ 7ನೇ ಪುಟಕ್ಕೆ

ವಿವೇಕ ಸ್ಮಾರಕಕ್ಕೆ ಜಾಗ ನೀಡಿದ ರಾಜ್ಯ ಸರ್ಕಾರ, ಜಿಲ್ಲಾಡಳಿತದ ಆದೇಶ ಪ್ರಶ್ನಿಸಿದ್ದ ಅರ್ಜಿ ವಜಾ; ಸಾವಿರ ರೂ. ದಂಡ

ಮೈಸೂರು,ನ.3– ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸರ್ವೆ ನಂ. 2024ರ 312ನೇ ಸ್ವತ್ತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತ ನೀಡಿದ್ದ ಆದೇಶ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಮೈಸೂರಿನ 10ನೇ ಸಿವಿಲ್ ನ್ಯಾಯಾಲಯ (ಕಿರಿಯ ಶ್ರೇಣಿ) ಸಾವಿರ ರೂ. ದಂಡದೊಂದಿಗೆ ನಿನ್ನೆ(ನ.2) ವಜಾಗೊಳಿಸಿದೆ.

ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ವಿವೇಕ ಸ್ಮಾರಕದ ಪಕ್ಕದಲ್ಲಿರುವ ಎನ್‌ಟಿಎಂ ಶಾಲಾ ಕಟ್ಟಡ ಹಾಗೂ ಆವರಣ, ಅದಕ್ಕೆ ಹೊಂದಿಕೊಂಡಿರುವ ಬಿಆರ್‌ಸಿ ಕಟ್ಟಡ ಹಾಗೂ ಆವರಣ ಒಳಗೊಂಡಂತೆ ಒಟ್ಟು 36592.66 ಚದರ ಅಡಿ ಜಾಗವನ್ನು ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರ 'ವಿವೇಕ ಸ್ಮಾರಕ' ಸ್ಥಾಪನೆಗೆ ಶ್ರೀ ರಾಮಕೃಷ್ಣ ಮಠ ಮತ್ತು ಮಿಷನ್ ಸಂಸ್ಥೆಗೆ ಉಚಿತವಾಗಿ ಹಸ್ತಾಂತರಿಸಲು ಸರ್ಕಾರ ಮಂಜೂರು ಮಾಡಿ 09–01–2013ರಲ್ಲಿ ಆದೇಶಿಸಿತ್ತು 07–01–2022ರಲ್ಲಿ ಎನ್‌ಟಿಎಂ ಶಾಲೆಯನ್ನು ಪ.ಪೂ.ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿ ಆವರಣದ ಮಹಾರಾಣಿ ಪದವಿಪೂರ್ವ ಕಾಲೇಜು ಕಟ್ಟಡಕ್ಕೆ ಸ್ಥಳಾಂತರ ಮಾಡಿ, ಸದರಿ ಜಾಗವನ್ನು ರಾಮಕೃಷ್ಣ ಮಿಷನ್‌ಗೆ ಹಸ್ತಾಂತರ ಮಾಡಬೇಕು ಎಂದು ಮತ್ತೊಂದು ಆದೇಶ ನೀಡಿತ್ತು. ಅದರಂತೆ ಜಾಗವನ್ನು ಹಸ್ತಾಂತರ ಮಾಡಿ ಜಿಲ್ಲಾಡಳಿತ(ಜಿ.ಅ.ಮೈ./ಆ.ಸ.ಶಾ./5/2022–23) ಆದೇಶಿಸಿತ್ತು.

ಈ ಮೂರು ಆದೇಶಗಳನ್ನು ಪ್ರಶ್ನಿಸಿ ಹೆಚ್.ವಿ.ಬಸವರಾಜು, ನಂ.ಸಿದ್ದಪ್ಪ, ಟಿ. ಲಿಂಗರಾಜು, ಕೆ.ಶಿವಕುಮಾರ ಹಾಗೂ ಸಿ.ಎನ್.ಸುನಿಲ್ ಕುಮಾರ್ ಮೈಸೂರಿನ 10ನೇ ಸಿವಿಲ್ ನ್ಯಾಯಾಲಯ(ಕಿರಿಯ ಶ್ರೇಣಿ)ದಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ಪ್ರತಿವಾದಿಗಳಾದ ರಾಜ್ಯ ಸರ್ಕಾರ ಹಾಗೂ ಮೈಸೂರು ಜಿಲ್ಲಾಧಿಕಾರಿಗಳ ಪರವಾಗಿ ಜಿಲ್ಲಾ ಸರ್ಕಾರಿ ವಕೀಲ ಉಮೇಶ್‌ಕುಮಾರ್, ಹಲವು ಅಂಶಗಳನ್ನು ನ್ಯಾಯಾಲಯದ ಮುಂದಿಟ್ಟು ಹೆಚ್.ವಿ.ಬಸವರಾಜು ಮತ್ತು ಇತರರು ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಬೇಕೆಂಬ ಮನವಿಯೊಂದಿಗೆ ವಾದ ಮಂಡಿಸಿದ್ದರು. ಇದನ್ನು ಪರಿಗಣಿಸಿದ ಮೈಸೂರಿನ 10ನೇ ಸಿವಿಲ್ ನ್ಯಾಯಾಲಯ(ಕಿರಿಯ ಶ್ರೇಣಿ)ದ ನ್ಯಾಯಾಧೀಶರಾದ ರವೀಂದ್ರ ಹಾವರಗಿ ಅವರು ಹೆಚ್.ವಿ.ಬಸವರಾಜು ಮತ್ತು ಇತರರ ಅರ್ಜಿಯನ್ನು ವಜಾ ಮಾಡಿದ್ದಾರೆ. ಅಲ್ಲದೆ ಅರ್ಜಿದಾರರಿಗೆ ಸಾವಿರ ರೂ. ದಂಡ ವಿಧಿಸಿದ್ದಾರೆ.

ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿಯ ವಾರ್ಷಿಕೋತ್ಸವ



ಮೈಸೂರು,ನ.3–ಶ್ರೀ ಪ್ರಸನ್ನ ಗಣಪತಿ ಮತ್ತು ಶಿರಡಿ ಸಾಯಿ ಶಕ್ತಿಸನ್ನಿಧಿ ಟ್ರಸ್ಟ್ ವತಿಯಿಂದ ಮೈಸೂರಿನ ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ ಕ್ಷೇತ್ರದ 12ನೇ ವರ್ಷದ ವಾರ್ಷಿಕೋತ್ಸವವನ್ನು ನ.5 ರಂದು ಏರ್ಪಡಿಸಲಾಗಿದೆ. ಅಂದು ಬೆಳಗ್ಗೆ 6.30ರಿಂದ ಕಾಕಡಾರತಿ, ಜಲಾಭಿಷೇಕ, ಪುಷ್ಪಾರ್ಚನೆ, ಹಿರಣ್ಯಾಭಿಷೇಕ, ಪ್ರಾಕರೋತ್ಸವ, ಶೋಡಶೋಪಚಾರ ಪೂಜೆಯನ್ನು ಏರ್ಪಡಿಸಲಾಗಿದೆ.



ಮೈಸೂರು ಜಿಲ್ಲಾಡಳಿತದಿಂದ ರಂಗಭೂಮಿ ಕಲಾವಿದ ಕನ್ನೇಗೌಡನಕೊಪ್ಪಲಿನ ಡಿ.ಕೆಂಚೇಗೌಡ ಅವರಿಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಗೌರವಿಸಲಾಯಿತು. ಈ ವೇಳೆ ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ ಕಾವಲು ಪಡೆ ರಾಜ್ಯಾಧ್ಯಕ್ಷ ಮೋಹನ್‌ಕುಮಾರ್‌ಗೌಡ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದರಾಜು, ಮೈಸೂರು ನಗರ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ದೇವರಾಜ್ ಇನ್ನಿತರರಿದ್ದರು.

ಒಕ್ಕಲಿಗ ಸಮಾಜದ ಮೀಸಲಾತಿ ಹೆಚ್ಚಳದ ಬೇಡಿಕೆ; ಇಂಡಿಯನ್ ನ್ಯೂ ಕಾಂಗ್ರೆಸ್ ಬೆಂಬಲ

ಮೈಸೂರು,ನ.3(ಪಿಎಂ)– ಒಕ್ಕಲಿಗ ಸಮುದಾಯದ ಮೀಸಲಾತಿಯನ್ನು ಶೇ.4ರಿಂದ 12ಕ್ಕೆ ಹೆಚ್ಚಿಸಬೇಕೆಂಬ ಬೇಡಿಕೆಯನ್ನು ಇಂಡಿಯನ್ ನ್ಯೂ ಕಾಂಗ್ರೆಸ್ ಪಕ್ಷ ಬೆಂಬಲಿಸಲಿದೆ ಎಂದು ಪಕ್ಷದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿ ಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾ ನಂದನಾಥ ಸ್ವಾಮೀಜಿ ಅವರು ಇತ್ತೀಚೆಗಷ್ಟೇ ಒಕ್ಕಲಿಗ ಸಮುದಾಯ ಮೀಸಲಾತಿ ಹೋರಾಟಕ್ಕೆ ಸಜ್ಜಾಗುವಂತೆ ಕರೆ ನೀಡಿದ್ದಾರೆ. ನಮ್ಮ ಪಕ್ಷ ಶ್ರೀಗಳ ನೇತೃತ್ವದ ಈ ಹೋರಾಟಕ್ಕೆ ಬೆಂಬಲ ನೀಡಲಿದೆ. ಜೊತೆಗೆ ಪಕ್ಷದಿಂದಲೂ ಹೋರಾಟ ನಡೆಸಲಾಗುವುದು ಎಂದರು. ಬ್ರಿಟನ್ ಪ್ರಧಾನಿಯಾಗಿ ಆಯ್ಕೆಯಾದ ಭಾರತ ಮೂಲದ ರಿಷಿ ಸುನಕ್ ಅವರಿಗೆ ಭಾರತೀಯರ ಪರವಾಗಿ ಪಕ್ಷದಿಂದ ಅಭಿನಂದನೆ ಸಲ್ಲಿಸುತ್ತೇನೆ. ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಸ್ವಾಗತಾರ್ಹ ಎಂದು ಹೇಳಿದರು. ಪಕ್ಷದ ಸಂಘಟನಾ ಕಾರ್ಯದರ್ಶಿ ಆರ್.ಮಹೇಶ್ ಗೋಷ್ಠಿಯಲ್ಲಿದ್ದರು.



ಮೈಸೂರಿನ ವಾರ್ಡ್ ನಂ.6ರ ಅರ್ಹ ಫಲಾನುಭವಿಗಳಿಗೆ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ವೃದ್ಧಾಪ್ಯವೇತನ, ಅಂಗವಿಕಲ ವೇತನ, ವಿಧವಾ ವೇತನ ಮಂಜೂರಾತಿ ಪತ್ರಗಳನ್ನು ಹಸ್ತಾಂತರಿಸಿದರು. ಚಿತ್ರದಲ್ಲಿ ಫಲಾನುಭವಿಗಳನ್ನು ಕಾಣಬಹುದು.

ಇಂದು ಜನ ಸಂಪರ್ಕ ಸಭೆ

ಮೈಸೂರು, ನ.3– ಚೆಸ್ಕಾಂ ವತಿಯಿಂದ ನ.4ರಂದು ಬೆಳಿಗ್ಗೆ 11 ಗಂಟೆಗೆ ಅಧೀಕ್ಷಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಪಿರಿಯಾಪಟ್ಟಣ ಕಾರ್ಯ ಮತ್ತು ಪಾಲನಾ ಉಪವಿಭಾಗ ಕಚೇರಿ ಆವರಣದಲ್ಲಿ ಜನಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.


ನಿಧನ



ಶ್ರೀಮತಿ ನೀಲಮ್ಮ

ಮೈಸೂರು, ನ.3– ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದ ನಿವಾಸಿ ಶ್ರೀಮತಿ ನೀಲಮ್ಮ (50) ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಪತಿ ಸಿದ್ದರಾಜು, ಮಕ್ಕಳಾದ ಶಶಿ, ಜ್ಯೋತಿ, ಸುಮಿತ್ರಾ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಗುರುವಾರ ಸಂಜೆ ಹಂಗಳ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಬ್ಬಯ್ಯ



ಮೈಸೂರು, ನ.3– ಮೈಸೂರಿನ ಸಿದ್ಧಾರ್ಥನಗರದ ನಿವಾಸಿ ಹಾಗೂ ನಿವೃತ್ತ ಜಿಲ್ಲಾ ನೋಂದಾಣಾಧಿಕಾರಿ ಸುಬ್ಬಯ್ಯ (80) ಅವರು ಗುರುವಾರ ಬೆಳಗ್ಗೆ ಗೋಪಾಲಗೌಡ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ ಸುಶೀಲ, ಪುತ್ರರಾದ ಸುದರ್ಶನ್, ದಿನಕರ್ ಹಾಗೂ ಪುತ್ರಿ ಶೋಭರಾಣಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಸಂಜೆ 5.30ಕ್ಕೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.



ಟಿ.ನರಸಿಂಹಮೂರ್ತಿ

ಮೈಸೂರು, ನ.3– ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ನಿವೃತ್ತ ಚೀಫ್ ಮ್ಯಾನೇಜರ್ ಹಾಗೂ ಮೈಸೂರು ವಿಜಯನಗರ 2ನೇ ಹಂತದ ನಿವಾಸಿ ಟಿ.ನರಸಿಂಹಮೂರ್ತಿ(73) ಅವರು ಇಂದು ನಿಧನರಾದರು.

ಇವರು ಪತ್ನಿ ಅನಸೂಯ, ಪುತ್ರ ಡೀಪ್ ದರ್ಶನ್ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಮಧ್ಯಾಹ್ನ 1 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲ ತಿಳಿಸಿದೆ.

ಪಿಯು ವಿದ್ಯಾರ್ಥಿಗಳ ಯುವ ಸಂಸತ್ ಅಣಕು ಸ್ಪರ್ಧೆ; ತಾಲೂಕು ಮಟ್ಟದಲ್ಲಿ ನಡೆದ ಸ್ಪರ್ಧೆಯಲ್ಲಿ

ಅನುದಾನಿತ ಕಾಲೇಜುಗಳ 12 ಮಂದಿ ಜಿಲ್ಲಾ ಮಟ್ಟಕ್ಕೆ ಆಯ್ಕೆ

ಮೈಸೂರು,ನ.3(ಪಿಎಂ)– ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣ ಬೆಳೆಸಲು ಹಾಗೂ ಸಂಸತ್ ಕಾರ್ಯಕಲಾಪಗಳ ಬಗ್ಗೆ ಜ್ಞಾನ ನೀಡುವ ಉದ್ದೇಶ ಹೊಂದಿರುವ 'ಯುವ ಸಂಸತ್ ಅಣಕು ಸ್ಪರ್ಧೆ' ಮೈಸೂರಿನ ಶ್ರೀ ವಾಣಿವಿಲಾಸ ಅರಸು ಬಾಲಿಕಾ ಪದವಿಪೂರ್ವ ಕಾಲೇಜಿನಲ್ಲಿ ಗುರುವಾರ ನಡೆಯಿತು.

ಸಂಸದೀಯ ವ್ಯವಹಾರಗಳ ಇಲಾಖೆ ಹಾಗೂ ಪದವಿಪೂರ್ವ ಶಿಕ್ಷಣ ಇಲಾಖೆ ಜಂಟಿ ಆಶ್ರಯದಲ್ಲಿ ಮೈಸೂರು ತಾಲೂಕು ಮಟ್ಟದಲ್ಲಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ ಈ ಸ್ಪರ್ಧೆ ನಡೆಯಿತು. ಚಾಲನೆ ನೀಡಿದ ಪದವಿಪೂರ್ವ ಶಿಕ್ಷಣ ಇಲಾಖೆ ಪ್ರಭಾರ ಉಪನಿರ್ದೇಶಕಿ ಎಂ.ಪಿ.ನಾಗಮ್ಮ ಮಾತನಾಡಿ, ಯುವ ಜನತೆಯಲ್ಲಿ ನಾಯಕತ್ವ ಗುಣ ಬೆಳೆಸುವುದು ಯುವ ಸಂಸತ್ ಅಣಕು ಸ್ಪರ್ಧೆಯ ಉದ್ದೇಶ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಮಗಿರುವ ಹಕ್ಕು–ಬಾಧ್ಯತೆ ಹಾಗೂ ಸರ್ಕಾರದ ಕಾರ್ಯವೈಖರಿಯ ಸ್ವರೂಪದ ಬಗ್ಗೆ ತಿಳಿದುಕೊಳ್ಳಲು ಈ ಸ್ಪರ್ಧೆಯು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲಿದೆ ಎಂದು ಹೇಳಿದರು.

ಸಂಸತ್ ಕಲಾಪಗಳನ್ನು ದೂರದರ್ಶನದಲ್ಲಿ ನೋಡಿದ್ದೇವೆ. ವಿರೋಧ ಅಥವಾ ವಿಮರ್ಶೆ ಇದ್ದಾಗಲೇ ನಾವು ಉತ್ತಮರಾಗಲು ಸಾಧ್ಯ. ಈ ನಿಟ್ಟಿನಲ್ಲಿ ಸರ್ಕಾರವೊಂದು ಉತ್ತಮ ಆಡಳಿತ ನೀಡಲು ವಿರೋಧ ಪಕ್ಷದ ಪಾತ್ರ ಮಹತ್ವದ್ದಾಗಲಿದೆ. ಬಂಡೆಯೊಂದಕ್ಕೆ ನೂರಾರು ಹುಳಿ ಪೆಟ್ಟು ಬಿದ್ದಾಗಲೇ ಅದೊಂದು ಸುಂದರ ಶಿಲ್ಪವಾಗಲು ಸಾಧ್ಯ. ತನ್ಮೂಲಕ ಅದೊಂದು ಸಂಸ್ಕೃತಿಯ ಪ್ರತೀಕವಾಗಲಿದೆ. ಅಂತೆಯೇ ಆಡಳಿತ ಪಕ್ಷದ ನ್ಯೂನತೆಗಳನ್ನು ವಿರೋಧ ಪಕ್ಷಗಳು ಎತ್ತಿಹಿಡಿಯುವ ಕೆಲಸ ಮಾಡಬೇಕಾಗುತ್ತದೆ. ಇಂತಹ ಹತ್ತು ಹಲವು ವಿಚಾರಗಳ ಬಗ್ಗೆ ಈ ಸ್ಪರ್ಧೆ ಬೆಳಕು ಚೆಲ್ಲಲಿದ್ದು, ವಿದ್ಯಾರ್ಥಿಗಳು ಹೆಚ್ಚು ಪ್ರಜ್ಞಾವಂತರಾಗಲು ನೆರವಾಗಲಿದೆ ಎಂದರು.



ಶ್ರೀ ವಾಣಿವಿಲಾಸ ಅರಸು ಬಾಲಿಕಾ ಪಿಯು ಕಾಲೇಜಿನಲ್ಲಿ ಗುರುವಾರ ಅನುದಾನಿತ ಪಿಯು ಕಾಲೇಜುಗಳ ತಾಲೂಕು ಮಟ್ಟದ ಯುವ ಸಂಸತ್ ಅಣಕು ಸ್ಪರ್ಧೆ ನಡೆಯಿತು.

ಶ್ರೀ ವಾಣಿವಿಲಾಸ ಅರಸು ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಮತ್ತು ಆಡಳಿತ ವಿಭಾಗದ ಅಧ್ಯಕ್ಷ ಸಿದ್ದಪ್ಪ ಮಾತನಾಡಿ, ಕಳೆದ 2 ದಶಕಗಳ ಅವಧಿಯಲ್ಲಿ ಭಾರತೀಯ ಸಂಸದೀಯ ವ್ಯವಹಾರಗಳು ಸ್ಥಿತಿಗತಿ ಅವಲೋಕಿಸಿದರೆ ಸಂಸತ್ ಕಲಾಪಗಳು ಹಲವು ಬಾರಿ ಹಾದಿ ಬೀದಿ ರಂಪವಾದಂತೆ ನಡೆದಿವೆ. ಆದರೆ ಬಹಳ ಹಿಂದೆ ಸಂಸತ್ ಕಲಾಪಗಳು ನಡೆಯುವಾಗ ಪ್ರತಿಯೊಬ್ಬ ಸಂಸತ್ ಸದಸ್ಯರು ರಚನಾತ್ಮಕ ಸಲಹೆಗಳನ್ನು ನೀಡುತ್ತಿದ್ದರು. ಆದರೆ ಇಂದು ಸಂಸತ್ ಕಲಾಪದಲ್ಲಿ ಅಂತಹ ಮೌಲ್ಯಗಳು ಕುಸಿಯುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಎಕನಾಮಿಕ್ ಇಂಟೆಲಿಜೆನ್ಸ್ ಯುನಿಟ್ (ಇಐಯು) ವರದಿಯಂತೆ 2020ನೇ ಸಾಲಿನಲ್ಲಿ ಜಾಗತಿಕ ಪ್ರಜಾ ಪ್ರಭುತ್ವದ ಸೂಚ್ಯಂಕದ 167 ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 53ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ. ಇದು ಅತ್ಯಂತ ಬೇಸರದ ಸಂಗತಿ. ಪ್ರಜಾಪ್ರಭುತ್ವದ ಮೌಲ್ಯಗಳು ಭಾರತದಲ್ಲಿ ಕಡಿಮೆ ಯಾಗುತ್ತಿದ್ದು, ಅತ್ಯುತ್ತಮ ಸಂವಿಧಾನ ಇದ್ದರೂ ಅದರ ಆಶಯಗಳನ್ನು ಆಡಳಿತ ನಡೆಸುವ ನಾಯಕರು ಮತ್ತು ಪ್ರಜೆಗಳು ಇಬ್ಬರೂ ಪಾಲಿಸದಿರುವುದು ದೊಡ್ಡ ದುರಂತ ಎಂದು ಹೇಳಿದರು.

ಪ್ರಸ್ತುತ ಲೋಕಸಭೆಯಲ್ಲಿ ಯುವ ಜನತೆ ಪ್ರಾತಿನಿಧ್ಯ ಶೇ.12ರಷ್ಟು ಮಾತ್ರ. ಜೊತೆಗೆ ಲಿಂಗ ತಾರತಮ್ಯವನ್ನೂ ಕಾಣಬಹುದು. 543 ಸದಸ್ಯರಲ್ಲಿ ಕೇವಲ 78 ಮಂದಿ ಮಾತ್ರ ಮಹಿಳಾ ಸದಸ್ಯರಿದ್ದಾರೆ. ಬ್ರಿಟನ್ ಪ್ರಧಾನಿಯಾಗಿ ಭಾರತ ಮೂಲದ ರಿಷಿ ಸುನಕ್ ಆಯ್ಕೆಯಾಗಿದ್ದಾರೆ. ಅಲ್ಲಿನ ಕಲಾಪಗಳಲ್ಲಿ ಆಡಳಿತ ಪಕ್ಷದವರು ಹೇಳುವುದನ್ನು ವಿಪಕ್ಷದವರು ಸಂಯಮದಿಂದ ಆಲಿಸಿ ರಚನಾತ್ಮಕವಾದ ಟೀಕೆ ಮಾಡುತ್ತಾರೆ. ಅಲ್ಲದೆ, ಸೂಕ್ತ ಸಲಹೆಗಳನ್ನು ನೀಡುತ್ತಾರೆ. ಆದರೆ ನಮ್ಮಲ್ಲಿ ಪ್ರಸ್ತುತ ಅಂತಹ ಸನ್ನಿವೇಶ ತೀರಾ ಕಡಿಮೆ ಎಂದರು. ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್ ಗೌರವ ಕಾರ್ಯದರ್ಶಿ ಮಹೇಶ್ ಎನ್.ಅರಸ್, ಟ್ರಸ್ಟಿ ಬಾಲಚಂದ್ರ ಅರಸ್, ಶ್ರೀ ವಾಣಿವಿಲಾಸ ಅರಸು ಬಾಲಿಕಾ ಪಿಯು ಕಾಲೇಜಿನ ಪ್ರಾಂಶುಪಾಲರಾದ ಜೆ.ಸಿ.ಅನಿತಾ ಮತ್ತಿತರರು ಹಾಜರಿದ್ದರು.

ಒಟ್ಟು 36 ಮಂದಿ ಜಿಲ್ಲಾ ಮಟ್ಟದಲ್ಲಿ ಮೈಸೂರು ತಾಲೂಕು ಪ್ರತಿನಿಧಿಸುವರು...

ಮೈಸೂರು ನಗರದ 21 ಅನುದಾನಿತ ಪಿಯು ಕಾಲೇಜುಗಳಿಂದ ತಲಾ ಇಬ್ಬರಂತೆ 42 ವಿದ್ಯಾರ್ಥಿಗಳು ಹಾಗೂ ನಮ್ಮ ಕಾಲೇಜಿನಿಂದ 8 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 50 ವಿದ್ಯಾರ್ಥಿ–ವಿದ್ಯಾರ್ಥಿನಿಯರು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಹೆಚ್ಚಿನ ವಿದ್ಯಾರ್ಥಿಗಳು ಅಗತ್ಯವಿದ್ದ ಹಿನ್ನೆಲೆಯಲ್ಲಿ ನಮ್ಮ ಕಾಲೇಜಿನಿಂದ 8 ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗಿತ್ತು. ಈ ಪೈಕಿ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಮೈಸೂರು ತಾಲೂಕು ಪ್ರತಿನಿಧಿಸಲು 12 ಮಂದಿ ಆಯ್ಕೆಯಾಗಿದ್ದಾರೆ ಎಂದು ಸ್ಪರ್ಧೆಯ ಸಂಚಾಲಕಿ, ಶ್ರೀ ವಾಣಿವಿಲಾಸ ಅರಸು ಬಾಲಿಕಾ ಪಿಯು ಕಾಲೇಜಿನ ರಾಜ್ಯಶಾಸ್ತ್ರ ಅಧ್ಯಾಪಕಿ ಟಿ.ಕೆ. ಹೇಮಲತಾ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಮ್ಮಲ್ಲಿ ಅನುದಾನಿತ ಪಿಯು ಕಾಲೇಜುಗಳ ವಿದ್ಯಾರ್ಥಿಗಳಿಗೆ ಸ್ಪರ್ಧೆ ನಡೆದಿದೆ. ಅಂತೆಯೇ ಚಾಮರಾಜ ಜೋಡಿ ರಸ್ತೆಯ ಸರ್ಕಾರಿ ಪಿಯು ಕಾಲೇಜಿನಲ್ಲಿ ಖಾಸಗಿ ಪಿಯು ಕಾಲೇಜುಗಳು ಹಾಗೂ ಲಕ್ಷ್ಮೀಪುರಂನ ಸರ್ಕಾರಿ ಪಿಯು ಕಾಲೇಜಿನಲ್ಲಿ ಸರ್ಕಾರಿ ಪಿಯು ಕಾಲೇಜುಗಳ ವಿದ್ಯಾರ್ಥಿಗಳಿಗೆ ಇಂದು ತಾಲೂಕು ಮಟ್ಟದ ಸ್ಪರ್ಧೆ ನಡೆಸಲಾಗಿದೆ. ಈ ಮೂರು ಕಡೆಗಳಿಂದ ಒಟ್ಟು 36 ಮಂದಿ ಜಿಲ್ಲಾ ಮಟ್ಟದಲ್ಲಿ ಮೈಸೂರು ತಾಲೂಕು ಪ್ರತಿನಿಧಿಸಲಿದ್ದಾರೆ. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲೂ ಈ ಸ್ಪರ್ಧೆ ನಡೆಯಲಿದೆ ಎಂದು ವಿವರಿಸಿದರು.

ವಿದ್ಯಾರ್ಥಿವೇತನ ಬಿಡುಗಡೆಗೆ ಆಗ್ರಹಿಸಿ ಎಬಿವಿಪಿ ನೇತೃತ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ

ಮೈಸೂರು,ನ.3(ಪಿಎಂ)– ಪದವಿ ವಿದ್ಯಾರ್ಥಿಗಳ 2021–22ನೇ ಸಾಲಿನ ಶೈಕ್ಷಣಿಕ ವರ್ಷದ ಬಾಕಿ ಇರುವ ವಿದ್ಯಾರ್ಥಿ ವೇತನ ಕೂಡಲೇ ಬಿಡುಗಡೆ ಮಾಡಬೇಕು ಹಾಗೂ 'ಏಕೀಕೃತ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ (ಯುಯುಸಿಎಂಎಸ್)' ತಂತ್ರಾಂಶ ದೋಷ ಸರಿಪಡಿಸಬೇಕೆಂದು ಒತ್ತಾಯಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನೇತೃತ್ವದಲ್ಲಿ ಕಾಲೇಜು ವಿದ್ಯಾರ್ಥಿಗಳು ಗುರುವಾರ ಪ್ರತಿಭಟನೆ ನಡೆಸಿದರು.



ಮೈಸೂರು ಡಿಸಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಲಕ್ಷಾಂತರ ಎಸ್‌ಸಿ–ಎಸ್‌ಟಿ ಸಮುದಾಯದ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳು ಪ್ರತಿ ವರ್ಷ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿ ತಮ್ಮ ಶಿಕ್ಷಣಕ್ಕೆ ವಿದ್ಯಾರ್ಥಿವೇತನದ ಹಣವನ್ನು ಪೂರಕವಾಗಿ ಬಳಸಿಕೊಳ್ಳುತ್ತಿದ್ದರು. ಆದರೆ ಈ ಬಾರಿ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅರ್ಜಿಯನ್ನು ಸಲ್ಲಿಸಿದ ನಂತರ ಈ ತಂತ್ರಾಂಶದಲ್ಲಿ ವಿದ್ಯಾರ್ಥಿ ವೇತನ ಬಿಡುಗಡೆ ಆಗಿರುವುದಾಗಿ ನಮೂದಿಸಲಾಗಿದೆ. ಆದರೆ ಬಹುತೇಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ದೊರೆತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರ ಈ ಕೂಡಲೇ ಬಾಕಿ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಬೇಕು ಹಾಗೂ ಈ ವಿದ್ಯಾರ್ಥಿವೇತನದಲ್ಲಿ ಅವ್ಯವಹಾರ ನಡೆದಿರುವ ಆರೋಪ ಕೇಳಿ ಬಂದಿದ್ದು, ಈ ಸಂಬಂಧ ಸೂಕ್ತ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು. ಎನ್‌ಇಪಿ ಜಾರಿಯಾದ ನಂತರ ಎಲ್ಲಾ ವಿಶ್ವವಿದ್ಯಾನಿಲಯಗಳು ಯುಯುಸಿಎಂಎಸ್ ತಂತ್ರಾಂಶ ಬಳಸಿ, ದಾಖಲಾತಿಯಿಂದ ಫಲಿತಾಂಶದವರೆಗೆ ಎಲ್ಲಾ ರೀತಿ ಮಾಹಿತಿಗಳನ್ನು ಇದರ ಮೂಲಕವೇ ನಮೂದಿಸುವ ವ್ಯವಸ್ಥೆ ಜಾರಿ ಮಾಡಲಾಗಿದೆ. ಆದರೆ ಈ ತಂತ್ರಾಂಶದಲ್ಲಿರುವ ಕೆಲವು ಸಮಸ್ಯೆಗಳಿಂದ ಹಾಸ್ಟೆಲ್‌ಗೆ ಅರ್ಜಿ ಸಲ್ಲಿಸಲು, ಬೇರೆ ಕಾಲೇಜಿಗೆ ವರ್ಗಾವಣೆ ಪಡೆಯಲು ಹಾಗೂ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ತೊಂದರೆ ಉಂಟಾಗಿದೆ ಎಂದು ಕಿಡಿಕಾರಿದರು. ಎಬಿವಿಪಿ ಜಿಲ್ಲಾ ಸಂಚಾಲಕ ಎಂ.ಶಿವು, ಸಂಘಟನೆ ಮುಖಂಡರಾದ ದಿನೇಶ್, ಚಂದ್ರಶೇಖರ್, ನಮ್ರತಾ, ನಿಶ್ಚಿತಾ, ಆದರ್ಶ ಸೇರಿದಂತೆ ವಿವಿಧ ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸರ್ಕಾರಿ ನೌಕರರ ಸಂಘದಿಂದ ಇಂದು ಕನ್ನಡ ರಾಜ್ಯೋತ್ಸವ

ನೌಕರರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು,ನ.3(ಎಂಟಿವೈ)– ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ನಾಳೆ(ನ.4) ಸಂಜೆ 4 ಗಂಟೆಗೆ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ಕನ್ನಡ ರಾಜ್ಯೋತ್ಸವ ಹಾಗೂ ಜಿಲ್ಲೆಯ ಸರ್ಕಾರಿ ನೌಕರರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ. ಗೋವಿಂದರಾಜು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದ್ದು, ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 90ಕ್ಕಿಂತ ಹೆಚ್ಚು ಅಂಕ ಪಡೆದ ಸುಮಾರು 291 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಕಾರ್ಯಕ್ರಮದಲ್ಲಿ ಸದ್ಯದಲ್ಲೇ ನಿವೃತ್ತಿ ಹೊಂದಲಿರುವ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅವರನ್ನು ಅಭಿನಂದಿಸಲಾಗುವುದು. ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸಲಿದ್ದು, ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಎಂ.ಎಲ್.ರಘುನಾಥ್ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ, ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ರೇವಣ್ಣ, ರಮೇಶ್‌ಕುಮಾರ್, ವಿಶ್ವನಾಥ್ ಇದ್ದರು.

ನಾಳೆ ತಾಪಂ ಕೆಡಿಪಿ ಸಭೆ

ಮೈಸೂರು,ನ.3–ಮೈಸೂರು ತಾಲೂಕು ಪಂಚಾಯಿತಿ ಕಚೇರಿಯಲ್ಲಿ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನ.5ರಂದು ಶನಿವಾರ ಬೆಳಗ್ಗೆ 10.30 ಗಂಟೆಗೆ ತಾಪಂ ಸಭಾಂಗಣದಲ್ಲಿ ಕೆ.ಡಿ.ಪಿ ಸಭೆಯನ್ನು ಕರೆಯಲಾಗಿದ್ದು, ಸಭೆಗೆ ತಾಲೂಕು ಮಟ್ಟದ ಅಧಿಕಾರಿಗಳು ಅಕ್ಟೋಬರ್ ತಿಂಗಳ ಪ್ರಗತಿ ವರದಿಯೊಂದಿಗೆ ಹಾಜರಾಗಬೇಕೆಂದು ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

4.11.2022 ಶುಕ್ರವಾರ, ಮಳೆ ನಕ್ಷತ್ರ: ಸ್ವಾತಿ, 24.10.2022ರಿಂದ 07.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಪೂಭಾ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಆರ್ಯ ಈಡಿಗರ ಸಂಘ:** ವಿಜಯನಗರ 3ನೇ ಹಂತದಲ್ಲಿ ನಿರ್ಮಾಣವಾಗಿರುವ ನೂತನ ವಿದ್ಯಾರ್ಥಿನಿಲಯ ಕಟ್ಟಡ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಾನ್ನಿಧ್ಯ: ಸೋಲೂರು ರೇಣುಕಾ ಪೀಠದ ಪೀಠಾಧಿಪತಿ ಶ್ರೀ ವಿಖ್ಯಾತಾನಂದ ಸ್ವಾಮೀಜಿ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಡಾ.ಎಂ.ಕೆ.ಪೋತರಾಜ್, ಮುಖ್ಯ ಅತಿಥಿಗಳು: ಮಾಜಿ ಸಿಎಂ ಸಿದ್ದರಾಮಯ್ಯ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಸಚಿವ ರಾದ ಎಸ್.ಟಿ.ಸೋಮಶೇಖರ್, ಕೋಟ ಶ್ರೀನಿವಾಸ ಪೂಜಾರಿ, ಸುನೀಲ್‌ಕುಮಾರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ.ರಾಮದಾಸ್, ಎಲ್. ನಾಗೇಂದ್ರ, ಮೇಯರ್ ಶಿವಕುಮಾರ್, ಸ್ಥಳ: ಮೈಸೂರು ವಿಜಯನಗರ 3ನೇ ಹಂತ ಸಪ್ತಮಾತೃಕಾ ದೇವಸ್ಥಾನದ ಎದುರು, ಬೆಳಗ್ಗೆ 10.15ಕ್ಕೆ.

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್:** ರಾಜ್ಯೋತ್ಸವ ಪ್ರಯುಕ್ತ ಕನ್ನಡ ಪುಸ್ತಕಗಳ ಮೇಲೆ ಶೇ.15ರಿಂದ 20ರವರೆಗೆ ವಿಶೇಷ ರಿಯಾಯಿತಿ, ಸ್ಥಳ: ರಾಮಸ್ವಾಮಿ ಸರ್ಕಲ್, ಬೆಳಗ್ಗೆ 9.30ರಿಂದ ರಾತ್ರಿ 8ರವರೆಗೆ

■ **ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ, ಮಹಾರಾಣಿ ಮಹಿಳಾ ಕಲಾ ಕಾಲೇಜು :** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ನಂಜಯ್ಯ ಎಂ.ಹೊಂಗನೂರು, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಪ್ರೊ. ಶ್ರೀನಿವಾಸ, ಡಾ.ಭಾರತೀದೇವಿ ಅವರಿಂದ ಮಹಿಳಾ ಸಾಹಿತ್ಯ ಮೀಮಾಂಸೆ ಕುರಿತು ಉಪನ್ಯಾಸ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮಹಾಜನ ವಿದ್ಯಾಸಂಸ್ಥೆ :** ಕನ್ನಡ ರಾಜ್ಯೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ಸಂತ ಫಿಲೋಮಿನಾ ಕಾಲೇಜು ನಿವೃತ್ತ ಪ್ರಾಂಶುಪಾಲ ಪ್ರೊ. ಎಂ. ಕೃಷ್ಣೇಗೌಡ, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮಿ ಮುರಳೀಧರ್, ಉಪಸ್ಥಿತರು : ಸಂಸ್ಥೆ ಅಧ್ಯಕ್ಷ ಮುರಳೀಧರ್ ಭಾಗವತ್, ಆಡಳಿತಾಧಿಕಾರಿ ಪ್ರೊ. ಪಿ. ಸರೋಜಮ್ಮ, ಸ್ಥಳ: ವಿವೇಕಾನಂದ ಸಭಾಂಗಣ, ಮಧ್ಯಾಹ್ನ 3.30ಕ್ಕೆ

■ **ರಾಜ್ಯ ಸರ್ಕಾರಿ ನೌಕರರ ಸಂಘ:** ಕನ್ನಡ ರಾಜ್ಯೋತ್ಸವ, ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ತಾಯಿ ಭುವನೇಶ್ವರಿಗೆ ಪುಷ್ಪಾರ್ಚನೆ: ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶ ಎಂ.ಎಲ್.ರಘುನಾಥ್, ಅಧ್ಯಕ್ಷತೆ: ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು, ಉಪಸ್ಥಿತರು: ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ, ಮೈಸೂರು ವಿವಿ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಶಾಸಕರಾದ ಎಲ್.ನಾಗೇಂದ್ರ, ಡಾ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಸ್ಥಳ: ಸೆನೆಟ್ ಭವನ, ಮಾನಸಗಂಗೋತ್ರಿ, ಸಂಜೆ 4ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ:** ವಿಶಿಖಾನುಪ್ರವೇಶ ಪದವಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ನವದೆಹಲಿಯ ನ್ಯಾಷನಲ್ ಕಮೀಷನ್ ಫಾರ್ ಇಂಡಿಯನ್ ಸಿಸ್ಟಮ್ ಆಫ್ ಮೆಡಿಸನ್ ಅಧ್ಯಕ್ಷ ಡಾ.ಬಿ.ಎಸ್.ಪ್ರಸಾದ್, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಉಪಸ್ಥಿತರು: ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಪ್ರಾಂಶುಪಾಲ ಡಾ. ಸರ್ಬೇಶ್ವರ್‌ಕರ್, ಸ್ಥಳ: ಮಹಾವಿದ್ಯಾಲಯ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಸಂಜೆ 4ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.10 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ–ಪ್ರೊ.ಎನ್.ವೆಂಕೋಬರಾವ್, 6.40 ಅರಿವಿನ ಶಿಖರ, ಗಾಯನ–ಸಿ.ವಿಶ್ವನಾಥ್, ಬಿ. ಶ್ರೀರಾಂ ಭಟ್, ವ್ಯಾಖ್ಯಾನ–ಡಾ.ಮ.ರಾಮಕೃಷ್ಣ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಎಂ.ಡಿ.ಸುಮತಿ ಮುರಾರಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಜಿ.ಪುಷ್ಪಲತಾ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ ಸಾಹಿತ್ಯ ಮತ್ತು ನಿರೂಪಣೆ–ಪ್ರೊ.ಆರ್.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 4.00 ಮಹಿಳಾರಂಗ–ಸಖೀ ಪದ, ಪ್ರಸ್ತುತಿ–ಕೆ.ಬಿ.ಮೀನಾ, ಕೈಗನ್ನಡಿ, ಪ್ರಸ್ತುತಿ–ನಿಶಿತಾ ಕೃಷ್ಣಸ್ವಾಮಿ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ–ಕಿಸಾನ್‌ವಾಣಿ–ಮಿಶ್ರ ಕೃಷಿಯಲ್ಲಿನ ಅನುಭವ ಕುರಿತು ಕೃಷಿಕ ಪಿ ಚಂದ್ರಕುಮಾರ್ ಅವರೊಂದಿಗೆ ಮಾತುಕತೆ, 7.45 ಮತದಾತ ಜಂಕ್ಷನ್–ಭಾರತ ಚುನಾವಣಾ ಅಯೋಗದ ಪ್ರಾಯೋಜಿತ ಕಾರ್ಯಕ್ರಮ, 10.00 ರಂಗಗೀತೆಗಳು–ಸಂಪೂರ್ಣ ರಾಮಾಯಣ ನಾಟಕದ ಹಾಡು, 10.30 ಸವಿನೆನಪು

■ **ಗ್ರೇಟ್ ಬಾಂಬೆ ಸರ್ಕಸ್ :** ಮೂರು ಪ್ರದರ್ಶನಗಳು, ಸ್ಥಳ: ಮೈಸೂರು ಮೃಗಾಲಯ ಹಿಂಭಾಗ, ಕಾರಂಜಿ ಕೆರೆ ಹತ್ತಿರ, ಮಧ್ಯಾಹ್ನ 1, 4 ಮತ್ತು 7 ಗಂಟೆಗೆ.

■ **ಇನ್ಫೋಸಿಸ್ ಪ್ರತಿಷ್ಠಾನ, ಬೆಂಗಳೂರು, ಭಾರತೀಯ ವಿದ್ಯಾಭವನ, ಬೆಂಗಳೂರು–ಮೈಸೂರು :** ಸಂಜೆ 5.30ಕ್ಕೆ ಸಾಂಸ್ಕೃತಿಕ ಉತ್ಸವ 'ಭಾರತೀಯ ಹಬ್ಬಗಳು' ಉದ್ಘಾಟನೆ : ಇನ್ಫೋಸಿಸ್ ಮೈಸೂರು ಮುಖ್ಯಸ್ಥ ಶಾಜಿ ಮ್ಯಾಥ್ಯೂ, ಮುಖ್ಯ ಅತಿಥಿಗಳು : ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಗೌರವ ಅತಿಥಿಗಳು : ಭಾರತೀಯ ವಿದ್ಯಾಭವನ ಗೌರವ ಕಾರ್ಯದರ್ಶಿ ಪಿ.ಎಸ್. ಗಣಪತಿ, ಅಧ್ಯಕ್ಷತೆ : ಭಾರತೀಯ ವಿದ್ಯಾಭವನ ಅಧ್ಯಕ್ಷ ಕೆ.ಬಿ. ಗಣಪತಿ, ಸಂಜೆ 6ಕ್ಕೆ ಶ್ರೀ ಗಣೇಶ ಯಕ್ಷಗಾನ ಗೊಂಬೆಯಾಟ ಮಂಡಲಿ ಅವರಿಂದ ಸೂತ್ರದ ಗೊಂಬೆ ಆಟ, ಪ್ರಸಂಗ : ಚೂಡಾಮಣಿ–ಲಂಕಾದಹನ, ನಿರ್ದೇಶನ : ಭಾಸ್ಕರ ಕೊಗ್ಗಾ ಕಾಮತ್, ಸ್ಥಳ: ಕಲಾಮಂದಿರ, ವಿನೋಬಾ ರಸ್ತೆ.

■ **ವಸುಂಧರಾ ಪ್ರದರ್ಶಕ ಕಲೆಗಳ ಕೇಂದ್ರ :** ವಸುಂಧರೋತ್ಸವ–2022, ಉದ್ಘಾಟನೆ : ಸಂಗೀತ ವಿಶ್ವವಿದ್ಯಾಲಯ ಉಪ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಮುಖ್ಯ ಅತಿಥಿಗಳು : ಸಂಗೀತ ಗಾಯಕಿ ಹೆಚ್.ಆರ್. ಲೀಲಾವತಿ, ರೋಟರಿ ಕ್ಲಬ್ ಆಫ್ ಮೈಸೂರು ನಾರ್ತ್ ಅಧ್ಯಕ್ಷ ಎಸ್.ಹೆಚ್. ಜಗದೀಶ್, ಅಧ್ಯಕ್ಷತೆ : ಕೇನ್ಸ್ ಟೆಕ್ನಾಲಜಿ ನಿರ್ದೇಶಕರಾದ ಶ್ರೀಮತಿ ಸವಿತಾ ರಮೇಶ್, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.

■ **ಗಾನಭಾರತೀ :** ವೀಣೆ ಶೇಷಣ್ಣನವರ ಸಂಸ್ಮರಣಾ ದಿನದ ಅಂಗವಾಗಿ ವಿದುಷಿ ಗೀತಾ ರಮಾನಂದ ಅವರಿಂದ ವೀಣಾವಾದನ, ವಿದ್ವಾನ್ ಅದಮ್ಯ –ಮೃದಂಗ, ವಿದ್ವಾನ್ ಜಿ.ಎಸ್. ರಾಮಾನುಜನ್–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** 45ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, ಶ್ರೀ ಸ್ವಾಮಿಗೆ ಬೆಣ್ಣೆ ಅಲಂಕಾರ, ವಿಶೇಷ ಹೂವಿನ ಅಲಂಕಾರ ಪೂಜೆ, ಬೆಳಗ್ಗೆ 10ಕ್ಕೆ ಉಚಿತ ಆರೋಗ್ಯ ತಪಾಸಣಾ ಶಿಬಿರ, ಮಧ್ಯಾಹ್ನ 1ಕ್ಕೆ ಮಹಾ ಅನ್ನಸಂತರ್ಪಣೆ, ಮಧ್ಯಾಹ್ನ 2ಕ್ಕೆ ಸರಸ್ವತಿಪುರಂ ಶಂಕರ ಸಭಾದವರಿಂದ ಭಜನಾ ಕಾರ್ಯಕ್ರಮ, ಸಂಜೆ 6ಕ್ಕೆ ಹಳ್ಳದಕೇರಿ ಶಿಲ್ಪ ಸುದೀಪ್ ಮತ್ತು ತಂಡದಿಂದ ಸಂಗೀತ ಸುಧಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ, ಸಂಜೆ 7 ಗಂಟೆಗೆ.

ಶ್ರೀ ಸುತ್ತೂರು ಕ್ಷೇತ್ರ

ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಅಪಾಯಕ್ಕೆ ಕಾದಿರುವ ಮ್ಯಾನ್‌ಹೋಲ್!

ಎರಡು ತಿಂಗಳಾದರೂ ಬಾಯ್ತೆರೆದಿರುವ ಮ್ಯಾನ್‌ಹೋಲ್ ಮುಚ್ಚದ ಪಾಲಿಕೆ ಅಧಿಕಾರಿಗಳು

ಮೈಸೂರು, ನ.3(ಎಂಕೆ)– ಮೈಸೂರಿನ ನಾಯ್ಡುನಗರ(ಹಳೇ ಕೆಸರೆ) ಜಂಕ್ಷನ್‌ನಲ್ಲಿ ಬಾಯ್ತೆರೆದಿರುವ ಮ್ಯಾನ್‌ಹೋಲ್ ನಿವಾಸಿಗಳು, ವಾಹನ ಚಾಲಕರು ಭಯದಲ್ಲೇ ತಿರುಗಾಡುವಂತೆ ಮಾಡಿದೆ.



ಕಳೆದ ಎರಡು ತಿಂಗಳಿಂದ ಮ್ಯಾನ್ ಹೋಲ್ ಬಾಯ್ತೆರೆದಿದ್ದು, ಪಾಲಿಕೆಯಿಂದ ಮ್ಯಾನ್‌ಹೋಲ್ ಮುಚ್ಚುವ ಅಥವಾ ದುರಸ್ಥಿಗೊಳಿಸುವ ಕಾರ್ಯವಾಗಿಲ್ಲ. ಸುತ್ತಲೂ ಮನೆಗಳಿದ್ದು, ಮಕ್ಕಳು ಓಡಾಡದಂತಾಗಿದೆ ಎಂದು ಸ್ಥಳೀಯ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಜಂಕ್ಷನ್ ಸುತ್ತಲೂ ಮನೆಗಳಿವೆ. ಪ್ರತಿನಿತ್ಯ ಸಾವಿರಾರು ಜನರು ತಿರುಗಾಡುತ್ತಾರೆ. ನೂರಾರು ವಾಹಗಳು ಸಂಚರಿಸುತ್ತವೆ. ಗುಂಡಿಬಿದ್ದ ಮ್ಯಾನ್‌ಹೋಲ್ ನೋಡಿಕೊಂಡು ಸಂಬಂಧಪಟ್ಟ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಅಲ್ಲಿಯೇ ತಿರುಗಾಡುತ್ತಿದ್ದಾರೆಯೇ ಹೊರತು ಸರಿಪಡಿಸುವ ಯೋಚನೆ ಮಾಡಿಲ್ಲ ಎಂದು ನಿವಾಸಿಗಳು ಕಿಡಿಕಾರಿದ್ದಾರೆ. ಈಗಾಗಲೇ ಕೆಲವರು ರಾತ್ರಿ ವೇಳೆ ಮ್ಯಾನ್‌ಹೋಲ್‌ನಲ್ಲಿ ಬಿದ್ದು ಕೈ–ಕಾಲಿಗೆ ಗಾಯ ಮಾಡಿಕೊಂಡಿದ್ದಾರೆ. ಆಕಸ್ಮಾತ್ ಮಕ್ಕಳು ಮ್ಯಾನ್‌ಹೋಲ್‌ನಲ್ಲಿ ಬಿದ್ದರೆ ಕಾಣುವುದೇ ಇಲ್ಲ. ಮ್ಯಾನ್‌ಹೋಲ್ ಗುಂಡಿಬಿದ್ದು ಸುಮಾರು 2 ತಿಂಗಳುಗಳೇ ಕಳೆದಿದ್ದರೂ ಸರಿಪಡಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಕೂಡಲೇ ಮ್ಯಾನ್‌ಹೋಲ್ ದುರಸ್ಥಿ ಮಾಡದಿದ್ದರೆ ಪಾಲಿಕೆ ವಲಯ ಕಚೇರಿ ಎದುರು ಪ್ರತಿಭಟನೆ ಮಾಡುವುದಾಗಿ ನಿವಾಸಿಗಳು ಎಚ್ಚರಿಸಿದ್ದಾರೆ.

ಪಾಲಿಕೆಗಳು ಸೇರಿದಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಿರಂತರ ನೀರು ದಾಹಮುಕ್ತ ರಾಜ್ಯ ಯೋಜನೆ ಜಾರಿ

● ನ.11ರಂದು ಅಮೃತ್ ಯೋಜನೆಗೆ ಪ್ರಧಾನಿ ಮೋದಿ ಚಾಲನೆ
● ಯೋಜನೆ ಜಾರಿಗೆ ಕೇಂದ್ರದಿಂದ 2024ರ ಗಡುವು

ಬೆಂಗಳೂರು, ಅ.3(ಕೆಎಂಶಿ)–ನಗರಪಾಲಿಕೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ದಿನವಿಡೀ ಕುಡಿಯುವ ನೀರು ಕಲ್ಪಿಸಿ 'ದಾಹಮುಕ್ತ ರಾಜ್ಯ' ಸರ್ಕಾರದ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ.




ರಾಜ್ಯ ಮತ್ತು ಕೇಂದ್ರದ ಕೆಲವು ಮಹತ್ತರ ಯೋಜನೆಗಳಿಗೆ ಚಾಲನೆ ನೀಡಲು ನ.11ರಂದು ಪ್ರಧಾನಿ 1 ದಿನದ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದು, ಅಂದು ಕೇಂದ್ರದ ಸಹಭಾಗಿತ್ವದಲ್ಲಿನ ಅಮೃತ್ ಎರಡು ಯೋಜನೆಗೆ ಹಸಿರು ನಿಶಾನೆ ತೋರಲಿದ್ದಾರೆಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಹೊರತುಪಡಿಸಿ ಮೈಸೂರು, ದಾವಣಗೆರೆ, ತುಮಕೂರು ಸೇರಿದಂತೆ ಹತ್ತು ಮಹಾನಗರಗಳು, ನಗರಸಭೆ, ಪುರಸಭೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ



ಸಂಪರ್ಕವಿಲ್ಲದ ಪ್ರದೇಶಕ್ಕೆ 24/7 ನಿರಂತರ ನೀರು ಹರಿಸುವ ಯೋಜನೆ ಇದಾಗಿದೆ. 7620 ಕೋಟಿ ರೂ. ಮಹತ್ವಾಕಾಂಕ್ಷೆ ಯೋಜನೆಯನ್ನು ಕೈಗೆತ್ತಿಕೊಂಡ 6 ತಿಂಗಳಲ್ಲೇ ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಕುಡಿಯುವ ನೀರು ಸಂಪರ್ಕ ಕಲ್ಪಿಸಲಾಗುವುದು. ಈಗಾಗಲೇ ಯಾವ ಪ್ರದೇಶದಲ್ಲಿ ನೀರು ಸಂಪರ್ಕ ಕಲ್ಪಿಸಬೇಕು ಎಂಬ ಕ್ರಿಯಾ ಯೋಜನೆ ಹಾಗೂ ಕಾಮಗಾರಿ ನಡೆಸುವ ಗುತ್ತಿಗೆದಾರರನ್ನು ಅಂತಿಮಗೊಳಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕೈಗೊಳ್ಳುವ ಅಮೃತ್ ಯೋಜನೆ ಪೂರ್ಣವಾಗಿ ಅನುಷ್ಠಾನಗೊಂಡ ಬಳಿಕ ನಗರ ಮತ್ತು ಪಟ್ಟಣಗಳು ದಾಹ ಮುಕ್ತವಾಗುತ್ತವೆ. ಈ ನಗರ ಮತ್ತು ಪಟ್ಟಣಗಳಿಗೆ ಸಮೀಪವಿರುವ ನದಿ ಹಾಗೂ ಇತರೆ ಜಲ ಮೂಲಗಳಿಂದ ನೀರನ್ನು ಹರಿಸಲಾಗುವುದು. ಕೇಂದ್ರ ಸರ್ಕಾರ ಈ ಯೋಜನೆ ಯನ್ನು 2023ರೊಳಗೆ ಪೂರ್ಣಗೊಳಿಸಲು ನಮಗೆ ಕಟ್ಟಾದೇಶ ನೀಡಿದೆ ಎಂದರು.

ಶಾಲಾ–ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ 10 ನಿಮಿಷ ಧ್ಯಾನ ಕಡ್ಡಾಯ: ಸಚಿವ ಬಿ.ಸಿ.ನಾಗೇಶ್

ಬೆಂಗಳೂರು, ನ.3– ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಹೆಚ್ಚಿಸಲು, ಆರೋಗ್ಯ ವೃದ್ಧಿ, ಒತ್ತಡ ಮುಕ್ತವಾಗಿಸಲು ಶಿಕ್ಷಣ ಇಲಾಖೆ ಧ್ಯಾನದ ಮೊರೆ ಹೋಗಿದೆ. ಇನ್ನು ಮುಂದೆ ಶಾಲಾ–ಕಾಲೇಜುಗಳಲ್ಲಿ 10 ನಿಮಿಷ ವಿದ್ಯಾರ್ಥಿಗಳಿಗೆ ಧ್ಯಾನ ಮಾಡಿಸಲು ಶಿಕ್ಷಣ ಇಲಾಖೆ ನಿರ್ಧರಿಸಿದೆ. ಈ ಸಂಬಂಧ ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಧ್ಯಾನ ಮಾಡುವ ಸಂಬಂಧ ಆದೇಶ ಹೊರಡಿಸಲು ಸೂಚನೆ ನೀಡಿದ್ದಾರೆ. ನಿತ್ಯ ಶಾಲಾ–ಕಾಲೇಜುಗಳಲ್ಲಿ 10 ನಿಮಿಷ ವಿದ್ಯಾರ್ಥಿಗಳು ಕಡ್ಡಾಯವಾಗಿ ಧ್ಯಾನ ಮಾಡಬೇಕು. ಇದಕ್ಕಾಗಿ ಸಮಯ ನಿಗದಿ ಮಾಡುವಂತೆ ಸೂಚನೆ ನೀಡಿದ್ದಾರೆ. ಬಿ.ಸಿ.ನಾಗೇಶ್ ಅವರು ಪತ್ರದ ಮೇಲೆ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಆದೇಶ ಹೊರಡಿಸಲಿದ್ದು, ಶೀಘ್ರವೇ ಶಾಲಾ–ಕಾಲೇಜುಗಳಲ್ಲಿ ಧ್ಯಾನದ ಮಾಡುವ ಆದೇಶ ಅಧಿಕೃತವಾಗಲಿದೆ.



ನ.15ಕ್ಕೆ ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಿ.ಹೇಮಂತಕುಮಾರ್ ಅವಧಿ ಅಂತ್ಯ

● ನೂತನ ಕುಲಪತಿ ನೇಮಕವಾಗುವವರೆಗೆ ಪ್ರಭಾರ ನಿಯೋಜನೆಗೆ ಜೇಷ್ಠತೆ ಆಧರಿಸಿ ಹಿರಿಯ ಪ್ರಾಧ್ಯಾಪಕರ ಪಟ್ಟಿ ತರಿಸಿಕೊಂಡ ರಾಜ್ಯಪಾಲರು
● ಶೋಧನಾ ಸಮಿತಿ ರಚನೆಗೆ ಸದ್ಯದಲ್ಲೇ ಪ್ರಕ್ರಿಯೆ ಆರಂಭ, ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಲು ಅಧಿಸೂಚನೆ ಪ್ರಕಟ ಸಾಧ್ಯತೆ
● 4 ವರ್ಷಗಳ ಅವಧಿಯಲ್ಲಿ ವಿನೂತನ ಕಾರ್ಯಕ್ರಮಗಳ ಮೂಲಕ ಮೈಸೂರು ವಿವಿ ಘನತೆಯನ್ನು ಹೆಚ್ಚಿಸಿದ್ದೇನೆ: ಪ್ರೊ. ಜಿ.ಹೇಮಂತಕುಮಾರ್



ಎಸ್.ಟಿ.ರವಿಕುಮಾರ್

ಮೈಸೂರು, ನ.3–ಉನ್ನತ ಶಿಕ್ಷಣದ ಗುಣಮಟ್ಟವನ್ನು ಅಂತರರಾಷ್ಟ್ರ ಮಟ್ಟಕ್ಕೆ ಕೊಂಡೊಯ್ದು, ಶತಮಾನದ ಇತಿಹಾಸವಿರುವ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ.ಹೇಮಂತಕುಮಾರ್ ಅಧಿಕಾರಾವಧಿ ನವೆಂಬರ್ 15ರಂದು ಅಂತ್ಯವಾಗಲಿದೆ.

ಮಾನಸ ಗಂಗೋತ್ರಿಯ ಶೈಕ್ಷಣಿಕ ಹಿನ್ನೆಲೆ, ಪರಿಸರವನ್ನೆ ಬದಲಾಯಿಸಿ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳೊಂದಿಗೆ ಹಿಂದೆಂದೂ ಕಂಡರಿಯದಂತೆ ಸಮಗ್ರ ಅಭಿವೃದ್ಧಿ ಜೊತೆಗೆ ಶತಮಾನೋತ್ಸವ ಸಮಾರಂಭ ಮಾಡಿ ನಿರ್ಗಮಿಸಿದ ಮೈಸೂರು ವಿಶ್ವವಿದ್ಯಾನಿಲಯದ ಹಿಂದಿನ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ಅವರ ನಂತರ 2018ರ ನವೆಂಬರ್ 16ರಂದು ನೇಮಕಗೊಂಡಿದ್ದ ಹಿರಿಯ ಸಂಶೋಧಕರಾದ ಪ್ರೊ. ಜಿ.ಹೇಮಂತಕುಮಾರ್, 4 ವರ್ಷಗಳ ಕಾಲ ಕುಲಪತಿಯಾಗಿ ವಿಶ್ವವಿದ್ಯಾನಿಲಯವನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಬಂದಿದ್ದಾರೆ.

ರಾಜ್ಯಪಾಲರು, ಉನ್ನತ ಶಿಕ್ಷಣ ಸಚಿವರು ಹಾಗೂ ಸರ್ಕಾರದಿಂದ ಕಾಲ ಕಾಲಕ್ಕೆ ಬರುವ ಮಾರ್ಗಸೂಚಿಗಳನ್ವಯ ಕಾರ್ಯ ನಿರ್ವಹಿಸಿ ಉನ್ನತ ಶಿಕ್ಷಣದ ಗುಣಮಟ್ಟ ಕಾಪಾಡಿಕೊಂಡು ಮೈಸೂರು ವಿಶ್ವವಿದ್ಯಾನಿಲಯದ ಘನತೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದ ಕುಲಪತಿಗಳ ಪೈಕಿ ಪ್ರೊ. ಹೇಮಂತಕುಮಾರ್ ಸಹ ಒಬ್ಬರಾಗಿದ್ದಾರೆ.

ವಿಶ್ವವಿದ್ಯಾನಿಲಯ ಅನುದಾನ ಆಯೋಗ (ಯುಜಿಸಿ), ಉನ್ನತ ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಸಚಿವಾಲಯ, ರಾಜ್ಯ ಉನ್ನತ ಶಿಕ್ಷಣ ಇಲಾಖೆಯ ನಿಯಮ–ನಿಬಂಧನೆಗಳು, ಸಿಂಡಿಕೇಟ್ ಮತ್ತು ಶೈಕ್ಷಣಿಕ ಮಂಡಳಿಯ ತೀರ್ಮಾನಗಳನ್ನು ಅನುಷ್ಠಾನಗೊಳಿಸಿ, ಶಿಕ್ಷಣ, ತರಬೇತಿ, ಸಂಶೋಧನೆಗೆ ಒತ್ತು ನೀಡುವ ಮೂಲಕ ಪ್ರೊ. ಹೇಮಂತ ಕುಮಾರ್ ಅವರು, ಹಣಕಾಸು ಇನ್ನಿತರ ಆಡಳಿತಾತ್ಮಕ ಅಡೆ–ತಡೆಗಳನ್ನು ನಿಭಾಯಿಸಿ ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಉನ್ನತ ಶಿಕ್ಷಣವನ್ನು ಎಲ್ಲೆಡೆ, ಎಲ್ಲರಿಗೂ ತಲುಪಿಸುವ ನಿಟ್ಟಿನಲ್ಲಿ ಯಶಸ್ವಿಯಾಗಿದ್ದಾರೆ.

ಸಾಧನೆಯ ಮೈಲಿಗಲ್ಲು: ಆರ್ಟ್ಸ್, ಕಾಮರ್ಸ್, ಸೈನ್ಸ್ ವಿಭಾಗದ ಪದವಿ ಮತ್ತು ಸ್ನಾತಕೋತ್ತರ ಪದವಿಗೆ ಮಾತ್ರ ಸೀಮಿತವಾಗಿದ್ದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ 100 ವರ್ಷಗಳ ನಂತರ ಇದೇ ಪ್ರಥಮ ಬಾರಿಗೆ ಇಂಜಿನಿಯರಿಂಗ್ ಕಾಲೇಜು ಆರಂಭಿಸಿ ಮೂಲ ಸೌಲಭ್ಯದೊಂದಿಗೆ ತಾಂತ್ರಿಕ ಶಿಕ್ಷಣ ಆರಂಭಿಸುವಲ್ಲಿ ಪ್ರೊ. ಜಿ.ಹೇಮಂತ ಕುಮಾರ್ ಯಶಸ್ವಿಯಾಗಿದ್ದಾರೆ.

ಇಂಜಿನಿಯರಿಂಗ್ ನಿಕಾಯ (Faculty of Engineering) ಸ್ಥಾಪನೆ, ಇದೇ ಪ್ರಥಮ ಬಾರಿ ಫಾರ್ಮಸಿ ಕಾಲೇಜು ಆರಂಭಿಸಲು ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಸಂಶೋಧನಾ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಹಾಸ್ಟೆಲ್, ವಿದ್ಯಾರ್ಥಿಗಳ ವೃತ್ತಿ ತರಬೇತಿಗಾಗಿ ಕೆರಿಯರ್ ಹಬ್ ಸ್ಥಾಪನೆ, 300 ಎಸ್‌ಸಿ–ಎಸ್ಟಿ ವಿದ್ಯಾರ್ಥಿಗಳಿಗೆ ಹಾಗೂ 40 ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟ್ಯಾಪ್ ವಿತರಿಸುವ ಮೂಲಕ ಶಿಕ್ಷಣಕ್ಕೆ ಒತ್ತು ನೀಡಿದ್ದು ಮಹತ್ತರ ಕಾರ್ಯ.

ಪ್ರಥಮ ಬಾರಿ ರೀಸರ್ಚ್ ಸ್ಕಾಲರ್‌ಗಳಿಗಾಗಿ ಓಬಿಸಿ ಫೆಲೋಶಿಪ್ ಆರಂಭ, ಮಾನಸ ಗಂಗೋತ್ರಿಯಲ್ಲಿ ಹಿರಿಯ ಪೋಷಕರು ವಿವಿಧ ವಿಭಾಗಗಳಿಗೆ ತೆರಳಲು ಎರಡು ಎಲೆಕ್ಟ್ರಿಕ್ ವಾಹನಗಳ ಪೂರೈಕೆ, ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಸಿಬ್ಬಂದಿಗಳ ಸುರಕ್ಷತೆಗಾಗಿ ಮಾನಸ ಗಂಗೋತ್ರಿ ಆವರಣದಲ್ಲಿ 720 ಸರ್ವೆಲನ್ಸ್ ಕ್ಯಾಮರಾ ಅಳವಡಿಕೆ, 5 ಪ್ರಮುಖ ಸ್ಥಳಗಳಲ್ಲಿ ಡಿಜಿಟಲ್ ಡಿಸ್ಪ್ಲೇ ಬೋರ್ಡ್ ಅಳವಡಿಕೆ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಇದ್ದ ಡಿಜಿಟಲ್ ಇವ್ಯಾಲ್ಯುಯೇಷನ್ ಸಿಸ್ಟಂ ಅಳವಡಿಸಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಮೌಲ್ಯಮಾಪನವನ್ನು ಉನ್ನತೀಕರಣಗೊಳಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ(NEP)ಯನ್ನು ಪದವಿ ಕೋರ್ಸ್‌ಗಳಲ್ಲಿ ಶೇ.100ರಷ್ಟು ಅನುಷ್ಠಾನ, ಯುಜಿ ಟೀಚರ್‌ಗಳಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಪರಿಚಯಿಸಿ ಬೋಧನಾ ಸಾಮರ್ಥ್ಯ ವೃದ್ಧಿ, ಗಂಗೋತ್ರಿಯಲ್ಲಿ 1 ಕೋಟಿ ರೂ. ವೆಚ್ಚದ ಯೋಗಾ ಹಾಲ್ ನಿರ್ಮಾಣ, ಇನ್‌ಕ್ಯುಬೇಷನ್ ಸೆಂಟರ್, ಮೈಸೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಚಟುವಟಿಕೆ ಮತ್ತು ಸಂಶೋಧನೆಗೆ ಸಹಕರಿಯಾಗಲಿವೆ.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಆಗಸ್ಟ್ 11ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ಏರ್ಪಡಿಸಿದ್ದ ಯುವ ಜನೋತ್ಸವ ಕಾರ್ಯಕ್ರಮದಲ್ಲಿ 40,000 ವಿದ್ಯಾರ್ಥಿಗಳು ಭಾಗಿ, ಹೊಸದಾಗಿ ಆರಂಭಿಸಿರುವ 13 ಆನ್‌ಲೈನ್ ಕೋರ್ಸುಗಳಿಗೆ 3,200 ವಿದ್ಯಾರ್ಥಿಗಳ ನೋಂದಣಿ, 2020ನೇ ಸಾಲಿನಲ್ಲಿ ನಡೆದ ವಿಶ್ವವಿದ್ಯಾನಿಲಯದ ಶತಮಾನೋತ್ಸವ ಘಟಿಕೋತ್ಸವದಲ್ಲಿ ವೀಡಿಯೋ ಕಾನ್ಫರೆನ್ಸ್ (ವರ್ಚುಯಲ್) ಮೂಲಕ ಪ್ರಧಾನಿ ನರೇಂದ್ರ ಮೋದಿ ಭಾಗಿ, ಅಖಿಲ ಭಾರತ ಕುಲಪತಿಗಳ ಸಮ್ಮೇಳನದಲ್ಲಿ ದೇಶದ 300 ವಿಶ್ವವಿದ್ಯಾನಿಲಯಗಳ ಕುಲಪತಿಗಳು ಪಾಲ್ಗೊಂಡು ಉನ್ನತ ಶಿಕ್ಷಣದ ಅಭಿವೃದ್ಧಿ ಬಗ್ಗೆ ಚರ್ಚಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ 3 ಎಕರೆ ಪ್ರದೇಶದಲ್ಲಿ 80 ಕೋಟಿ ರೂ. ವೆಚ್ಚದ ಪ್ಲಾನೆಟೋರಿಯಂ ನಿರ್ಮಾಣಕ್ಕೆ ಶಂಕುಸ್ಥಾಪನೆ, 4 ಎಕರೆ ಪ್ರದೇಶದಲ್ಲಿ ಸೈನ್ಸ್ ಪಾರ್ಕ್ ಸ್ಥಾಪಿಸಲು ಪ್ರಕ್ರಿಯೆ, ವಿಶ್ವವಿದ್ಯಾನಿಲಯದಲ್ಲಿ ಕಮ್ಯುನಿಟಿ ರೇಡಿಯೋ ಆರಂಭ, ಗ್ರಾಮಾಂತರ ಪ್ರದೇಶಗಳಿಗೂ ಉನ್ನತ ಶಿಕ್ಷಣ ಪೂರೈಸಲು ಚಾಮರಾಜನಗರ ಜಿಲ್ಲೆಯ ತೆರಕಣಾಂಬಿ, ಕೆ.ಆರ್.ನಗರ ತಾಲೂಕಿನ ಹಳ್ಳಿಮೈಸೂರು ಗ್ರಾಮ ಹಾಗೂ ಸಕಲೇಶಪುರ ತಾಲೂಕಿನ ಹೆತ್ತೂರಿನಲ್ಲಿ ವಿಶ್ವವಿದ್ಯಾನಿಲಯವು ಪದವಿ ಕಾಲೇಜು ಆರಂಭಿಸಿರುವುದೂ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಕ್ರಮಗಳು ಪ್ರೊ. ಹೇಮಂತ್‌ಕುಮಾರ್ ಅವರ ಕಾರ್ಯವೈಖರಿಯ ಪ್ರತೀಕವಾಗಿವೆ.

ಕುಕ್ಕರಹಳ್ಳಿ ಕೆರೆಯಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳಲು ಕಾವೇರಿ ನೀರಾವರಿ ನಿಗಮ ಲಿಮಿಟೆಡ್‌ನಿಂದ ಮಧ್ಯಂತರ ವರದಿ

● ನೀರು ಸರಾಗವಾಗಿ ಹರಿದು ಹೋಗಲು 'ಹೆಡ್ ರೆಗ್ಯುಲೇಟರ್ ಅಳವಡಿಕೆ ● ಸೋರಿಕೆ ತಡೆಗೆ 'ರ್‍ಯಾಕ್ ಟೋ' ನಿರ್ಮಾಣ

ಮೈಸೂರು, ನ.3(ಎಂಕೆ)– ಕುಕ್ಕರಹಳ್ಳಿ ಕೆರೆಯಲ್ಲಿ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ ಕುರಿತು ಕಾವೇರಿ ನೀರಾವರಿ ನಿಗಮ ಲಿಮಿಟೆಡ್(ಸಿಎನ್‌ಎನ್‌ಎಲ್) ಮಧ್ಯಂತರ ವರದಿ ನೀಡಿದ್ದು, ಹೆಚ್ಚುವರಿ ನೀರು ಸರಾಗವಾಗಿ ಹರಿದು ಹೋಗಲು 'ಹೆಡ್ ರೆಗ್ಯುಲೇಟರ್' ಅಳವಡಿಸುವುದು ಹಾಗೂ ಸೋರಿಕೆಯಾಗುತ್ತಿರುವ ಸ್ಥಳಗಳನ್ನು ಗುರ್ತಿಸಿ 'ರಾಕ್ ಟೋ'(ಕಲ್ಲಿನ ಕಟ್ಟಡ) ನಿರ್ಮಿಸುವುದು ಸೂಕ್ತವೆಂದು ತಿಳಿಸಲಾಗಿದೆ.



ಕುಕ್ಕರಹಳ್ಳಿ ಕೆರೆಯ ಏರಿಯಿಂದ ನೀರು ಸೋರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದ ಸಿಎನ್‌ಎನ್‌ಎಲ್‌ನ ತಾಂತ್ರಿಕ ಸಲಹೆಗಾರ (ಡಿಸೈನ್ ವಿಭಾಗ) ಹೆಚ್.ಕೆ.ಸಂಪತ್‌ಕುಮಾರ್ ನೇತೃತ್ವದ ಇಂಜಿನಿಯರ್‌ಗಳ ತಂಡ, ಕುಕ್ಕರ ಹಳ್ಳಿ ಕೆರೆಯಲ್ಲಿ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ ಕುರಿತು ವರದಿ ನೀಡಿದ್ದಾರೆ.

ಕುಕ್ಕರಹಳ್ಳಿ ಕೆರೆ ಏರಿಯ ಪ್ರತೀ 50 ಮೀಟರ್ ನಡುವೆ ನೀರು ಸೋರಿಕೆಯಾಗುತ್ತಿದೆಯೇ ಎಂಬುದನ್ನು ಪರಿಶೀಲನೆ ನಡೆಸಬೇಕಾಗಿದೆ. ಈಗಿರುವ ಕೊಂತ (ಗೇಟ್) ಬದಲಾಗಿ ಹೆಡ್ ರೆಗ್ಯುಲೇಟರ್ ಅಳವಡಿಸುವ ನಿಟ್ಟಿನಲ್ಲಿ ಸ್ಥಳದ ಮಣ್ಣಿನ ಸಾಮರ್ಥ್ಯ ಪರೀಕ್ಷೆ(ಎಸ್‌ಬಿಸಿ) ಮಾಡುವುದು ಅಗತ್ಯವಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅಂತಿಮ ವರದಿಗೆ ಮನವಿ: ಮೈಸೂರಿನ ನೆಚ್ಚಿನ ಸ್ಥಳಗಳಲ್ಲಿ ಒಂದಾದ ಕುಕ್ಕರಹಳ್ಳಿ ಕೆರೆ ಸಂರಕ್ಷಣೆ ದೃಷ್ಟಿಯಿಂದ ಈಗಾಗಲೇ ಪರಿಶೀಲನೆ ನಡೆಸಿರುವ ಕಾವೇರಿ ನೀರಾವರಿ ನಿಗಮ ಲಿಮಿಟೆಡ್(ಸಿಎನ್‌ಎನ್‌ಎಲ್) ಹಾಗೂ ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ(ಕೆಇಆರ್‌ಎಸ್)ದ ತಂಡ ಸೇರಿ ವರದಿ ನೀಡುವಂತೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯ ಪ್ರೊ.ಕೆ.ಎಂ. ಜಯರಾಮಯ್ಯ ಮನವಿ ಮಾಡಿದ್ದಾರೆ.

ಪ್ಯಾರಾ ಮೆಡಿಕಲ್ ಕೌಶಲ್ಯ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ನ.3– ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ 1500 ನಿರುದ್ಯೋಗಿ ಯುವಕ–ಯುವತಿಯರಿಗೆ ಓಂಃಊ ನಿಂದ ಮಾನ್ಯತೆ ಪಡೆದ ಹಾಸ್ಪಿಟಲ್‌ಗಳ ಸಹಯೋಗದಲ್ಲಿ ಶೇ.75 ರಷ್ಟು ಉದ್ಯೋಗ ಖಾತರಿಯೊಂದಿಗೆ ಪ್ಯಾರ ಮೆಡಿಕಲ್ ಸ್ಕಿಲ್ ತರಬೇತಿ ಹಾಗೂ ನಾನ್ ಪ್ಯಾರಾ ಮೆಡಿಕಲ್ ಅಲ್ಪಾವಧಿ ಸರ್ಟಿಫಿಕೇಟ್ ಕೋರ್ಸ್‌ಗಳ ವಸತಿ ಸಹಿತ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ ಪ್ಯಾರಾ ಮೆಡಿಕಲ್ ಡಿಪ್ಲೋಮಾ ಕೋರ್ಸ್ ಮುಕ್ತಾಯಗೊಳಿಸಿದ ಹಾಗೂ ದ್ವಿತೀಯ ಪಿ.ಯು.ಸಿ ವಿಜ್ಞಾನ ಭಾಗದಲ್ಲಿ ಉತ್ತೀರ್ಣರಾದ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ನವಂಬರ್ 15 ಅಂತಿಮ ದಿನಾಂಕವಾಗಿದೆ.

ಅರ್ಜಿಯನ್ನು www.sw.kar.nic.in ವೆಬ್‌ಸೈಟ್‌ನಲ್ಲಿ ಡೌನ್ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯನ್ನು ಸ್ಕ್ಯಾನ್ ಮಾಡಿ ಇ–ಮೇಲ್ ವಿಳಾಸ petcparamedical@gmail.com ಗೆ ತಾಂತ್ರಿಕ ಸಮಸ್ಯೆ ಕಂಡು ಬಂದರೆ swdpetc2011@gmail.com ಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–22207784 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಮೈಸೂರು, ನ. 3– ಮೈಸೂರಿನ ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ ವತಿಯಿಂದ ಇಎಸ್‌ಐ ಕಾರ್ಡುದಾರರಿಗೆ ಮತ್ತು ಕುಟುಂಬ ವರ್ಗದವರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರವನ್ನು ನ. 15 ರವರೆಗೆ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರ ಮತ್ತು ಸಯ್ಯಾಜಿ ರಾವ್ ರಸ್ತೆಯ ಆಸ್ಪತ್ರೆಯ ಶಾಖೆಗಳಿಗೆ ಭೇಟಿ ನೀಡಿ ಇದರ ಪ್ರಯೋಜನ ಪಡೆದುಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಮೊ. 8884477956 ಸಂಪರ್ಕಿಸಬಹುದು.



ಭೂ ವಿವಾದ: ಹಾಡಹಗಲೇ ಹೆದ್ದಾರಿಯಲ್ಲಿ ವ್ಯಕ್ತಿ ಮೇಲೆ ಮಾರಣಾಂತಿಕ ಹಲ್ಲೆ

ಹುಣಸೂರು, ನ.3– ಜಮೀನೊಂದರ ವಿವಾದಕ್ಕೆ ಸಂಬಂಧಿಸಿದಂತೆ ಉಂಟಾಗಿದ್ದ ದ್ವೇಷದ ಹಿನ್ನೆಲೆಯಲ್ಲಿ ಕುಪ್ಪೆ ಗ್ರಾಮದ ನೀರುಗಂಟಿಯ ಮೇಲೆ ಹಾಡಹಗಲೇ ರಾಜಾರೋಷವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲೇ ಏಳು ಮಂದಿಯ ಗುಂಪು ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಹುಣಸೂರು ತಾಲೂಕು ಕಾಡನಕೊಪ್ಪಲು ಗೇಟ್ ಬಳಿ ಇಂದು ಮಧ್ಯಾಹ್ನ ನಡೆದಿದೆ.

ಕುಪ್ಪೆ ಗ್ರಾಮದ ನೀರುಗಂಟಿ ವೆಂಕಟೇಶ್ (57) ಹಲ್ಲೆಗೊಳಗಾದವನಾಗಿದ್ದು, ತೀವ್ರವಾಗಿ ಗಾಯಗೊಂಡಿರುವ ಈತನಿಗೆ ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ರವಾನಿಸಲಾಗಿದೆ. ಕುಪ್ಪೆ ಗ್ರಾಮದವರೇ ಆದ ಸುನೀಲ್‌ಕುಮಾರ್ ಅಲಿಯಾಸ್ ಸುಗ್ಗ, ರೇಣುಕಯ್ಯ, ಸಂಜೀವ, ನಾರಾಯಣ, ಲಕ್ಷ್ಮಣಯ್ಯ, ರೇವಣ್ಣ ಮತ್ತು ಶ್ರೀನಿವಾಸಮೂರ್ತಿ ಎಂಬುವರ ವಿರುದ್ಧ ವೆಂಕಟೇಶ್ ಹೇಳಿಕೆಯನ್ನಾಧರಿಸಿ ಹುಣಸೂರು ಟೌನ್ ಪೊಲೀಸರು ಕೊಲೆ ಯತ್ನ ಪ್ರಕರಣ ದಾಖಲಿಸಿದ್ದಾರೆ.

ಕ್ರೈಂ ಬಾಕ್ಸ್

ವಿವರ: ಕುಪ್ಪೆ ಗ್ರಾಮದ ಜಮೀನೊಂದಕ್ಕೆ ಸಂಬಂಧಿಸಿದಂತೆ ನೀರುಗಂಟಿ ವೆಂಕಟೇಶ್ ಐದು ಮಂದಿ ವಿರುದ್ಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದನೆಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಆತನ ಮೇಲೆ ಈ ಹಿಂದೆ ಹಲ್ಲೆ ನಡೆದಿದ್ದು, ಆ ಪ್ರಕರಣದಲ್ಲಿ ಐವರು ಬಂಧಿಸಲ್ಪಟ್ಟು ಜೈಲು ಸೇರಿದ ನಂತರ ಜಾಮೀನಿನ ಮೇಲೆ ಬಿಡುಗಡೆ ಹೊಂದಿದ್ದಾರೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಇಂದು ಹುಣಸೂರು ನ್ಯಾಯಾಲಯದಲ್ಲಿ ವಿಚಾರಣೆ ಇದ್ದುದ್ದರಿಂದ ನ್ಯಾಯಾಲಯಕ್ಕೆ ಹಾಜರಾಗಿದ್ದ ವೆಂಕಟೇಶ್, ಕುಪ್ಪೆ ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಅವರನ್ನು ಅಡ್ಡಗಟ್ಟಿದ ಏಳು ಮಂದಿಯ ತಂಡ ಮಾರಕಾಸ್ತ್ರಗಳಿಂದ ಮಾರಣಾಂತಿಕ ಹಲ್ಲೆ ನಡೆಸಿದೆ. ಹೆದ್ದಾರಿಯಲ್ಲಿ ವಾಹನಗಳು ಓಡಾಡುತ್ತಿದ್ದರೂ, ಇಕ್ಕೆಲಗಳಲ್ಲಿ ಜನ ನಿಂತು ನೋಡುತ್ತಿದ್ದರೂ ಅದರ ಬಗ್ಗೆ ತಲೆಕೆಡಿಸಿಕೊಳ್ಳದ ಹಲ್ಲೆಕೋರರು ಮಾರಕಾಸ್ತ್ರಗಳಿಂದ ವೆಂಕಟೇಶ್ ಮೇಲೆ ತೀವ್ರವಾಗಿ ಹಲ್ಲೆ ಮಾಡಿದ್ದಾರೆ. ಸುನೀಲ್‌ಕುಮಾರ್ ಅಲಿಯಾಸ್ ಸುಗ್ಗಿ ಎಂಬಾತ ವೆಂಕಟೇಶ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡುತ್ತಿರುವುದು ಆ ವೇಳೆ ವೆಂಕಟೇಶ್ ಕಾಪಾಡಿ... ಕಾಪಾಡಿ... ಎಂದು ಕೂಗುತ್ತಿರುವ ವೀಡಿಯೋ ವೈರಲ್ ಆಗಿದೆ.

ಮೊಪೆಡ್‌ನಿಂದ ಆಯತಪ್ಪಿ ಬಿದ್ದು ಅಪ್ರಾಪ್ತ ಸಾವು

ಹುಣಸೂರು, ನ.3– ನಿಯಂತ್ರಣ ತಪ್ಪಿ ಮೊಪೆಡ್‌ನಿಂದ ಬಿದ್ದು ಬಾಲಕ ಸಾವನ್ನಪ್ಪಿರುವ ಘಟನೆ ಹುಣಸೂರು ತಾಲೂಕು ಉಯಿಲಗೌಡನಹಳ್ಳಿ–ಹೊಸೂರು ರಸ್ತೆಯಲ್ಲಿ ಸಂಭವಿಸಿದೆ.

ಹುಣಸೂರು ಟೌನ್ ರಂಗನಾಯಕ ಎಂಬುವರ ಪುತ್ರ ಹೇಮಂತ್ (13) ಅಪಘಾತದಲ್ಲಿ ಸಾವನ್ನಪ್ಪಿದವನಾಗಿದ್ದು, ನ.1ರಂದು ಈತನ ತಂದೆ ರಂಗನಾಯಕ ರಾಜ್ಯೋತ್ಸವ ಕಾರ್ಯಕ್ರಮ ನೋಡಲು ಹೋಗಿದ್ದ ವೇಳೆ ಮನೆಯಲ್ಲಿದ್ದ ಕೀ ತೆಗೆದುಕೊಂಡ ಹೇಮಂತ್ ಟಿವಿಎಸ್ ಎಕ್ಸ್‌ಎಲ್ ಸೂಪರ್ (ಕೆಎ45, ಎಲ್6835) ಮೊಪೆಡ್ ಅನ್ನು ತಾನೇ ಚಾಲನೆ ಮಾಡಿಕೊಂಡು ಹುಣಸೂರಿನಿಂದ ಬೆಂಕಿಪುರದಲ್ಲಿರುವ ಅಜ್ಜಿ ತಾಯಮ್ಮನವರ ಮನೆಗೆ ಹೋಗಿ ಹಿಂದಿರುಗುತ್ತಿದ್ದಾಗ ಉಯಿಲಗೌಡನಹಳ್ಳಿ–ಹೊಸೂರು ರಸ್ತೆಯಲ್ಲಿ ನಿಯಂತ್ರಣ ತಪ್ಪಿ ಬಿದ್ದು ತೀವ್ರವಾಗಿ ಗಾಯಗೊಂಡಿದ್ದಾನೆ.

ಈತನಿಗೆ ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಬಿಳಿಕೆರೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವಿದೇಶದಲ್ಲಿ ಕೆಲಸ ಕೊಡಿಸುವುದಾಗಿ ಕೊಡಗಿನ ಯುವಕನಿಗೆ ಕೇರಳದ ಇಬ್ಬರಿಂದ ಮೋಸ

1.50 ಲಕ್ಷ ರೂ. ಪಡೆದು ವಂಚನೆ

ಮಡಿಕೇರಿ, ನ.3– ವಿದೇಶದಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಕೊಡಗಿನ ಯುವಕನಿಗೆ ಕೇರಳದ ಇಬ್ಬರು ವ್ಯಕ್ತಿಗಳು 1.50 ಲಕ್ಷ ರೂ. ವಂಚನೆ ಮಾಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಮಡಿಕೇರಿ ತಾಲೂಕು ಚೆಂಬು ಗ್ರಾಮದ ಜೇಮ್ಸ್ ಜೋಸೆಫ್ (24) ವಂಚನೆಗೊಳಗಾದವನಾಗಿದ್ದು, 2021ರ ನ.7ರಂದು ಇವರನ್ನು ಭೇಟಿ ಮಾಡಿದ ಕೇರಳದ ಕಾಸರಗೋಡು ನಿವಾಸಿಗಳಾದ ಎಂ.ಹೆಚ್. ಶ್ರೀನಾಥ್ ಮತ್ತು ವಿನೋದ್ ಎಂಬುವರು ಚೆಕ್ ರಿಪಬ್ಲಿಕ್ ದೇಶದಲ್ಲಿ ಉದ್ಯೋಗ ಕೊಡಿಸುವುದಾಗಿ ನಂಬಿಸಿದ್ದಾರೆ. ಅದಕ್ಕೆ 4 ಲಕ್ಷ ರೂ. ವೆಚ್ಚವಾಗುತ್ತದೆ ಎಂದು ತಿಳಿಸಿದ್ದ ಅವರು, ಉದ್ಯೋಗದ ಬಗ್ಗೆ ಆಫರ್ ಲೆಟರ್ ತಲುಪಿದಾಗ 1.50 ಲಕ್ಷ ರೂ. ಕೊಡಬೇಕು ಹಾಗೂ ವೀಸಾ ಕೊಟ್ಟಾಗ ಉಳಿದ 2.50 ಲಕ್ಷ ರೂ. ಕೊಡಬೇಕು ಎಂದು ಮಾತುಕತೆ ನಡೆಸಿದ್ದಾರೆ. 2021ರ ನ.15ರಂದು ಆಫರ್ ಲೆಟರ್ ನೀಡಿದ ವಂಚಕರು ಜೇಮ್ಸ್‌ಜೋಸೆಫ್ ಅವರಿಂದ 1.50 ಲಕ್ಷ ರೂ. ಪಡೆದಿದ್ದಾರೆ. ಆದರೆ, ಈವರೆಗೂ ಅವರಿಗೆ ವಿದೇಶಕ್ಕೆ ತೆರಳಲು ವೀಸಾ ನೀಡಿಲ್ಲ. ಈ ವಂಚಕರು ನೀಡಿರುವ ಆಫರ್ ಲೆಟರ್ ಕೂಡ ನಕಲಿಯಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಈ ಸಂಬಂಧ ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದಿನಿಂದ ಮೈಸೂರು ನಗರದಲ್ಲಿ ರಥ ಯಾತ್ರೆ

ಎರಡು ದಿನ ಪಾಲಿಕೆ ವಲಯವಾರು ಸಂಚಾರ



ಮೈಸೂರು,ನ.3(ಪಿಎಂ)– ಬೆಂಗಳೂರಿನ ವಿಮಾನ ನಿಲ್ದಾಣ ಸಮೀಪ ನಿರ್ಮಿಸಿರುವ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಬಳಿಯ ಕೆಂಪೇಗೌಡ ಥೀಮ್ ಪಾರ್ಕ್‌ಗಾಗಿ ರಾಜ್ಯಾದ್ಯಂತ ಪವಿತ್ರ ಮೃತ್ತಿಕೆ ಸಂಗ್ರಹ ರಥ ಯಾತ್ರೆ ನಡೆಯುತ್ತಿದ್ದು, ನ.4 ಮತ್ತು 5ರಂದು ಸದರಿ ರಥ ಯಾತ್ರೆಯು ಮೈಸೂರು ನಗರ ವ್ಯಾಪ್ತಿಯಲ್ಲಿ ನಡೆಯಲಿದೆ.

ನ.4ರಂದು ಬೆಳಗ್ಗೆ 9ಕ್ಕೆ ಅರಮನೆ ಆವರಣದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಆವರಣದಲ್ಲಿ ಪವಿತ್ರ ಮೃತ್ತಿಕೆ ಸಂಗ್ರಹ ರಥ ಯಾತ್ರೆಯ ಮೈಸೂರು ನಗರ ಸಂಚಾರಕ್ಕೆ ಚಾಲನೆ ದೊರೆಯಲಿದೆ. ಸಂಸದರು, ಶಾಸಕರು ಸೇರಿದಂತೆ ಹಲವು ಗಣ್ಯರ ಸಮ್ಮುಖದಲ್ಲಿ ರಥ ಯಾತ್ರೆಗೆ ಚಾಲನೆ ನೀಡಲಾಗುತ್ತದೆ. ನಂತರ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಲಯ ಕಚೇರಿ ವ್ಯಾಪ್ತಿಯಲ್ಲಿ ಪವಿತ್ರ ಮೃತ್ತಿಕೆ ಮಣ್ಣು ಸಂಗ್ರಹಿಸಲು ರಥವು ಸಂಚರಿಸಲಿದೆ.

ಅಲ್ಲದೆ, ಈ ಸಂಬಂಧ ವಲಯ ಕಚೇರಿಗಳ ಸಹಾಯಕ ಆಯುಕ್ತರನ್ನು ವಲಯ ಮಟ್ಟದ ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದೆ. ರಥವನ್ನು ಸರ್ವರ ಸಹಭಾಗಿತ್ವದಲ್ಲಿ ಸ್ವಾಗತಿಸಿ, ಸಂಗ್ರಹಿಸಿದ ಪವಿತ್ರ ಮೃತ್ತಿಕೆಯನ್ನು ಸಮರ್ಪಿಸುವ ಸಂಪೂರ್ಣ ಜವಾಬ್ದಾರಿಯನ್ನು ಆಯಾಯ ವಲಯ ಮಟ್ಟದ ನೋಡಲ್ ಅಧಿಕಾರಿಗಳು ಹಾಗೂ ನೌಕರರಿಗೆ ವಹಿಸಲಾಗಿದೆ.

ಉದ್ಘಾಟನೆ ಬಳಿಕ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗದಿಂದ ಕೆಆರ್ ವೃತ್ತ, ನ್ಯೂ ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ವಲಯ ಕಚೇರಿ–1ರ ಆವರಣ ತಲುಪುವ ರಥಕ್ಕೆ ಪೂಜೆ ಕಾರ್ಯಕ್ರಮ ನೆರವೇರಲಿದೆ. ಬಳಿಕ ವಾಣಿವಿಲಾಸ ರಸ್ತೆಯ ಮೂಲಕ ಆರ್‌ಟಿಓ ವೃತ್ತ, ಬಲ್ಲಾಳ್ ವೃತ್ತ, ನ್ಯೂ ಕಾಂತರಾಜ್ ಅರಸ್ ರಸ್ತೆಯಲ್ಲಿ ಸಂಚರಿಸಲಿದೆ. ಈ ಸಂಬಂಧ ವಲಯ ಕಚೇರಿ 1ರ ಸಹಾಯಕ ಆಯುಕ್ತ ನಾಗೇಶ್ ಅವರನ್ನು (96115 96427) ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ.

ಬಳಿಕ ವಲಯ ಕಚೇರಿ 2ರ ವ್ಯಾಪ್ತಿಯಲ್ಲಿ ಸಂಚರಿಸಲಿದ್ದು, ವಲಯ ಕಚೇರಿಯ ಮುಂಭಾಗದಿಂದ ನ್ಯೂ ಕಾಂತರಾಜ್ ಅರಸು ರಸ್ತೆ ಮೂಲಕ ಬಂದಂತಮ್ಮ ದೇವಸ್ಥಾನ ಆವರಣದವರೆಗೆ ಸಂಚರಿಸಲಿದೆ. ಈ ಸಂಬಂಧ ವಲಯ ಕಚೇರಿ–2ರ ಸಹಾಯಕ ಆಯುಕ್ತ ನಾಗರಾಜ್ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ (99452 66196).

ನಂತರ ವಲಯ ಕಚೇರಿ 3ರ ವ್ಯಾಪ್ತಿಯ ರಥವು ಸಂಚಾರ ಕೈಗೊಳ್ಳಲಿದ್ದು, ವಿಶ್ವಮಾನವ ಜೋಡಿ ರಸ್ತೆಯಿಂದ ಹುಣಸೂರು ರಸ್ತೆ, ಇಲ್ಲಿಂದ ಮಹಾರಾಣಿ ವಾಣಿಜ್ಯ ಕಾಲೇಜು ಮಾರ್ಗವಾಗಿ ಯಾದವಗಿರಿಗೆ ಸಾಗಲಿದ್ದು, ವಲಯ ಕಚೇರಿ 3ರ ಸಹಾಯಕ ಆಯುಕ್ತ ಶ್ರೀಪ್ರಕಾಶ್ ಅವರನ್ನು ಈ ಸಂಬಂಧ ನೋಡಲ್ ಅಧಿಕಾರಿಯಾಗಿ ನೇಮಕ ಮಾಡಲಾಗಿದೆ.

ನ.5ರಂದು ವಲಯ ಕಚೇರಿ 4ರ ವ್ಯಾಪ್ತಿಯಲ್ಲಿ ಇಲ್ಲಿನ ಮಾರುತಿ ಟೆಂಪಲ್ ರಸ್ತೆಯಿಂದ ಬೋಗಾದಿ ರಸ್ತೆ, ಮಾನಸ ಗಂಗೋತ್ರಿಯ ಬಯಲು ರಂಗಮಂದಿರ ರಸ್ತೆ, ಪಡುವಾರಹಳ್ಳಿ 6ನೇ ಮುಖ್ಯರಸ್ತೆ, ಟೆಂಪಲ್ ರಸ್ತೆಯಲ್ಲಿ ಸಂಚರಿಸಲಿದೆ. ನಂತರ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಪೂಜೆ ಕಾರ್ಯಕ್ರಮ ನಡೆಯಲಿದ್ದು, ನಂತರ ಆದಿಪಂಪ ರಸ್ತೆ ಮಾರ್ಗವಾಗಿ ಮಹದೇಶ್ವರ ರಸ್ತೆ, ವಾಲ್ಮೀಕಿ ರಸ್ತೆ, ಚೆಲುವಾಂಬ ರಸ್ತೆಯಲ್ಲಿ ಸಂಚಾರ ಮಾಡಲಿದೆ. ವೆಂಕಟೇಶ್ವರಸ್ವಾಮಿ ದೇವಸ್ಥಾನದಲ್ಲಿ ಪೂಜೆ ಬಳಿಕ (ವಲಯ 4ರ ಸಹಾಯಕ ಆಯುಕ್ತರಾದ ಚಂದ್ರಮ್ಮ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಮೊ.ಸಂ. 94493 38563), ಕೆಆರ್‌ಎಸ್ ರಸ್ತೆ ಮೂಲಕ ವಲಯ ಕಚೇರಿ 5ರ ಪರಿಮಿತಿಗೆ ಸಾಗಲಿದೆ.

ವಲಯ ಕಚೇರಿ 5ರ ವ್ಯಾಪ್ತಿಯಲ್ಲಿ (ಸಹಾಯಕ ಆಯುಕ್ತ ಕೃಷ್ಣ ಅವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಮೊ.ಸಂ. 94489 00617) ಬಸವನಗುಡಿ ದೇವಸ್ಥಾನ ಮಾರ್ಗವಾಗಿ ಹೆಬ್ಬಾಳ್ ಸುಬ್ರಹ್ಮಣ್ಯ ದೇವಸ್ಥಾನ ಮಾರ್ಗ, ಇಲ್ಲಿಂದ ಸಿಐಟಿಬಿ ಮಾರ್ಗವಾಗಿ ಅಭಿಷೇಕ್ ವೃತ್ತ, ಮಂಚೇಗೌಡನಕೊಪ್ಪಲು ಅರಳೀಕಟ್ಟೆ ಮಾರ್ಗವಾಗಿ ಸಂಗಮ ವೃತ್ತ, ಶ್ರೀ ಕೃಷ್ಣದೇವರಾಯ ವೃತ್ತ ಮಾರ್ಗವಾಗಿ ವಿಜಯನಗರ ಸ್ನೇಕ್ ಶ್ಯಾಮ್ ರಸ್ತೆ, ಇಲ್ಲಿಂದ ವಿಜಯನಗರದ ಶ್ರೀ ಯೋಗನರಸಿಂಹ ಸ್ವಾಮಿ ದೇವಸ್ಥಾನ ರಸ್ತೆ ಮಾರ್ಗವಾಗಿ ಕಾಳಿದಾಸ ರಸ್ತೆ, ವಿಜಯನಗರ ವಾಟರ್ ಟ್ಯಾಂಕ್ ರಸ್ತೆ ಡಾಲ್ಫಿನ್ ರಸ್ತೆ ಸೂರ್ಯ ಬೇಕರಿ ವೃತ್ತ, ಚಾಮುಂಡೇಶ್ವರಿ ದೇವಸ್ಥಾನದಿಂದ ಕಿಡಿಗಣ್ಣಮ್ಮ ರಸ್ತೆ, ಕುಂಬಾರಕೊಪ್ಪಲು ಮಹದೇಶ್ವರ ದೇವಸ್ಥಾನ ಮಾರ್ಗದ ಮೂಲಕ ಕಾಂಟೂರ್ ರಸ್ತೆ ಕೆಆರ್‌ಎಸ್ ರಸ್ತೆ ಇಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆ ಬಳಿ ಅರಳಿಮರ ವೃತ್ತದ ಸಮೀಪದ ಮೇಟಗಳ್ಳಿಯಿಂದ ಕೆಆರ್‌ಎಸ್ ರಸ್ತೆ ಮೂಲಕ ವಲಯ ಕಚೇರಿ 6 ವ್ಯಾಪ್ತಿಯಲ್ಲಿ ಸಂಚಾರ ಬೆಳೆಸಲಿದೆ.

ವಲಯ ಕಚೇರಿ 6ರ ವ್ಯಾಪ್ತಿಯಲ್ಲಿ (ನೋಡಲ್ ಅಧಿಕಾರಿ ; ಸಹಾಯಕ ಆಯುಕ್ತ ಮಂಜುನಾಥ, ಮೊ.ಸಂ. 86601 50889) ಆರ್‌ಎಂಸಿ ವೃತ್ತದಿಂದ ಪಂಚಮುಖಿ ಗಣಪತಿ ದೇವಸ್ಥಾನ, ಅಕ್ಬರ್ ರಸ್ತೆ, ಮಿಷನ್ ಆಸ್ಪತ್ರೆ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಆಯುರ್ವೇದ ಕಾಲೇಜು ವೃತ್ತ, ಇರ್ವಿನ್ ರಸ್ತೆ, ತಾಲೂಕು ಕಚೇರಿ ಮುಂಭಾಗದ ರಸ್ತೆ, ಮಸೀದಿ ರಸ್ತೆ, ನಿಂಬುಜದೇವಿ ದೇವಸ್ಥಾನ ಮಾರ್ಗದಿಂದ ಶಾಲಿವಾಹನ ರಸ್ತೆ, ನಜರ್‌ಬಾದ್ ಮುಖ್ಯ ರಸ್ತೆಯಿಂದ ಹಾರ್ಡಿಂಗ್ ವೃತ್ತ, ಕೆಆರ್ ವೃತ್ತ, ದೇವರಾಜ ಅರಸು ರಸ್ತೆ ಶಿವಾಯ ಮಠ ಹತ್ತಿರ ಮುಕ್ತಾಯಗೊಳ್ಳಲಿದೆ.

ನ.4ರಂದು ವಲಯ ಕಚೇರಿ 7ರ ವ್ಯಾಪ್ತಿಯಲ್ಲಿ (ನೋಡಲ್ ಅಧಿಕಾರಿ ; ನಂಜುಂಡಯ್ಯ, ಮೊ.ಸಂ. 94480 08342) ಹೈವೆ ವೃತ್ತ, ನೆಲ್ಸನ್ ಮಂಡೇಲಾ ರಸ್ತೆ, ಟಿ.ಎನ್.ನರಸಿಂಹಮೂರ್ತಿ ವೃತ್ತ (ಎಲ್‌ಐಸಿ ವೃತ್ತ), ಡಾ.ಬಿ.ಆರ್. ಅಂಬೇಡ್ಕರ್ ವೃತ್ತ ಸೆಂಟ್‌ಮೆರಿಸ್ ರಸ್ತೆ ಮೂಲಕ ವಲಯ ಕಚೇರಿ 8ರ ವ್ಯಾಪ್ತಿಯಲ್ಲಿ (ನೋಡಲ್ ಅಧಿಕಾರಿ ; ಸಹಾಯಕ ಆಯುಕ್ತ ಕೃಷ್ಣ, ಮೊ.ಸಂ. 94489 00617) ಸಂಚಾರ ಆರಂಭಿಸಲಿದೆ. ಶ್ರೀ ಮಾರುತಿ ದೇವಸ್ಥಾನ ಮಾರ್ಗ, ಶಿವಾಜಿ ರಸ್ತೆ, ಗಣಪತಿ ಟೆಂಪಲ್ ರಸ್ತೆಯ ಮೂಲಕ ರಾಜೇಂದ್ರನಗರ ಆರ್ಚ್ ವೃತ್ತ, ಶಿವಾಜಿ ರಸ್ತೆಯ 5ನೇ ಕ್ರಾಸ್ ರಸ್ತೆಯಿಂದ ಪಿಎನ್‌ಟಿ ರಸ್ತೆ ಹಾಗೂ ಎಂಜಿ ರಸ್ತೆ ಮೂಲಕ ಅಜೀಜ್ ಸೇಠ್ ಜೋಡಿ ರಸ್ತೆಯತ್ತ ಸಾಗಲಿದೆ.

ವಲಯ ಕಚೇರಿ 9ರ ವ್ಯಾಪ್ತಿಯ (ನೋಡಲ್ ಅಧಿಕಾರಿ ; ಶಿವಕುಮಾರ್, ಮೊ.ಸಂ. 99006 84767) ಅಜೀಜ್ ಸೇಠ್ ಮುಖ್ಯರಸ್ತೆಯ ಉದಯಗಿರಿ ಸಿಗ್ನಲ್‌ನಲ್ಲಿ ಸ್ವಾಗತ ಕಾರ್ಯಕ್ರಮ ನಡೆಯಲಿದ್ದು, ಬಳಿಕ ಕ್ಯಾತಮಾರನಹಳ್ಳಿಯ ಹುಲಿಯಮ್ಮ ದೇವಸ್ಥಾನದ ಹತ್ತಿರ ಪೂಜಾ ಕಾರ್ಯಕ್ರಮ ನಡೆಯಲಿದೆ. ನಂತರ ಅಜೀಜ್ ಸೇಠ್ ಮುಖ್ಯ ರಸ್ತೆಯಿಂದ ಡಾ.ರಾಜ್‌ಕುಮಾರ್ ರಸ್ತೆ ಟೆರೇಷಿಯನ್ ಕಾಲೇಜು ವೃತ್ತದಲ್ಲಿ ರಥ ಯಾತ್ರೆ ಸಂಚರಿಸಲಿದೆ. ಕೆಎ–51, 1981 ಹಾಗೂ ಕೆಎ–19, ಎಎ 1984 ಸಂಖ್ಯೆಗಳ ಎರಡು ರಥಗಳು ಸಂಚರಿಸಲಿವೆ.

ಜಿಲ್ಲಾ ವ್ಯವಸ್ಥಾಪಕರ ಕಚೇರಿ ಸ್ಥಳಾಂತರ

ಮೈಸೂರು, ನ.3– ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರ ಕಚೇರಿಯನ್ನು #918 ಶಿಲ್ಪಶ್ರೀ 1 ನೇ ಮಹಡಿ, 4ನೇ ಮೇನ್, ನ್ಯೂ ಕಾಂತರಾಜ ಅರಸು ರಸ್ತೆ, ಸರಸ್ವತಿಪುರಂ, ಮೈಸೂರು–570009 ಇಲ್ಲಿಗೆ ಸ್ಥಳಾಂತರಿಸಲಾಗಿಸದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 0821–2341194 ಹಾಗೂ ಇಮೇಲ್ dmdbcdcmysore@gmail.com ಅನ್ನು ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಲೇ ಗುಂಡ, ಇವತ್ತು ಯಾಕೊ ಅರ್ಧ ಪ್ಯಾಂಟ್ ಹಾಕ್ಕೊಂಡು ಬಂದಿದ್ದಿಯಾ ?
ಗುಂಡ : ಮೇಡಮ್ ಇವತ್ತು ಶನಿವಾರ ಅಲ್ವ ಅರ್ಧ ದಿನ ಮಾತ್ರ ಶಾಲೆ. ಇಡೀ ದಿನ ಇರುವಾಗ ಫುಲ್ ಪ್ಯಾಂಟ್ ಹಾಕ್ತೀನಿ.
ಟೀಚರ್: ದಯವಿಟ್ಟು ಭಾನುವಾರ ಮಾತ್ರ ಬರಬೇಡಪ್ಪ

ಮೈಸೂರು ಮಿತ್ರ
ಶುಕ್ರವಾರ, 4 ನವೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಒಳ್ಳೆಯ ಸಮಾಜ ಕಾಣಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ ಮೊದಲಿಗೆ ಅನ್ಯರ ಒಳಿತಿಗಾಗಿ. ಆ ಬಳಿಕ ತನ್ನ ಒಳಿತಿಗಾಗಿ ದುಡಿಯುವ ಮನೋಭಾವವನ್ನು ರೂಢಿಸಿಕೊಳ್ಳುವುದು ಅಗತ್ಯ. – ಡಾ.ರಾಧಾಕೃಷ್ಣನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುರ್ಯೋಧನನಿದ್ದಲ್ಲಿ ಕೌರವನ ಬಳಗಕ್ಕೆ ಕೊರತೆಯೇ?

ನಿಮ್ಮ ಪತ್ರಗಳು

ರೈಲಿನ ಸಮಯ ಬದಲಾಯಿಸಿ

ಮಾನ್ಯರೆ,

ಭಾರತದ ಹೆಮ್ಮೆಯ ವಂದೇ ಭಾರತ್ ರೈಲು ಚೆನ್ನೈನಿಂದ ಮುಂಜಾನೆ 5.30ಕ್ಕೆ ಹೊರಟು ಒಂದು ಘಂಟೆಗೆ ಮೈಸೂರಿಗೆ ಬಂದು ಮತ್ತೇ 1.30ಕ್ಕೆ ಮೈಸೂರು ಬಿಡುತ್ತದೆ ಎಂಬ ಸುದ್ದಿಯಿದೆ. ಹಾಗೆಯೇ ಈಗ ಹಾಲಿ ಸಂಚರಿಸುತ್ತಿರುವ ಶತಾಬ್ದಿ ರೈಲು ಅದರ ಸಮಯಕ್ಕೆ ಸಂಚಾರ ಮಾಡುತ್ತದೆ ಎಂದಿದೆ. ಎರಡೂ ರೈಲಿಗೆ ಒಂದೇ ದಿಕ್ಕಿನಲ್ಲಿ ಕೇವಲ ಅರ್ಧ ಘಂಟೆ ವ್ಯತ್ಯಾಸ ಸರಿಯಾದ ನಿರ್ಧಾರ ಅಲ್ಲ. ಕೊನೆಗೆ ಎರಡೂ ರೈಲಿಗೆ ಸಾಕಷ್ಟು ಪ್ರಯಾಣಿಕರು ಇಲ್ಲ ಎಂದು ರದ್ದು ಮಾಡಬೇಕಾಗುತ್ತದೆ. ಕೊಟ್ಟ ಹಾಗೆ ಮಾಡಿ ಕಿತ್ತುಕೊಂಡಂತಾಗುತ್ತದೆ. ಆದ್ದರಿಂದ ಯಾವುದಾದರೂ ಒಂದು ರೈಲನ್ನು ಬೆಳಗಿನ ವೇಳೆ ಮೈಸೂರಿಂದ ಹೊರಡುವ ರೀತಿ ಮಾಡಿದರೆ, ಎರಡೂ ರೈಲನ್ನು ಉಳಿಸಿ ಕೊಳ್ಳಬಹುದು. ಆದ್ದರಿಂದ ಬೆಳಗ್ಗೆ 6 ಗಂಟೆಗೆ ವಂದೇ ಭಾರತ್ ರೈಲು ಮೈಸೂರಿಂದ ಹೊರಡುವಂತೆ ಸಮಯವನ್ನು ಬದಲಾಯಿಸಲಿ.

–ಅಕ್ಕಿಹೆಬ್ಬಾಳು ವೆಂಕಟೇಶ್, ಮೈಸೂರು

ಉಚಿತ ಕೊಡುಗೆಗಳು ದೇಶಕ್ಕೆ ಮಾರಕ!

ಮಾನ್ಯರೆ,

ಚುನಾವಣೆ ಸಮಯದಲ್ಲಿ ರಾಜಕೀಯ ಪಕ್ಷಗಳು ಮತದಾರರನ್ನು ತಮ್ಮತ್ತ ಸೆಳೆಯಲು ಘೋಷಣೆ ಮಾಡುವ ಉಚಿತ ಕೊಡುಗೆಗಳಿಂದ ದೇಶದ ಆರ್ಥಿಕತೆ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಈ ಹಿಂದೆ ಒಂದೆರಡು ರಾಜ್ಯಗಳಿಗೆ ಸೀಮಿತವಾಗಿದ್ದ ಉಚಿತ ಕೊಡುಗೆಗಳು ಈಗ ದೇಶಾದ್ಯಂತ ಮತದಾರರನ್ನು ಸೆಳೆಯುವ ಅಸ್ತ್ರಗಳಂತೆ ಬಳಕೆಯಾಗುತ್ತಿರುವುದು ಬೇಸರದ ಸಂಗತಿಯಾಗಿದೆ. ಹೇಗಾದರೂ ಸರಿ ಅಧಿಕಾರಕ್ಕೇರಲೇಬೇಕು ಎಂಬ ಉಮೇದಿಯೊಂದಿಗೆ ರಾಜಕೀಯ ಪಕ್ಷಗಳು ಚುನಾವಣೆ ಪೂರ್ವದಲ್ಲಿ ಮಾಡುವ ಈ ಉಚಿತ ಘೋಷಣೆಗಳು ಜಾರಿಗೆ ಬಂದರೆ ಅವುಗಳ ಹೊರೆ ಬೀಳುವುದು ತೆರಿಗೆದಾರರಾದ ನಮ್ಮ ಮೇಲೆಯೇ. ಒಂದು ಪಕ್ಷ ಅಧಿಕಾರದ ಗದ್ದುಗೆ ಏರಲು ಸಾರ್ವಜನಿಕರ ಹಣವನ್ನು ಈ ರೀತಿ ಬೇಕಾಬಿಟ್ಟಿ ಪೋಲು ಮಾಡುವುದು ಎಷ್ಟು ಸರಿ ಎಂಬ ಚರ್ಚೆ ಹಾಗೂ ಆತ್ಮಾವಲೋಕನ ನಡೆಯುವುದು ಅವಶ್ಯಕ.

ಉಚಿತ ಘೋಷಣೆಗಳ ಜಾರಿಯಿಂದಾಗಿ ರಾಜ್ಯ ಹಾಗೂ ದೇಶದ ಆರ್ಥಿಕ ಪರಿಸ್ಥಿತಿ ಹಳ್ಳ ಹಿಡಿಯುತ್ತದೆ. ರಾಜಕೀಯ ಪಕ್ಷಗಳು ಆದಾಯ ಹೆಚ್ಚಳ, ಆರ್ಥಿಕ ವೃದ್ಧಿ ಹಾಗೂ ಉದ್ಯೋಗಾವಕಾಶಗಳ ಸೃಷ್ಟಿಯ ಮೂಲಕ ದುಡಿಯುವ ವರ್ಗವನ್ನು ಸೃಷ್ಟಿಸಬೇಕೆ ಹೊರತು ಉಚಿತ ಘೋಷಣೆಗಳನ್ನು ಮಾಡಿ ರಾಜ್ಯಗಳ ಆರ್ಥಿಕತೆಯನ್ನು ಹದಗೆಡಿಸುವುದಲ್ಲ. ಉಚಿತ ವಿದ್ಯುತ್, ಸಾಲಮನ್ನಾ, ಉಚಿತ ಬಸ್ ಪ್ರಯಾಣ, ನೀರು, ಕಂಪ್ಯೂಟರ್, ಟಿವಿ... ಹೀಗೆ ಸಾಲು ಸಾಲು ಉಚಿತವಾಗಿ ಕೊಡುತ್ತೇವೆ ಎಂಬ ಭರವಸೆಗಳನ್ನು ಚುನಾವಣಾ ಪೂರ್ವದಲ್ಲಿ ರಾಜಕೀಯ ಪಕ್ಷಗಳು ನೀಡಿ ಮತದಾರರನ್ನು ಸೆಳೆಯುವ ಪ್ರಯತ್ನವನ್ನು ಮೊದಲು ಕೈಬಿಡಬೇಕು. ಪ್ರತಿ ಚುನಾವಣೆಯಲ್ಲಿ ಜನರಿಗೆ ನೀಡಲಾಗುವ ಈ ರೀತಿಯ ಉಚಿತ ಘೋಷಣೆ ಹಾಗೂ ಕೊಡುಗೆಗಳಿಗೆ ಇತಿಶ್ರೀ ಹಾಕಲೇಬೇಕಾಗಿದೆ. ರಾಜಕೀಯ ಪಕ್ಷಗಳು ಚುನಾವಣಾ ಸಮಯದಲ್ಲಿ ನೀಡುವ ಈ ಉಚಿತ ಕೊಡುಗೆಗಳಿಂದಾಗುವ ಗಂಭೀರ ಆರ್ಥಿಕ ಹೊರೆಯ ಪರಿಣಾಮವನ್ನು ಅರಿತು ಕೇಂದ್ರ ಸರ್ಕಾರ, ಚುನಾವಣಾ ಆಯೋಗ ಹಾಗೂ ನ್ಯಾಯಾಲಯಗಳು ಈ ನಿಟ್ಟಿನಲ್ಲಿ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು ಎಂಬ ಚರ್ಚೆ ದೇಶದ ಜನರಲ್ಲಿ ಶುರುವಾಗಿ ಅಂತಿಮವಾಗಿ ಒಮ್ಮತದ ನಿರ್ಧಾರ ಕೈಗೊಳ್ಳುವುದು ತುರ್ತಾಗಿ ಅವಶ್ಯಕವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಸಿದ್ದರಾಮಯ್ಯಗೆ ಆತ್ಮವಿಶ್ವಾಸದ ಕೊರತೆಯೇ?

ಮಾನ್ಯರೆ,

ಮಾಜಿ ಮುಖ್ಯಮಂತ್ರಿ ಹಾಲಿ ವಿಧಾನಸಭಾ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ಹಿಂಬಾಲಕರು ಸಿದ್ದರಾಮಯ್ಯನವರನ್ನು ಮುಂದಿನ ಮುಖ್ಯಮಂತ್ರಿ ಎಂದು ಘೋಷಣೆ ಕೂಗುತ್ತಾರೆ. ಆದರೆ ಸಿದ್ದರಾಮಯ್ಯ ಅವರಿಗೆ ರಾಜ್ಯದ ಒಂದು ನಿರ್ದಿಷ್ಟ ವಿಧಾನಸಭಾ ಕ್ಷೇತ್ರದಿಂದ ಗೆದ್ದು ಬರುವ "ಆತ್ಮವಿಶ್ವಾಸ"ವಿಲ್ಲವೇ?

ಕಳೆದು ವರ್ಷ ಬೆಂಗಳೂರಿನ ಚಾಮರಾಜನಗರ ಕ್ಷೇತ್ರದಿಂದ ಸ್ಪರ್ಧೆ ಮಾಡುತ್ತಾರೆ ಎನ್ನುತ್ತಿದ್ದರು. ನಂತರ ಹುಣಸೂರುನಿಂದಲೇ ಸ್ಪರ್ಧೆ ಮಾಡಬಹುದು ಎಂದರು. ನಂತರ ವರುಣಾ ಕ್ಷೇತ್ರವೇ ಗ್ಯಾರಂಟಿ ಎಂದರು. ಈಗ ಅದು ಕೋಲಾರಕ್ಕೆ ಸ್ಥಳಾಂತರವಾಗಿದೆ.

ಚುನಾವಣೆ ಹತ್ತಿರವಾದಂತೆ ಇನ್ನೂ ಎರಡು–ಮೂರು ಕ್ಷೇತ್ರಗಳು ಬದಲಾವಣೆಯಾಗಬಹುದು. ಐದು ವರ್ಷ ಮುಖ್ಯಮಂತ್ರಿಯಾದವರು ಯಾವುದಾದರೂ ಒಂದು ನಿರ್ದಿಷ್ಟ ವಿಧಾನಸಭಾ ಕ್ಷೇತ್ರದಲ್ಲಿ ಗೆಲ್ಲುವ ವಿಶ್ವಾಸವಿಲ್ಲವೇ ಅಥವಾ ಸಿದ್ದರಾಮಯ್ಯ ಅವರಿಗೆ ಆತ್ಮ ವಿಶ್ವಾಸದ ಕೊರತೆಯೇ

–ಬೂಕನಕೆರೆ ವಿಜೇಂದ್ರ, ಮೈಸೂರು.

ಎಲ್ಲೆಡೆ ಮೊಳಗಲಿ ಕನ್ನಡದ ಕಂಪು

ಮಾನ್ಯರೆ.

ಕನ್ನಡ ರಾಜ್ಯೋತ್ಸವ ಪ್ರಯುಕ್ತ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 27 ನಿಮಿಷಗಳಲ್ಲಿ 10 ಸಾವಿರಕ್ಕೂ ಹೆಚ್ಚು ತಾಣಗಳಲ್ಲಿ 1.25ಕೋಟಿ ಮಂದಿ ಭಾಗವಹಿಸಿ ಕನ್ನಡದ ಕಂಪು ಮೂಡಿಸಿ ದಾಖಲೆಯನ್ನು ಸೃಷ್ಟಿಸಿದ್ದನ್ನು ದಿನಪತ್ರಿಕೆ ಹಾಗೂ ದೃಶ್ಯ ಮಾಧ್ಯಮದ ಮೂಲಕ ಓದಿ ನೋಡಿದ್ದೇವೆ. ಸರ್ಕಾರದಿಂದ ಹಾಗೂ ಕನ್ನಡಿಗರಿಂದ ಕನ್ನಡವನ್ನು ಉಳಿಸುವ ಮತ್ತು ಬೆಳೆಸುವ ಕಾರ್ಯಕ್ರಮಗಳನ್ನು ಆಗಾಗ ರೂಪಿಸಬೇಕಾಗಿದೆ.

ಪ್ರತಿನಿತ್ಯ ಬಳಸುವ ಜನಸಾಮಾನ್ಯರ ಕಂಗ್ಲಿಷ್ ಪದವನ್ನು ಬಿಡಬೇಕಾಗಿದೆ. ಬಸ್ ಸ್ಟಾಪ್, ಟು ವೀಲರ್, ಬಸ್ ಸ್ಟಾಂಡ್, ಸ್ಕೂಲ್, ಟೀಚರ್, ನ್ಯೂಸ್ ಪೇಪರ್, ಮಿಸ್ ಕಾಲ್, ಇನ್ ಕಮಿಂಗ್ ಕಾಲ್, ಹೆಲ್ಮೆಟ್, ಗೇಟ್, ಶರ್ಟ್, ಪ್ಯಾಂಟ್, ಷೋ ರೂಂ, ಸೋ, ಬಟ್, ಥ್ಯಾಂಕ್ಸ್, ಮೊಬೈಲ್ ಫೋನ್, ಚೇಂಜ್, ಚೇರ್, ರೋಡ್, ಪೆನ್, ಇಂತಹ ಇನ್ನೂ ಅನೇಕ ಪದಗಳನ್ನು ಬಳಸದೆ, ಕನ್ನಡ ಪದಗಳಾದ ಬಸ್ಸು ನಿಲ್ಲಿಸಿ, ದ್ವಿಚಕ್ರ ವಾಹನ, ಬಸ್ಸು ನಿಲ್ದಾಣ, ಶಾಲೆ, ಉಪಾಧ್ಯಾಯರು, ದಿನಪತ್ರಿಕೆ, ತಪ್ಪಿದ ಕರೆ, ಒಳಬರುವ ಕರೆ, ಶಿರಸ್ತ್ರಾಣ, ಬಾಗಿಲು, ಅಂಗಿ, ಷರಾಯಿ, ತೋರಿಸುವ ಮಳಿಗೆ, ನಂತರ, ವಂದನೆ, ಸಂಚಾರಿ ದೂರವಾಣಿ, ಬದಲಾವಣೆ, ಕುರ್ಚಿ, ರಸ್ತೆ, ಲೇಖನಿ ಈ ತರಹದ ಪದಗಳನ್ನು ದಿನ ನಿತ್ಯದ ವ್ಯವಹಾರ ಹಾಗೂ ಕೆಲಸದ ಸಂಪರ್ಕದ ವೇಳೆ ಬಳಸುವ ಮೂಲಕ ಕನ್ನಡದ ಕಂಪನ್ನು ಹರಿಸಬೇಕಾಗಿದೆ.

–ಕಂಗಾಣಿಸೋಮು ಪಿ ಸಿ, ಕ್ಯಾತಮಾರನಹಳ್ಳಿ ಮೈಸೂರು

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಹಮಾರಾ PRO


PRO ಎಂದರೆ ಪಬ್ಲಿಕ್ ರಿಲೇಶನ್ಸ್ ಆಫೀಸರ್, ಕನ್ನಡದಲ್ಲಿ ಹೇಳಬೇಕೆಂದರೆ ಸಾರ್ವಜನಿಕ ಸಂಪರ್ಕ ಅಧಿಕಾರಿ. ದೊಡ್ಡ ಸಂಸ್ಥೆಗಳಲ್ಲಿ ಅವುಗಳ ಹೆಸರು ಕೆಡದಂತೆ, ಅವು ಮಾಡುವ ಕಾರ್ಯವು ಯೋಗ್ಯ ರೀತಿಯಲ್ಲಿ ಜನರಿಗೆ ತಿಳಿಯುವಂತೆ, ಏನಾದರೂ ಅನಿರೀಕ್ಷಿತ ಅಚಾತುರ್ಯವು ಘಟಿಸಿದಾಗ ಅಪಪ್ರಚಾರ ಆಗದಂತೆ ನೋಡಿಕೊಳ್ಳಲು ಒಬ್ಬ ಪಿಆರ್‌ಓ ಇರುತ್ತಾರೆ.

ಈ ಕಾಲದಲ್ಲಿ ಸಮೂಹ ಮಾಧ್ಯಮಗಳ ಪ್ರಭಾವ ಹೆಚ್ಚಾಗಿರುವುದು ಎಲ್ಲರಿಗೂ ತಿಳಿದ ವಿಷಯ. ಪತ್ರಿಕಾ ಪ್ರತಿನಿಧಿಗಳು ಹಾಗೂ ಟಿ.ವಿ. ವಾರ್ತಾ ಸಂಗ್ರಾಹಕರು ಭಾವೋದ್ರೇಕಗೊಳಿಸುವ, ಸಮಾಜದಲ್ಲಿ ವಿಚಲನವನ್ನು ಉಂಟು ಮಾಡಬಲ್ಲ ಸುದ್ದಿಯನ್ನು ಹುಡುಕಲು ಮತ್ತು ತಾವೇ ಅದನ್ನು ಮೊತ್ತ ಮೊದಲು ಬೆಳಕಿಗೆ ತಂದವರಾಗಲು ಸದಾ ತುದಿಗಾಲಿನಲ್ಲಿ ನಿಂತಿರುತ್ತಾರೆ. ಯಾವ ಸುದ್ದಿ ಅಥವಾ ಘಟನೆ ರಹಸ್ಯವಾಗಿರಲಿ ಎಂದು ಸಂಸ್ಥೆ ಬಯಸುವುದೋ ಅದನ್ನು ಬಹಿರಂಗ ಮಾಡಲು ಸಮೂಹ ಮಾಧ್ಯಮಗಳು ಯಾವಾಗಲೂ ಸತತ ಪ್ರಯತ್ನವನ್ನು ಮಾಡುತ್ತಿರುತ್ತವೆ. ಇಂತಹ ಸನ್ನಿವೇಶದಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿ ಹೆಚ್ಚು ಎಚ್ಚರಿಕೆಯಿಂದ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ. ಕತ್ತಿಯ ಅಲುಗಿನ ಮೇಲೆ ನಡೆದಂತೆ ಪಿಆರ್‌ಓ ಕೆಲಸ ಮಾಡಬೇಕಾಗುತ್ತದೆ.


ಶ್ರೀ ಜಯಪ್ರಕಾಶ ಪುತ್ತೂರು ಅವರು ಈ ಪಿಆರ್‌ಓ ವೃತ್ತಿಯಲ್ಲಿ ಪಳಗಿದವರು. ಅದರಲ್ಲೇ ಈಜಿ ಮುಳುಗಿ ಮೇಲೆದ್ದವರು. ಸಾಹಿತ್ಯ ಕ್ಷೇತ್ರದಲ್ಲೂ ದುಡಿದು ಹಲವು ಪುಸ್ತಕಗಳನ್ನು ಬರೆದು ಹೆಸರನ್ನು ಪಡೆದವರು. ಅವರು ಈಚೆಗೆ, ಎಂದರೆ 2020ರಲ್ಲಿ ಓದುಗರಿಗೆ ಕೊಟ್ಟಿರುವ ಕೊಡುಗೆ **ಹಮಾರಾ PRO**. ಇದರಲ್ಲಿ ಅವರ ವೈವಿಧ್ಯಮಯ ಅನುಭವ ಹೆಪ್ಪುಗಟ್ಟಿದೆ. ಬ್ಯಾಂಕ್ ಉದ್ಯೋಗದಲ್ಲಿದ್ದವರು ತಮ್ಮ ವೃತ್ತಿಗೂ, ಪ್ರವೃತ್ತಿಗೂ ಹೊಂದಾಣಿಕೆಯನ್ನು ತಂದುಕೊಡುವ ಸಾರ್ವಜನಿಕ ಸಂಪರ್ಕಾಧಿಕಾರಿ ಆದರು. ರಕ್ಷಣಾ ಇಲಾಖೆಯ ಎ.ಡಿ.ಎ. (ಏರೊ ನಾಟಿಕಲ್ ಡೆವಲಪ್‌ಮೆಂಟ್ ಏಜೆನ್ಸಿ), ಡಿ.ಆರ್.ಡಿ.ಓ. ಮುಂತಾದ ಸಂಸ್ಥೆಗಳಲ್ಲಿ ಅವರು ಕೆಲಸ ಮಾಡಿದರು. ಅದರಿಂದ ಅವರ ಅನುಭವದ ಖಜಾನೆ ತುಂಬಿತು. ಅಂದು ಕೇಂದ್ರ ಮಂತ್ರಿಗಳಾಗಿದ್ದ ಜಾರ್ಜ್ ಫರ್ನಾಂಡೀಸ್, ರಾಷ್ಟ್ರಪತಿಗಳಾಗಿ ರಾಷ್ಟ್ರದ ಘನತೆ–ಗೌರವಗಳನ್ನು ಹೆಚ್ಚಿಸಿದ ಎ.ಪಿ.ಜೆ. ಅಬ್ದುಲ್ ಕಲಾಂ ಮುಂತಾದ ಮಹಾನುಭಾವರ ಒಡನಾಟ ಜಯಪ್ರಕಾಶ ಪುತ್ತೂರರ ಕಾರ್ಯ ನಿರ್ವಹಣಾ ಚಾತುರ್ಯವನ್ನು ಹೆಚ್ಚಿಸಿತು. ಕಲಾಂ ಅವರ 'Wings of Fire' ಎಂಬ ಪುಸ್ತಕವನ್ನು ಅವರು 2002ರಲ್ಲಿ ಕನ್ನಡಕ್ಕೆ **ಅಗ್ನಿಯ ರೆಕ್ಕೆಗಳು** ಎಂದು ಅನುವಾದಿಸಿದ್ದಾರೆ. ಅದು ಹದಿನೈದು ಮರು ಮುದ್ರಣಗಳನ್ನು ಕಂಡಿದೆ. ಇದು ಶ್ರೀ ಜಯಪ್ರಕಾಶ್ ಪುತ್ತೂರರ ಅನುವಾದ ಸಾಮರ್ಥ್ಯದ ಕೈಗನ್ನಡಿಯಾಗಿದೆ. **ಡಾ. ಅಬ್ದುಲ್ ಕಲಾಂ** ಎಂಬ ಅವರ ಪುಸ್ತಕ ಕನ್ನಡ ಶಿಶು ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ. **ಕಲಾಂ ಜೀವನ ಧರ್ಮ** ಎಂಬ ಪುಸ್ತಕ ಅವರಿಂದ 2018ರಲ್ಲಿ ರಚಿತವಾಗಿ ಈಗಾಗಲೇ ಮೂರು ಬಾರಿ ಮುದ್ರಿತವಾಗಿದೆ. ಐನೂರಕ್ಕಿಂತ ಹೆಚ್ಚು ವ್ಯಕ್ತಿ ವಿಕಸನ ತರಬೇತಿಗಳನ್ನು ನೀಡಿ ದಾಖಲೆ ನಿರ್ಮಿಸಿರುವುದಲ್ಲದೆ, ಈಗಲೂ ಕ್ರಿಯಾಶೀಲರಾಗಿದ್ದಾರೆ. ಹದಿನಾಲ್ಕು ರಾಷ್ಟ್ರಗಳಲ್ಲಿ ಅವರು ಉಪನ್ಯಾಸಗಳನ್ನು ನೀಡಿ ಜನಪ್ರಿಯರಾಗಿ ಈಗ ಮೈಸೂರಿನಲ್ಲಿ ನೆಲೆಸಿದ್ದಾರೆ. ರಾಷ್ಟ್ರ ಮಟ್ಟದ ಅನೇಕ ಪ್ರಶಸ್ತಿಗಳು ಅವರನ್ನು ಅಲಂಕರಿಸಿವೆ. 'ನಾವಿಕ' ವಿಶ್ವ ಕನ್ನಡ ಸಮ್ಮೇಳನದಲ್ಲಿ ಉಪನ್ಯಾಸವನ್ನು ನೀಡಿದ್ದಾರೆ.

'ಹಮಾರಾ PRO' ಪುಸ್ತಕದಲ್ಲಿ ಜಾರ್ಜ್ ಫರ್ನಾಂಡೀಸರ ವ್ಯಕ್ತಿ ಚಿತ್ರಣ ತುಂಬ ಚೆನ್ನಾಗಿ ಮೂಡಿ ಬಂದಿದೆ. ಅದರ ಕೆಲವು ಸಾಲುಗಳು ಹೀಗಿವೆ–

"ನನ್ನ ಬದುಕಿನ ವಿಶೇಷ ಭಾಗ್ಯ ಎಂದರೆ ರಾಷ್ಟ್ರ ಕಂಡ ಧೀಮಂತ ಮುತ್ಸದ್ದಿ, ಬಹಳ ಎತ್ತರದ ವ್ಯಕ್ತಿತ್ವ ಹೊಂದಿದ್ದ ಕರ್ನಾಟಕ ದಕ್ಷಿಣ ಕನ್ನಡ ಜಿಲ್ಲೆಯ ಹೆಮ್ಮೆಯ ಪುತ್ರ ಜಾರ್ಜ್ ಫರ್ನಾಂಡೀಸ್ ಸಾಹೇಬರಿಗೆ ಸಮನ್ವಯಾಧಿಕಾರಿ ಕೆಲಸ ಮಾಡುವ ಅವಕಾಶ ಲಭಿಸಿದ್ದು. ನೇರ ನಿಲುವಿನ, ನೆರೆತು ನಿಂತ ಉದ್ದ ಕೂದಲುಗಳು, ಮಗುವಿನಂತಹ ನಗೆಯ, ಸರಳ ಜುಬ್ಬಾ ಹಾಗೂ ಪೈಜಾಮಧಾರಿ, ಚಪ್ಪಲಿ ಹಾಕಿ ದಿಟ್ಟ ಹೆಜ್ಜೆಯ ಜಾರ್ಜ್ ಅವರ ಈ ವ್ಯಕ್ತಿತ್ವಕ್ಕೆ ಮಾರು ಹೋಗದವರೇ ಇಲ್ಲ. ಸದಾ ಇಕಾನಮಿ ದರ್ಜೆಯ ಟಿಕೇಟ್‌ನಲ್ಲಿ ಸಂಗಡಿಗರೊಂದಿಗೆ ವಿಮಾನದಲ್ಲಿ ಬಂದಿಳಿಯುವ ವೇಳೆ ಬಿಸಿನೆಸ್ ಕ್ಲಾಸ್‌ನಲ್ಲಿ ರೂಢಿ ಮಾಡಿಕೊಂಡ ಹಿರಿಯ ಅಧಿಕಾರಿಗಳು ಅಲ್ಲಿಂದಲೇ ಹಿಂದೆ ತಿರುಗಿ ಜಾರ್ಜ್ ಸಾಹೇಬರು ಇಳಿಯುವವರೆಗೆ ಕಾದು ಹೊರ ಬರುತ್ತಿರುವ ಹಿರಿಯ ಅಧಿಕಾರಿಗಳ ಗಡಣವನ್ನು ನೋಡಿ ಹಲವು ಬಾರಿ ನನಗೆ ನಗೆ ಬರುತ್ತಿತ್ತು. ಯಾವುದೇ ಕನಿಷ್ಠ ವೈಯಕ್ತಿಕ ಬೇಡಿಕೆಗಳನ್ನು ಹೊಂದಿರದ ಈ ಮನುಷ್ಯ ನೋಡಲು ಒರಟಾಗಿ ಕಂಡರೂ ಇವರ ಹೃದಯ ಖಂಡಿತಾ ಮೃದುವಾಗಿದ್ದು, ನಡವಳಿಕೆಯಲ್ಲಿ ಸರಳತೆ



ಡಾ.ಅಬ್ದುಲ್ ಕಲಾಂ



ಜಾರ್ಜ್ ಫರ್ನಾಂಡಿಸ್



ಜಯಪ್ರಕಾಶ್

ಎಂಬುದು ಎದ್ದು ಕಾಣುತ್ತಿತ್ತು. ಹಲವಾರು ವರ್ಷಗಳಲ್ಲಿ ವಿವಿಧ ಕಾರ್ಯಗಳಿಗೆ ಬೆಂಗಳೂರಿಗೆ ಬಂದಿಳಿಯುವ ಜಾರ್ಜ್ ಅವರ ಒಡನಾಟ ಬೆಳೆದಂತೆ ಅವರ ಸರಳತೆ ಹಾಗೂ ಸ್ನೇಹಕ್ಕೆ ಮಾರು ಹೋಗಿದ್ದೆ. ದಕ್ಷಿಣ ಕನ್ನಡ ಜಿಲ್ಲೆಯ ಭಾಷೆಯಾದ ತುಳುವಿನಲ್ಲಿಯೇ ನನ್ನೊಡನೆ ಸಂಭಾಷಿಸುತ್ತಿದ್ದ ಅವರು, ಎಲ್ಲಿ ನೋಡಿದರೂ 'ದಾಸಿ ಭಟ್ಟರೆ' ಎಂದು ಮಂದಹಾಸದಿಂದ ಮಾತನಾಡಿ ಸುವ ಪರಿಯನ್ನು ನಾನು ಎಂದಿಗೂ ಮರೆಯಲಾರೆ" (ಪುಟ 99–100).

ಪಿ.ಆರ್.ಓ. ಎಂತೆಂತಹ ಅನಿರೀಕ್ಷಿತ ಸಂದರ್ಭಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಶ್ರೀ ಜಯಪ್ರಕಾಶ್ ಪುತ್ತೂರು ಅವರು ಗ್ರಂಥದಲ್ಲಿ ವಿವರಿಸಿದ್ದಾರೆ. ಅವುಗಳಲ್ಲಿ ಒಂದು ಮನಸ್ಸನ್ನು ಕಲಕುವಂತಿದೆ.

"ಎಂದಿನಂತೆ ರಾತ್ರಿ ಊಟದ ಬಳಿಕ ತುರ್ತಾಗಿ ಈರುಳ್ಳಿ ತರಲು ಹೊರಟು ಏನೊಂದು ಗುರುತು ಚೀಟಿ ಹಿಡಿಯದೆ ಪರ್ಸ್ ಕೂಡ ಬಿಟ್ಟು ಹೋದ ಆ ವಿಜ್ಞಾನಿ ರಸ್ತೆ ದಾಟುವ ವೇಳೆ ಅಚಾತುರ್ಯ ನಡೆದು, ಅವರ ಮೇಲೆ 2 ವಾಹನಗಳು ಸವಾರಿ ಮಾಡಿದ ಆ ಘಟನೆ ನನಗೆ ನೆನಪಿದೆ. ರಾತ್ರಿ ವೇಳೆಯಲ್ಲಿ ನಡೆದ ಈ ಅಪಘಾತವು ಸಾರ್ವಜನಿಕರ ಮತ್ತು ಪೊಲೀಸರ ಗಮನಕ್ಕೆ ಬಂದು ಸರಕಾರಿ ಆಸ್ಪತ್ರೆಗೆ ಸೇರಿಸಿದ ಬಳಿಕ ಶಿರದಲ್ಲಿ ತೀವ್ರ ಗಾಯವೆಂದು ಪತ್ತೆಯಾಗಿ ಪ್ರತಿಷ್ಠಿತ ನಿಮ್ಹಾನ್ಸ್‌ಗೆ ಕೊಂಡೊಯ್ಯಾಗಲೇ ಪ್ರಾಯಶಃ ಜೀವ ತೊರೆದಾಗಿತ್ತೋ ಏನೋ. ಮನೆಯಲ್ಲಿ ಇವರ ಪತ್ನಿ ಓರ್ವಳೇ ಇದ್ದಳು. ಈ ವಿಷಯ ತಿಳಿದು ಮಗಳಿಗಾಗಿ ಸಂಪರ್ಕ ಬೆಳೆಸುವಾಗ ಬಹು ರಾತ್ರಿ ಕಳೆದಿತ್ತು. ಏನೊಂದು ವಿಧಿಯ ಲೀಲೆ ಎಂದರೆ ಆ ಡಾಕ್ಟರ್ ಮಗಳು ಇದೇ ನಿಮ್ಹಾನ್ಸ್‌ನಲ್ಲಿ ಹೌಸ್ ಸರ್ಜನ್ ಸೇವೆಯ ರಾತ್ರಿ ಪಾಳಿಯಲ್ಲಿ ಇನ್ನೊಂದು ವಿಭಾಗದಲ್ಲಿ ದುಡಿಯುತ್ತಿದ್ದು, ತನ್ನದೇ ತಂದೆ ಅದೇ ಆಸ್ಪತ್ರೆಗೆ ಜರ್ಝರಿತವಾಗಿ ಗಾಯಗೊಂಡು ತೀವ್ರ ನಿಗಾ ವಿಭಾಗದಲ್ಲಿ ಯಾರೂ ವಾರಸುದಾರರು ಇಲ್ಲದ ರೀತಿ ದಾಖಲಾದದ್ದು ತಿಳಿಯಲೇ ಇಲ್ಲ. ಸಾಧಾರಣ ಮಧ್ಯರಾತ್ರಿ ವೇಳೆಗೆ ಕಾಲ್ ಬಂದ ಕೂಡಲೇ ದೌಡಾಯಿಸಿ ಈ ಅಪಘಾತದ ಹಿಂದೆ ಅನ್ವೇಷಣೆ ಮಾಡುತ್ತಾ ಸಾಗಿದ ನನಗೆ ಹಲವಾರು ಅಡೆತಡೆಗಳು. ಮೊದಲು ಸ್ಥಳೀಯ ಪೊಲೀಸ್ ಸ್ಟೇಷನ್, ಕಂಟ್ರೋಲ್ ರೂಮ್, ಕ್ರೈಂ ಬ್ರಾಂಚ್, ಸರಕಾರಿ ಆಸ್ಪತ್ರೆಗಳ ಭೇಟಿ, ಒಂದೇ... ಎರಡೇ... ಕೊನೆಗೂ ಬೆಳಗಿನ ಜಾವದಲ್ಲಿ ನಮ್ಮ ವಿಜ್ಞಾನಿಯ ಶವವನ್ನು ಪತ್ತೆ ಹಚ್ಚಿಸಿದ ಬಳಿಕ ಬಿಳಿ ಬಟ್ಟೆ ಖರೀದಿಸಿ ತಂದು, ಉಳಿದ ಕೆಲಸಗಳಿಗೆ ಸಾಗುವ ವೇಳೆ, ಅವರ ಪತ್ನಿಯ ಹಾಗೂ ಪುತ್ರಿಯ ಶೋಕದ ಕ್ಷಣಗಳನ್ನು ಊಹಿಸಿ, ಹೇಗೆ ಆ ವೇಳೆ ಇಂತಹ ಕ್ಲಿಷ್ಟಕರವಾದ ಕಾರ್ಯ ನಿಭಾಯಿಸಿದೆ ಎಂದು ಯೋಚಿಸಿದರೆ ಈಗಲೂ ದುಃಖ ಉಮ್ಮಳಿಸಿ ಬರುತ್ತದೆ". (ಪುಟ 120).

ಇಂತಹ ಹಲವು ವಾಸ್ತವ ಸನ್ನಿವೇಶಗಳನ್ನು ಶ್ರೀ ಜಯಪ್ರಕಾಶ ಪುತ್ತೂರು ಇಲ್ಲಿ ದಾಖಲಿಸಿದ್ದಾರೆ. ಮಿನಿ ಭಾರತವೇ ಆಗಿದ್ದ ಡಿ.ಆರ್.ಡಿ.ಓ. ವಸತಿ ಸಮುಚ್ಚಯ ಅನೇಕ ಅಚಾನಕ್ ಘಟನೆಗಳ ಜಾಗವೂ ಆಗಿರುವುದು ಸಹಜವೇ. ಅಲ್ಲಿ ಪಿ.ಆರ್.ಓ. ಆಗಿ ಅವರು ಎದುರಿಸಿದ ಸಮಸ್ಯೆಗಳ ಸರಮಾಲೆಯೇ ಇಲ್ಲಿದೆ. ಅವುಗಳ ಜೊತೆಗೆ ಅವರ ಉತ್ತಮ ಕಾರ್ಯಕ್ಕೆ ದೊಡ್ಡವರು ಹೇಳಿದ ಪ್ರಶಂಸಾ ವಾಕ್ಯಗಳೂ ಇವೆ. ಸ್ಥಿತಪ್ರಜ್ಞರಂತೆ ಜೆ.ಪಿ.(ಜಯಪ್ರಕಾಶ ರಾವ್ ಪುತ್ತೂರು) ಎಲ್ಲವನ್ನೂ ಸಮಾನ ಹೃದಯದಿಂದ ಸ್ವೀಕರಿಸಿದ್ದಾರೆ. ಕಷ್ಟ ಕಾಲದಲ್ಲಿ ಸಂಸ್ಥೆಯ ಎಲ್ಲರಿಗೂ ಸಾರ್ವಜನಿಕ ಸಂಪರ್ಕಾಧಿಕಾರಿ ಆಪದ್ಬಾಂಧವನಾಗಿ ಕಾರ್ಯ ಮಾಡುತ್ತಾನೆ ಎಂಬುದನ್ನು ಅವರು ತೋರಿಸಿದ್ದಾರೆ.

ಮೈಸೂರಿನಲ್ಲಿ ಶ್ರೀ ದಯಾನಂದರು ಐ.ಜಿ.ಪಿ. ಮತ್ತು ಕಮೀಷನರ್ ಆಗಿದ್ದಾಗ ಜಯಪ್ರಕಾಶ್ ಪುತ್ತೂರು ಗೌರವ ಸಲಹೆಗಾರರಾಗಿ ಪೊಲೀಸ್ ಇಲಾಖೆಗೆ ನೀಡಿದ ಪ್ರಶಿಕ್ಷಣದ ವಿಚಾರವೂ ಈ ಪುಸ್ತಕದಲ್ಲಿ ಬಂದಿದೆ. ಪೊಲೀಸರು ನಮ್ಮ ಮಿತ್ರರು ಎಂಬ ಭಾವನೆ ಸಾರ್ವಜನಿಕರಲ್ಲಿ ಹುಟ್ಟಬೇಕು. ಅವರಿಂದ ದೂರವಿದ್ದರೆ ಕ್ಷೇಮ ಎಂಬ ಭಯಭರಿತ ಭಾವನೆ ತೊಲಗಬೇಕು. ಇದಕ್ಕಾಗಿ ಇಲಾಖೆಯೂ ತನ್ನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡರೆ ಒಳಿತು. ಈ ಬಗೆಗೆ ಲೇಖಕರು ಮಾಡಿರುವ ಪ್ರಯತ್ನಗಳು ಸ್ವಾಗತಾರ್ಹ.

Success has many fathers, failure is an orphan always (ಸಾಫಲ್ಯದ ತಂದೆಯಂದಿರು ಸಾವಿರ, ವೈಫಲ್ಯವು ಸದಾ ಅನಾಥ ಕುವರ) ಎಂಬ ಗಾದೆಯನ್ನು ಲೇಖಕರು **ಕೊನೆಯ ಮಾತು** ಎಂಬ ಅಧ್ಯಾಯದಲ್ಲಿ ಉದಾಹರಿಸಿದ್ದಾರೆ. ಯಾವುದಾದರೂ ಸಮಾರಂಭ ಯಶಸ್ವಿಯಾದರೆ ಅದಕ್ಕೆ ನಾನೇ ಕಾರಣ ಎಂದು ಎಲ್ಲರೂ ಹೇಳಿಕೊಳ್ಳುತ್ತಾರೆ. ಅದೇನಾದರೂ ವಿಫಲವಾದರೆ ಪ್ರತಿಯೊಬ್ಬರೂ ಇತರರನ್ನು ದೂಷಿಸುತ್ತಾರೆ. ದೂಷಣೆಗೆ ಹೇಗೋ ಒಳಗಾಗುವ ವ್ಯಕ್ತಿ ಪಿ.ಆರ್.ಓ. ಇದಕ್ಕೆ ಅವನು ಹಿಂಜರಿಯಬಾರದು, ಎದೆಗುಂದಬಾರದು ಎಂಬುದು ಜೆ.ಪಿ. ಅವರ ಸೂಚನೆ.

ಜಯಪ್ರಕಾಶ ಪುತ್ತೂರು ಅವರ ಅಧಿಕಾರಿಕ (official) ಹೆಸರು ಕೆ.ಜಯಪ್ರಕಾಶ ರಾವ್. ಅನೇಕ ದೇಶಗಳಲ್ಲಿ ಸಂಚಾರ ಮಾಡಿರುವ ಅವರ ಮಿತ್ರ ಸಮೂಹ ದೊಡ್ಡದು. ಅದರಲ್ಲಿ ಒಬ್ಬರಾದ, ಇಂಟರ್ ಟೆಕ್ನಾಲಜಿಯ ನಿವೃತ್ತ ನಿರ್ದೇಶಕರಾದ ಎಸ್.ಆರ್.ವಿಜಯ ಶಂಕರ್ ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ. ಅವರೂ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಅನುಭವವನ್ನು ಗಳಿಸಿಕೊಂಡವರು. ಅವರು ಬರೆದಿದ್ದಾರೆ.

"ಅದೇ ರೀತಿ ತಮ್ಮ ಮೇಲಾಧಿಕಾರಿಗಳನ್ನು ನಿಭಾಯಿಸುವುದು ಕೂಡ ಪಿ.ಆರ್.ಓ. ಮಟ್ಟಿಗೆ ಒಂದು ಕಲೆ. ಆತನ ಜನಪ್ರಿಯತೆಯಿಂದಾಗಿಯೇ ಹಲವು ಸಲ ತನ್ನಿಂದ ಮೇಲಾಧಿಕಾರಿಗಳ ಕೆಂಗಣ್ಣಿಗೆ ಪಿ.ಆರ್.ಓ. ಗುರಿಯಾಗಬೇಕಾಗುತ್ತೆ. ಯಶಸ್ವಿ ಪಿ.ಆರ್.ಓ.ನನ್ನು ಆತನ ತತ್‌ಕ್ಷಣದ ಮೇಲಾಧಿಕಾರಿಗಳು ತಮಗೊಬ್ಬ ಅನಗತ್ಯ ಸ್ಪರ್ಧಿ ಎಂದು ತಿಳಿಯುವ ಸಾಧ್ಯತೆಗಳು ಹೆಚ್ಚು. ಮಣಿಪಾಲದಲ್ಲಿ ಜೆ.ಪಿ.ಯವರನ್ನು ಬ್ಯಾಂಕಿನ ಹೌಸ್ ಜನರಲ್ ಜವಾಬ್ದಾರಿಯಿಂದ ತೆಗೆದು ಹಾಕಿದಾಗ ವಿನಯಪೂರ್ವಕ ಜನರಲ್ ಮ್ಯಾನೇಜರ್ ಅವರನ್ನು ಕಂಡು ತಮ್ಮ ವೃತ್ತಿಯ ಮೂಲ ಆವಶ್ಯಕತೆಯಾದ ಹೌಸ್ ಜನರಲ್ ಜವಾಬ್ದಾರಿಯನ್ನು ಅವರು ಉಳಿಸಿಕೊಂಡದ್ದು ಇದಕ್ಕೊಂದು ಸಾಕ್ಷಿ".

ಡಿ.ಆರ್.ಡಿ.ಓ. ಸಂಸ್ಥೆಯಲ್ಲಿ ವಿಜ್ಞಾನಿಗಳಾಗಿದ್ದ ಶ್ರೀ ಸುಧೀಂದ್ರ ಹಾಲ್ದೊಡ್ಡೇರಿಯವರು "ಈ ಪುಸ್ತಕ ಕೇವಲ ಹಳೆಯ ಅನುಭವಗಳ ಹಳಹಳಿಕೆಯಲ್ಲ. ಎಲ್ಲ ಸಂದರ್ಭಗಳಲ್ಲೂ(ನ್ನೂ) ಅವಕಾಶಗಳೆಂದೇ ಬಗೆದು ವೃತ್ತಿಯಲ್ಲಿ ಮುದುವರಿಯಬೇಕೆನ್ನುವವರಿಗೆ ಒಂದು ಪರೋಕ್ಷ ಮಾರ್ಗದರ್ಶಿ. ಜೆ.ಪಿ. ಒಡನಾಡಿದ್ದೆಲ್ಲಾ ತಂತ್ರಜ್ಞಾನ ಕ್ಷೇತ್ರದ ಮಹಾನ್ ಸಾಧಕರುಗಳ ನಡುವೆ. ಅವರಲ್ಲಿ ಕೆಲವು ಸಮಯ ಸಾಧಕರೂ ಇದ್ದರು. ಅವರೊಡನಿದ್ದೂ ಅವರಂತಾಗದೆಯೇ ತಾವು ಪ್ರತಿನಿಧಿಸುವ ಸಂಸ್ಥೆಗೆ ಮಾತ್ರ ತಮ್ಮ ಮೊದಲ ನಿಷ್ಠೆಯೆಂಬುದನ್ನು ಅವರು ತೋರಿಸಿಕೊಟ್ಟರು" ಎಂದು ಲೇಖಕರ ಹಿರಿಮೆಯನ್ನು ಹೊಗಳಿದ್ದಾರೆ.

ಈ ಪುಸ್ತಕವನ್ನು **ಸಪ್ನ ಬುಕ್ ಹೌಸ್** ಪ್ರಕಟಿಸಿದೆ ಎಂಬುದೂ ಲೇಖಕರ ಮತ್ತು ಪುಸ್ತಕದ ಅಂತಸ್ಸತ್ವವನ್ನು ತೋರಿಸುತ್ತದೆ. ಇದರಲ್ಲಿರುವ ಅಮೂಲ್ಯ ರೇಖಾಚಿತ್ರಗಳು ಮತ್ತು ಭಾವಚಿತ್ರಗಳು ಗ್ರಂಥದ ಮೌಲ್ಯವನ್ನು ಹೆಚ್ಚಿಸಿವೆ. ನಮ್ಮ ದೇಶವು ಕಂಡ ಶ್ರೇಷ್ಠ ರಾಷ್ಟ್ರಪತಿ ಅಬ್ದುಲ್ ಕಲಾಂ ಅವರೇ ಜೆ.ಪಿ. ಅವರನ್ನು ಮೆಚ್ಚಿಕೊಂಡಿದ್ದರು ಎಂದ ಮೇಲೆ ಅವರಿಗೆ ಬೇರೆ ಯಾರ ಶಿಫಾರಸೂ ಬೇಕಿಲ್ಲ. ಈ ಪುಸ್ತಕ ಓದುಗರಿಗೆ ರುಚಿಸುತ್ತದೆ ಎಂದು ಹೇಳಬಯಸುತ್ತೇನೆ.

ಮೈಸೂರು ನಗರದಲ್ಲಿ ವಾಹನ ಸವಾರರ ಜೀವಕ್ಕೆ ಬೆಲೆಯೇ ಇಲ್ಲವೇ...?

● ಹೊಂಡಮಯ ರಸ್ತೆಗಳ ಬಗ್ಗೆ ಸಾರ್ವಜನಿಕರ ಆಕ್ರೋಶ ● ಅಧಿಕಾರಿಗಳ ವಿಳಂಬ ಧೋರಣೆ; ಜನಪ್ರತಿನಿಧಿಗಳ ಬೇಜವಾಬ್ದಾರಿಗೆ ಕಿಡಿಕಿಡಿ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ಭಾರೀ ಹೊಂಡಗಳ ನಡುವೆ ವಾಹನ ಸಂಚಾರ

ಹೆದ್ದಾರಿಯಲ್ಲಿಯೇ ಇದೆ ಅಪಾಯಕಾರಿ ಹೊಂಡ

ಮೈಸೂರು–ಹುಣಸೂರು ಮುಖ್ಯರಸ್ತೆ, ಹಿನಕಲ್‌ನಲ್ಲಿ ನೀರಿನ ಪೈಪ್ ದುರಸ್ತಿಗಾಗಿ ವರ್ಷದ ಹಿಂದೆ ತೆಗೆದಿದ್ದ ಗುಂಡಿಯನ್ನು ಸಮರ್ಪಕವಾಗಿ ಮುಚ್ಚದ ಪರಿಣಾಮ ಅಲ್ಲಿ ದೊಡ್ಡ ಹೊಂಡವಾಗಿದೆ. ಹೂಟಗಳ್ಳಿ ನಗರಸಭೆಯಿಂದ ಮೂರು ಬಾರಿ ದುರಸ್ತಿ ನಡೆಸಿದರೂ ಕಳಪೆ ಕಾಮಗಾರಿಯಿಂದಾಗಿ ಮತ್ತೆ ಕಿತ್ತು ಹೈರಾಣಾಗಿದೆ. ಈ ಗುಂಡಿಯಿಂದಾಗಿ ನಿತ್ಯ ಅಪಘಾತ ಸಂಭವಿಸುತ್ತಿವೆ. ಬುಧವಾರವೂ ದ್ವಿಚಕ್ರ ವಾಹನ ಸವಾರರೊಬ್ಬರು ಬಿದ್ದು ಗಾಯಗೊಂಡಿದ್ದಾರೆ. ಹಿಂದಿನಿಂದ ಯಾವುದಾದರೂ ವಾಹನ ಹರಿದಿದ್ದರೆ ಅವರ ಪ್ರಾಣವೇ ಹೋಗುತ್ತಿತ್ತು ಆದರೆ ಇದೇ ರಸ್ತೆಯಲ್ಲಿ ಐಷಾರಾಮಿ ಕಾರುಗಳಲ್ಲಿ ಸಂಚರಿಸುವ ಜನಪ್ರತಿನಿಧಿಗಳಿಗೆ ಮಾತ್ರ ಈ ಸಾವಿನ ಹೊಂಡ ಕಾಣಿಸಿಲ್ಲ. ಅಧಿಕಾರಿಗಳಂತೂ ನಿರ್ಲಜ್ಜರಾಗಿದ್ದಾರೆ. ಅಪಾಯಕಾರಿ ಗುಂಡಿಯನ್ನು ಸರಿಯಾದ ರೀತಿಯಲ್ಲಿ ಮುಚ್ಚಿಸದಿದ್ದರೆ ರಸ್ತೆ ತಡೆ ನಡೆಸಿ, ಪ್ರತಿಭಟಿಸುವುದಾಗಿ ಸ್ಥಳೀಯರು ಎಚ್ಚರಿಕೆ ನೀಡಿದ್ದಾರೆ.



ಮೈಸೂರು,ನ.3(ಎಸ್‌ಬಿಡಿ)–ಮೈಸೂರು ನಗರದಲ್ಲಿ ವಾಹನ ಸವಾರರ ಜೀವಕ್ಕೆ ಬೆಲೆಯೇ ಇಲ್ಲವೇ? ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ಈ ಕಟುವಾದ ಪ್ರಶ್ನೆಗೆ ರಸ್ತೆ ಗುಂಡಿಗಳ ಮೇಲಿನ ಆತಂಕ ಹಾಗೂ ಜಡ್ಡು ಹಿಡಿದಿರುವ ಪಾಲಿಕೆ ವಿರುದ್ಧದ ಆಕ್ರೋಶವೇ ಕಾರಣ. ರಸ್ತೆ ಗುಂಡಿ ಮುಚ್ಚುವುದಕ್ಕೂ ಒಂದಿಲ್ಲೊಂದು ಕುಂಟುನೆಪ ಹೇಳಿಕೊಂಡು 2–3 ವರ್ಷ ಸವೆಸಿರುವ ಪಾಲಿಕೆ, ಈಗ ಎಲ್ಲವೂ ಸರಿಯಿದ್ದರೂ ನಿದ್ದೆಯ ಮಂಪರಿನಿಂದ ಹೊರಬಂದಿಲ್ಲ. ಜನರ ತಾಳ್ಮೆ, ಮೃದುಧೋರಣೆಯನ್ನು ಪಾಲಿಕೆ ದುರುಪಯೋಗಪಡಿಸಿಕೊಳ್ಳುತ್ತಿದೆ. ಯಾರಾದರೂ ತೀಕ್ಷ್ಣವಾಗಿ ಪ್ರಶ್ನಿಸಿದರೆ ಏನಾದರೊಂದು ವಿಚಾರವನ್ನು ಗುರಾಣಿಯಾಗಿ ಬಳಸಿಕೊಂಡು ನುಣುಚಿಕೊಳ್ಳುವ ಪ್ರಯತ್ನ ಮುಂದುವರೆಸಿಕೊಂಡು ಬರಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನಲ್ಲಿ ಕಳೆದ ತಿಂಗಳು ರಸ್ತೆ ಗುಂಡಿ ತಪ್ಪಿಸಲು ಹೋಗಿ ದ್ವಿಚಕ್ರ ವಾಹನಕ್ಕೆ ಬಸ್ ಡಿಕ್ಕಿ ಹೊಡೆದು ಮಹಿಳೆಯೊಬ್ಬರು ಮೃತಪಟ್ಟರು. ಮತ್ತೊಂದು ಪ್ರಕರಣದಲ್ಲಿ ಇದೇ ಕಾರಣಕ್ಕೆ ಕಾರು ಪಲ್ಟಿಯಾಗಿ ಎದುರಿಗೆ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದು ವ್ಯಕ್ತಿಯೊಬ್ಬರನ್ನು ಬಲಿ ಪಡೆಯಿತು. ಈ ಘಟನೆಗಳು ರಾಜ್ಯದೆಲ್ಲೆಡೆ ಚರ್ಚೆಯಾಗಿದ್ದಲ್ಲದೆ ಸರ್ಕಾರದ ವಿರುದ್ಧ ಜನ ಹಿಡಿಶಾಪ ಹಾಕಿದರು. ಆದರೆ ಇಂತಹ ಸಾವಿನ ಗುಂಡಿಗಳು ಮೈಸೂರಿನಲ್ಲೂ ಸಾಕಷ್ಟಿವೆ. ವಾಹನ ಸವಾರರು ಹಾಗೂ ಪಾದಚಾರಿಗಳ ಜೀವಬಲಿಗೆ ಕಾದು ಕುಳಿತಿವೆ. ಸಣ್ಣ ಪುಟ್ಟ ಅಪಘಾತಗಳೂ ಸಂಭವಿಸುತ್ತಿವೆ. ಗುಂಡಿಮಯ ರಸ್ತೆ ಸಂಚಾರದಿಂದ ಅದೆಷ್ಟೋ ಜನ ಬೆನ್ನುನೋವು ಇನ್ನಿತರ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಆದರೂ ಪಾಲಿಕೆ ಮಾತ್ರ ಆಮೆಗತಿಯಲ್ಲೇ ನಡೆಯುತ್ತಿದೆ. ನಗರದ ಜೆಎಲ್‌ಬಿ ರಸ್ತೆ, ವಾಣಿವಿಲಾಸ ಜೋಡಿ ರಸ್ತೆ ಸೇರಿದಂತೆ ಹಲವು ಪ್ರಮುಖ ರಸ್ತೆಗಳು ಗುಂಡಿಮಯವಾಗಿವೆ. ಅಲ್ಲಲ್ಲಿ ದೊಡ್ಡ ಹೊಂಡಗಳು ನಿರ್ಮಾಣವಾಗಿವೆ. ದ್ವಿಚಕ್ರ ವಾಹನ ಸವಾರರು ಸಂಚಾರಕ್ಕೆ ಹರಸಾಹಸ ಮಾಡಬೇಕು. ಆಟೋ, ಗೂಡ್ಸ್ ವಾಹನ, ಕಾರುಗಳ ಓಡಾಟವೂ ಸುಲಭವಲ್ಲ. ಇನ್ನು ರೋಗಿಗಳನ್ನು ಸಕಾಲಕ್ಕೆ ಆಸ್ಪತ್ರೆಗೆ ತಲುಪಿಸುವ ಆಂಬುಲೆನ್ಸ್‌ಗಳ ಪರಿಸ್ಥಿತಿ ಹೇಳತೀರದು. ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳು ಇಂತಹ ಗುಂಡಿಮಯ ರಸ್ತೆಗಳಲ್ಲಿ ಸಾಗುವುದನ್ನು ನೋಡುವುದಕ್ಕೂ ಭಯವಾಗುತ್ತದೆ. ಒಟ್ಟಾರೆ ಮೈಸೂರಿನ ಬಹುತೇಕ ರಸ್ತೆಗಳು ಅಪಾಯಕಾರಿ ಸ್ಥಿತಿ ತಲುಪಿವೆ.

ದಸರಾಗೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಭೇಟಿಯ ಕಾರಣಕ್ಕೆ ಐದಾರು ರಸ್ತೆಗಳನ್ನು ಅಭಿವೃದ್ಧಿಪಡಿಸಿದರು. ದಸರಾ ಸಂದರ್ಭದಲ್ಲಿ ಕೆಲ ರಸ್ತೆಗಳಲ್ಲಿ ತೇಪೆ ಹಾಕಿದರು. ನಂತರದಲ್ಲಿ ಅಲ್ಲೊಂದು ಇಲ್ಲೊಂದು ರಸ್ತೆಗೆ ಡಾಂಬರೀಕರಣ ಮಾಡಲಾಗುತ್ತಿದೆ. ಸುನಂದಾ ಪಾಲನೇತ್ರ ಅವರು ಮೇಯರ್ ಆಗಿದ್ದ ಸಂದರ್ಭದಲ್ಲಿ ರಸ್ತೆ ಗುಂಡಿ ಮುಚ್ಚುವುದಕ್ಕಾಗಿ ಪ್ರತಿ ವಾರ್ಡ್‌ಗೆ 10 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿತ್ತು. ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸುವುದಾಗಿ ತಿಳಿಸಲಾಗಿತ್ತು. ಆದರೆ ಅದೆಲ್ಲಾ ಎಷ್ಟರಮಟ್ಟಿಗೆ ನಡೆದಿದೆ ಎನ್ನುವುದು ಜನರಿಗೆ ತಿಳಿದಿಲ್ಲ.

ರಸ್ತೆ ದುರಸ್ತಿ ವಿಚಾರ ಕೇಳಿದಾಗಲೆಲ್ಲಾ ಅಧಿಕಾರಿಗಳು ಮಳೆ ನೆಪ ಹೇಳುತ್ತಿದ್ದರು. ಆದರೆ ದಸರಾ ವೇಳೆ ಮಳೆಯಲ್ಲೇ ತರಾತುರಿಯಲ್ಲಿ ಕೆಲ ರಸ್ತೆಗಳ ಗುಂಡಿ ಮುಚ್ಚಿದರು. ಮಳೆಯಿಂದ ಕಾಮಗಾರಿ ಹಾಳಾಗದಂತೆ ಹೊಸ ತಂತ್ರಜ್ಞಾನ ಬಳಸಿಕೊಳ್ಳುವ ಚರ್ಚೆಯೂ ನಡೆಯಿತು. ಸದ್ಯ ಮಳೆ ಬಿಡುವು ನೀಡಿದ್ದರೂ ಅಧಿಕಾರಿಗಳು ಎಚ್ಚೆತ್ತುಕೊಂಡಿಲ್ಲ. ನೋಡ ನೋಡಿಕೊಂಡೇ ದಿನದೂಡುತ್ತಿದ್ದಾರೆ. ನಿರಂತರವಾಗಿ ವಾಹನಗಳು ಓಡಾಡುವ ಪ್ರಮುಖ ರಸ್ತೆಗಳಲ್ಲಿರುವ ಸಾವಿನ ಗುಂಡಿಗಳನ್ನು ಮುಚ್ಚುವ ಪ್ರಯತ್ನವನ್ನೂ ನಡೆಸಿಲ್ಲ. ಅಮಾಯಕರ ಜೀವಬಲಿ ಪಡೆದ ನಂತರವೇ ಕೆಲಸ ಚುರುಕುಗೊಳಿಸುವ ಚಿಂತನೆಯಲ್ಲಿದ್ದಂತಿದೆ. ಅಂತಹ ಪಾಪಕೃತ್ಯ ತಮ್ಮಿಂದ ನಡೆಯದಂತೆ ಇನ್ನಾದರೂ ನಗರಪಾಲಿಕೆ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ಆಗ್ರಹಿಸಿದ್ದಾರೆ.

ನ.6ರಂದು ಸೂರ್ಯೋದಯದಿಂದ ಚಂದ್ರೋದಯದವರೆಗೆ ಕಾರ್ತಿಕ ಸಂಭ್ರಮ

ಮೈಸೂರು,ನ.3(ಎಂಟಿವೈ)–ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ನ.6ರಂದು ಸೂರ್ಯೋದಯದಿಂದ ಚಂದ್ರೋದಯದವರೆಗೆ ಕಾರ್ತಿಕ ಸಂಭ್ರಮ ಆಯೋಜಿಸಲಾಗಿದೆ ಎಂದು ಅಜ್ಜನಮನೆ ಕಲಾ ಪ್ರಪಂಚ ಸಂಸ್ಥೆ ವ್ಯವಸ್ಥಾಪಕ ಟ್ರಸ್ಟಿ ಕೃಷ್ಣ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಜ್ಜನಮನೆ ಕಲಾ ಪ್ರಪಂಚ ಸಂಸ್ಥೆಯಿಂದ ಕಾರ್ತಿಕ ಸಂಭ್ರಮ ಕಾರ್ಯಕ್ರಮವು ನ.6ರಂದು ಬೆಳಗ್ಗೆ 6.15ಕ್ಕೆ ಉದ್ಘಾಟನೆಗೊಳ್ಳಲಿದೆ. ಇದು ಸಂಜೆ 7.15ರವರೆಗೆ ಸುಮಾರು 12 ಗಂಟೆಗಳ ನಡೆಯುವ ಕಾರ್ಯಕ್ರಮವಾಗಿದೆ. ಇದರಲ್ಲಿ ಒಟ್ಟು 12 ಶಾಲೆಗಳ 152 ಮಕ್ಕಳು ಪಾಲ್ಗೊಳ್ಳಲಿದ್ದಾರೆ. ಮಕ್ಕಳಿಗೆ ವೇದಿಕೆ ಕಲ್ಪಿಸುವುದು ಇದರ ಉದ್ದೇಶವಾಗಿದ್ದು, 9 ಕಲಾ ಶಾಲೆಗಳ ಮಕ್ಕಳು ಬೇರೆ ಬೇರೆ ಕಲಾ ಪ್ರಕಾರವನ್ನು ಪ್ರದರ್ಶಿಸಲಿದ್ದಾರೆ. ಈ ಸಂದರ್ಭದಲ್ಲಿ ಮೂರು ಗಂಟೆ ಕಾಲ ವಿಶೇಷ ಮಕ್ಕಳು ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ನೀಡಲಾಗುತ್ತಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಟ್ರಸ್ಟಿ ಸುಮಾ ಕೃಷ್ಣಮೂರ್ತಿ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬೆಳ್ಳಿ ಬೆಳಕು

ಸತ್ಯಮೂರ್ತಿ ತೋಳಹುಣಸೆ



ಬನಾರಸ್

2500 ಚಿತ್ರಮಂದಿರಗಳಲ್ಲಿ

'ಒಲವೇ ಮಂದಾರ', 'ಬ್ಯೂಟಿಫುಲ್ ಮನಸುಗಳು', 'ಬೆಲ್ ಬಾಟಂ' ನಂಥ ಯಶಸ್ವೀ ಚಿತ್ರಗಳನ್ನು ನಿರ್ದೇಶಿಸಿದ ಜಯತೀರ್ಥ ಅವರ ಮತ್ತೊಂದು ಅದ್ದೂರಿ ಪ್ರೇಮ ಕಥಾನಕ 'ಬನಾರಸ್' ಇಂದಿನಿಂದ ದೇಶಾದ್ಯಂತ ತೆರೆಕಾಣುತ್ತಿದೆ. ಮಾಜಿ ಸಚಿವ, ಹಾಲಿ ಶಾಸಕ ಜಮೀರ್ ಅಹಮದ್‌ಖಾನ್ ಪುತ್ರ ಜೈದ್‌ಖಾನ್ ಮೊದಲ ಬಾರಿಗೆ ನಾಯಕನಾಗಿ ನಟಿಸಿರುವ ಚಿತ್ರ ಇದಾಗಿದ್ದು, ಕನ್ನಡ, ತೆಲುಗು, ಹಿಂದಿ ಸೇರಿದಂತೆ 7 ಭಾಷೆಗಳಲ್ಲಿ 2500 ಚಿತ್ರ ಮಂದಿರಗಳಲ್ಲಿ ಭರ್ಜರಿಯಾಗಿ ತೆರೆ ಕಾಣುತ್ತಿದೆ. ಕಳೆದೊಂದು ತಿಂಗಳಿಂದ ಚಿತ್ರ ತಂಡ ರಾಜ್ಯಾದ್ಯಂತ ಚಿತ್ರದ ಪ್ರಚಾರ ಕಾರ್ಯವನ್ನು ಭರದಿಂದ ನಡೆಸಿತ್ತು, ಮೊನ್ನೆಸಂಜೆ ಮಾಧ್ಯಮದ ಮುಂದೆ ಹಾಜರಾದ ಚಿತ್ರತಂಡ ಬಿಡುಗಡೆಯ ಸಿದ್ದತೆ ಹಾಗೂ ಪ್ರೀಮಿಯರ್ ಷೋ ಕುರಿತು ಮಾಹಿತಿ ಹಂಚಿಕೊಂಡಿತು.

ನಾಯಕ ಜೈದ್‌ಖಾನ್ ಮಾತನಾಡಿ ಗುರುವಾರ ಸಂಜೆ ಎಲ್ಲಾ ರಾಜ್ಯಗಳಲ್ಲಿ 'ಬನಾರಸ್' ಚಿತ್ರದ ಪ್ರೀಮಿಯರ್ ಷೋ.ಗಳು ನಡೆಯುತ್ತಿವೆ. ನನ್ನ ಮೊದಲ ಚಿತ್ರವಾದ್ದರಿಂದ ಜನ ಹೇಗೆ ಸ್ವೀಕರಿಸುತ್ತಾರೋ ಎಂಬ ಭಯನೂ ಇದೆ. ಜನರ ಪ್ರತಿಕ್ರಿಯೆಗಾಗಿ ಕಾತುರದಿಂದ ಕಾಯುತ್ತಿದ್ದೇನೆ ಎಂದು ಹೇಳಿದರು. ನಿರ್ದೇಶಕ ಜಯತೀರ್ಥ ಮಾತನಾಡುತ್ತ ಇದು ನನ್ನ ನಿರ್ದೇಶನದ ಮೊದಲ ಪಾನ್ ಇಂಡಿಯಾ ಚಿತ್ರ, ಫ್ಸ್ಟ್‌ಟೈಮ್ ಇಷ್ಟು ದೊಡ್ಡಮಟ್ಟದಲ್ಲಿ ಪ್ರಚಾರ ಮಾಡಿದ್ದೇನೆ. ನಾಯಕ, ನಾಯಕಿ ಎಲ್ಲಾ ಊರುಗಳಿಗೂ ಭೇಟಿ ಕೊಟ್ಟು ಚಿತ್ರದ ಬಗ್ಗೆ ಪ್ರಚಾರ ಮಾಡಿ ಬಂದಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಚಿತ್ರದ ನಾಯಕ ಜೈದ್‌ಖಾನ್, ನಿರ್ಮಾಪಕ ತಿಲಕ್‌ರಾಜ್ ಬಲ್ಲಾಳ್, ನಿರ್ದೇಶಕ ಜಯತೀರ್ಥ, ವಿತರಕ ಸುಪ್ರೀತ್ ಹಾಜರಿದ್ದು ಚಿತ್ರದ ವಿಶೇಷತೆಗಳ ಬಗ್ಗೆ ಮಾತನಾಡಿದರು.

ಇನ್ನು ಈ ಚಿತ್ರದಲ್ಲಿ ಪಂಚತಂತ್ರ ಖ್ಯಾತಿಯ ನಟಿ ಸೋನಾಲ್ ಮಾಂಥೆರೋ ನಾಯಕಿಯಾಗಿ ಕಾಣಿಸಿಕೊಂಡಿದ್ದು, ವಿಶೇಷವಾಗಿ ವಾರಣಾಸಿಯ 64 ಘಾಟ್‌ಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಜೊತೆಗೆ ಅತ್ಯದ್ಭುತವಾದ ಸಂಗೀತದ ಸಾರವೇ ಈ ಚಿತ್ರದಲ್ಲಿದೆ ಹಿಂದೂಸ್ತಾನಿ ಗಾಯಕ ಸುಚರಿತಾ ಗುಪ್ತಾ, ಬಿಸ್ಮಿಲ್ಲಾ ಖಾನ್‌ರ ಮೊಮ್ಮಗ ಸೇರಿದಂತೆ ಹಲವು ಪ್ರಸಿದ್ಧ ಗಾಯಕರು ಈ ಚಿತ್ರಕ್ಕಾಗಿ ಹಾಡಿದ್ದಾರೆ. ಕನ್ನಡದಲ್ಲಿ ಇದೇ ಮೊದಲ ಬಾರಿಗೆ ಈ ರೀತಿಯ ಪ್ರಯತ್ನವೊಂದು ನಡೆದಿದೆ, ಇದೊಂದು ಅಪ್ಪಟ ಪ್ರೇಮಕಥೆಯಾಗಿದ್ದು, ನಮ್ಮ ನೆಲದ ಕಥೆಯಾದರೂ ಅಜನೀಶ್ ಲೋಕನಾಥ್ ಅವರ ಸಂಗೀತ ಸಂಯೋಜನೆ, ಅದ್ವೈತ ಗುರುಮೂರ್ತಿ ಅವರ ಛಾಯಾಗ್ರಹಣ ಈ ಚಿತ್ರಕ್ಕಿದ್ದು, ಬಹುಕೋಟಿ ವೆಚ್ಚದಲ್ಲಿ ಚಿತ್ರ ನಿರ್ಮಾಣವಾಗಿದೆ. ಹಿರಿಯ ನಟ ದೇವರಾಜ್, ಅಚ್ಯುತ್ ಕುಮಾರ್, ಸುಜಯ್ ಶಾಸ್ತ್ರಿ, ಸ್ವಪ್ನರಾಜ್, ಬರ್ಕತ್‌ಆಲಿ, ಚಿರಂತ್, ರೋಹಿತ್ ಮುಂತಾದವರು ಉಳಿದ ತಾರಾ ಬಳಗದಲ್ಲಿದ್ದಾರೆ.





'ಕಂಬ್ಳಿಹುಳ'

ಮಲೆನಾಡಿನ ಎಮೋಷನಲ್ ಲವ್‌ಸ್ಟೋರಿ

ಒಂದಿಷ್ಟು ಸಮಾನ ಮನಸ್ಕರೇ ಸೇರಿ ಮಾಡಿರುವ ನವಿರಾದ ಪ್ರೇಮಕಥೆಯ ಚಿತ್ರ 'ಕಂಬ್ಳಿಹುಳ'. ಇತ್ತೀಚೆಗೆ ಗೃಹಸಚಿವ ಆರಗ ಜ್ಞಾನೇಂದ್ರ ಚಿತ್ರದ ಟ್ರೈಲರ್ ಬಿಡುಗಡೆಗೊಳಿಸಿದರು. ಒಂದಷ್ಟು ಕಿರುಚಿತ್ರಗಳನ್ನು ನಿರ್ದೇಶಿಸಿದ್ದ ನವನ್ ಶ್ರೀನಿವಾಸ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ಮಲೆನಾಡಿನಲ್ಲಿ ನಡೆಯುವ ಎಮೋಷನಲ್ ಜರ್ನಿ ಪ್ರೇಮಕಥೆಯನ್ನು ಹೇಳಲಾಗಿದೆ. ರಂಗಭೂಮಿ ಕಲಾವಿದ ಅಂಜನ್ ನಾಗೇಂದ್ರ ಹಾಗೂ ಅಶ್ವಿತಾ ಆರ್. ಹೆಗ್ಡೆ ನಾಯಕ, ನಾಯಕಿಯಾಗಿ ನಟಿಸಿರುವ ಈ ಚಿತ್ರಕ್ಕೆ ಶೃಂಗೇರಿ, ಸಕಲೇಶಪುರ, ತೀರ್ಥಹಳ್ಳಿ ಸುತ್ತಮುತ್ತ 90 ದಿನಗಳ ಕಾಲ ಚಿತ್ರೀಕರಿಸಲಾಗಿದೆ.

ನಿರ್ದೇಶಕ ನವನ್ ಶ್ರೀನಿವಾಸ್ ಮಾತನಾಡಿ ನ.4ರಂದು ನಮ್ಮ ಚಿತ್ರ ಬಿಡುಗಡೆಯಾಗುತ್ತಿದೆ. ಮಲೆನಾಡು ಭಾಗದಲ್ಲಿ ನಡೆಯುವ ಎಮೋಷನಲ್ ಲವ್‌ಸ್ಟೋರಿ ಇದಾಗಿದ್ದು, ನಾನು ಕೂಡ ಮಲೆನಾಡಿನವನಾದ್ದರಿಂದ ಆ ಭಾಗದ ಕಥೆಯನ್ನೇ ಆಯ್ಕೆ ಮಾಡಿಕೊಂಡೆ. ನೋಡುವವರಿಗೆ ಒಳ್ಳೆಯ ಫೀಲ್ ಕೊಡೋ ಚಿತ್ರವಿದು ಎಂದು ಹೇಳಿದರು.

ನಾಯಕ ಅಂಜನ್ ನಾಗೇಂದ್ರ ಮಾತನಾಡಿ ಕಂಬ್ಳಿಹುಳ ನನಗೆ ಹೊಸ ಜೀವನ ಕೊಟ್ಟಂತಹ ಸಿನಿಮಾ. ಮೂಲತ: ರಂಗಭೂಮಿ ಕಲಾವಿದನಾದ್ದರಿಂದ ಸಿನಿಮಾ ನಟನೆಗೆ ಹೊಂದಿಕೊಳ್ಳಲು ಒಂದಿಷ್ಟು ವರ್ಕ್‌ಶಾಪ್ ಮಾಡಬೇಕಾಯಿತು ಎಂದರು. ನಾಯಕಿ ಅಶ್ವಿತಾ ಹೆಗ್ಡೆ ಮಾತನಾಡಿ ನಾನು ಕೂಡ ರಂಗಭೂಮಿ ಕಲಾವಿದೆ. ಮಲೆನಾಡಿನಲ್ಲಿರುವ ಮಲಯಾಳಿ ಹುಡುಗಿಯ ಪಾತ್ರವನ್ನು ಈ ಚಿತ್ರದಲ್ಲಿ ನಿರ್ವಹಿಸಿದ್ದೇನೆ ಎಂದರು. ಗ್ರೇಸ್ಕ್ವೇರ್ ಸ್ಟುಡಿಯೋಸ್ ಬ್ಯಾನರ್‌ನಡಿ ಈ ಚಿತ್ರಕ್ಕೆ ವಿಜಯ್, ಸವೀನ್, ಪುನೀತ್ ಹಾಗೂ ಗುರು ಸೇರಿ ಬಂಡವಾಳ ಹೂಡಿದ್ದು, ಚಿತ್ರದಲ್ಲಿ ರೋಹಿತ್ ಕುಮಾರ್, ದೀಪಕ್ ರೈ ಪಣಜೆ, ಸಂಧ್ಯಾ ಅರಕೆರೆ, ಸಂಪತ್‌ಶೆಟ್ಟಿ ಮುಂತಾದವರು ನಟಿಸಿದ್ದಾರೆ. ಸತೀಶ್ ರಾಜೇಂದ್ರ್‌ಅವರ ಛಾಯಾಗ್ರಹಣ, ಶಿವಪ್ರಸಾದ್ ಅವರ ಸಂಗೀತ ನಿರ್ದೇಶನ ಕಂಬ್ಳಿಹುಳ ಚಿತ್ರಕ್ಕಿದೆ.

ಮತ್ತೆ ಮಾಯಾ ಜಿಂಕೆಯ ಹಿಂದೆ ಸೀತಾರಾಮ್..

ಇಪ್ಪತ್ತೈದು ವರ್ಷಗಳ ಹಿಂದೆ ಕಿರುತೆರೆಯ ಜನಪ್ರಿಯ ಧಾರಾವಾಹಿ ಎನಿಸಿಕೊಂಡಿದ್ದ ಟಿ.ಎನ್. ಸೀತಾರಾಮ್ ಅವರ ನಿರ್ದೇಶನದ ಮಾಯಾಮೃಗದ ಮುಂದುವರೆದ ಭಾಗವಾಗಿ ಮತ್ತೆ 'ಮಾಯಾಮೃಗ' ಕಳೆದ ವಾರದಿಂದ ಸಿರಿಕನ್ನಡ ವಾಹಿನಿಯಲ್ಲಿ ಮೂಡಿಬರುತ್ತಿದೆ ಈ ಕುರಿತಂತೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ತಂಡ ಕೆಲವು ಮಾಹಿತಿಗಳನ್ನು ಹಂಚಿಕೊಂಡಿತು.

ನಿರ್ದೇಶಕ ಟಿಎನ್ ಸೀತಾರಾಮ್ ಮಾತನಾಡಿ ಬದುಕು ಬದಲಾಗಬಹುದು, ಭಾವ ಬದಲಾಗದು ಎಂಬ ಅಡಿಬರಹದೊಂದಿಗೆ ಹಳಬರ ಜೊತೆಗೆ ಹೊಸಬರ ಸಂಗಮವಾಗಿ ಮತ್ತೆ ಮಾಯಾಮೃಗ ಮೂಡಿಬರುತ್ತಿದೆ, ಆಗ ನಿರ್ದೇಶನ ವಿಭಾಗದಲ್ಲಿ ನಾನು, ಪಿ.ಶೇಷಾದ್ರಿ ಹಾಗೂ ನಾಗೇಂದ್ರ ಶಾ ಇದ್ದೆವು. ಈಗಲೂ ನಾವು ಮೂವರೂ ಸೇರಿ "ಮತ್ತೆ ಮಾಯಾಮೃಗ" ನಿರ್ದೇಶಿಸುತ್ತಿದ್ದೇವೆ. ಕಥಾ ವಿಸ್ತರಣೆಯಲ್ಲಿ ನನ್ನ ಮಗಳು ಅಶ್ವಿನಿ ಹಾಗೂ ಪ್ರಹ್ಲಾದ್ ನಮ್ಮೊಂದಿಗಿದ್ದಾರೆ. ಕಳೆದ 23 ವರ್ಷಗಳಲ್ಲಿ ಸಾಕಷ್ಟು ಬದಲಾಗಿದೆ. ನಾನು ಸೇರಿದಂತೆ ಹಲವರಿಗೆ ವಯಸ್ಸಾಗಿದೆ. "ಮಾಯಾಮೃಗ"ದಲ್ಲಿ ಅಭಿನಯಿಸಿದ್ದ ವೈಶಾಲಿ ಕಾಸರವಳ್ಳಿ ಹಾಗೂ ಅನೇಕ ಕಲಾವಿದರು ನಮ್ಮೊಂದಿಗಿಲ್ಲ. ಹಿಂದಿನ ಕಥೆಯಲ್ಲಿದ್ದ 3 ಟ್ರ್ಯಾಕ್‌ಗಳು ಇಲ್ಲೂ ಸಹ ಮುಂದುವರೆದಿದ್ದು, ಪಾತ್ರಗಳು ಮಾತ್ರ ಅಪ್‌ಡೇಟ್ ಆಗಿವೆ. ಆಗ ನಟಿಸಿದ್ದ ಎಲ್ಲರನ್ನೂ ಹೊಂದಿಸುವುದು ತುಂಬಾ ಪ್ರಯಾಸದ ಕೆಲಸ, ಆಗ ಚಿಕ್ಕವರಾಗಿದ್ದ ಪಾತ್ರಗಳು ಈಗ ದೊಡ್ಡವರಾಗಿದ್ದಾರೆ. ಹಳೆಯದರ ನೆನಪಿನೊಂದಿಗೆ ಹೊಸದರ ಸಂಭ್ರಮವಾಗಿ 'ಮಾಯಾಮೃಗ' ಮೂಡಿಬರುತ್ತಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಸಿರಿಕನ್ನಡ ವಾಹಿನಿಯ ಸಂಜಯ್ ಶಿಂಧೆ, ರಾಜೇಶ್ ರಾಜಘಟ್ಟ ಅಲ್ಲದೆ ನಾಗೇಂದ್ರ ಶಾ, ಜೆ.ಎಂ. ಪ್ರಹ್ಲಾದ್, ಪಿ.ಶೇಷಾದ್ರಿ ಕೂಡ ಉಪಸ್ಥಿತರಿದ್ದರು. ಹಿಂದೆ ನಟಿಸಿದ್ದ ಅವಿನಾಶ್, ಮಾಳವಿಕ, ರಾಜೇಶ್ ನಟರಂಗ, ಲಕ್ಷ್ಮೀ ಚಂದ್ರಶೇಖರ್, ವಿಕ್ರಮ್‌ಸೂರಿ, ವೀಣಾಸುಂದರ್ ಮುಂತಾದವರು ಇದರಲ್ಲೂ ಸಹ ಮುಂದುವರಿಯುತ್ತಾರೆ, ಇವರ ಜೊತೆಗೆ ಲಹರಿ, ನಿಖಿತಾ, ಮೇಘಾ ಅವರಂಥ ಹೊಸ ಮುಖಗಳನ್ನೂ ಸಹ ನೋಡಬಹುದಾಗಿದೆ.



ಫಾರ್ ರಿಜಿಸ್ಟ್ರೇಷನ್

ಸಂಬಂಧಗಳಿಗೂ ನೋಂದಣಿಯೇ!



'ದಿಯಾ' ಖ್ಯಾತಿಯ ಪೃಥ್ವಿ ಅಂಬಾರ್ ಹಾಗೂ 'ಲವ್ ಮಾಕ್ಟೇಲ್' ನಾಯಕಿ ಮಿಲನ ನಾಗರಾಜ್ ನಟಿಸಿರುವ "ಫಾರ್ ರಿಜಿಸ್ಟ್ರೇಷನ್" ಚಿತ್ರ ಫೆ.10ರಂದು ಬಿಡುಗಡೆಯಾಗಲಿದೆ. ಇತ್ತೀಚೆಗೆ ಈ ಚಿತ್ರದ ಬಿಡುಗಡೆ ದಿನಾಂಕ ಘೋಷಣೆ ಹಾಗೂ ಫಸ್ಟ್‌ಲುಕ್ ಅನಾವರಣ ಕಾರ್ಯಕ್ರಮ ನಡೆಯಿತು. ನಿರ್ಮಾಪಕ ನವೀನ್‌ರಾವ್ ಹಾಗೂ ನಿರ್ದೇಶಕ ನವೀನ್ ದ್ವಾರಕನಾಥ್ ಪೋಷಕರು ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಬಿಡುಗಡೆ ಮಾಡಿದರು.

ನಂತರ ನಿರ್ದೇಶಕ ನವೀನ್ ದ್ವಾರಕನಾಥ್ ಮಾತನಾಡಿ ನಾನು ಹಾಗೂ ನಿರ್ಮಾಪಕ ನವೀನ್ ಸಹಪಾಠಿಗಳು. ಕಿರುಚಿತ್ರಗಳನ್ನು ನಿರ್ದೇಶಿಸುತ್ತಿದ್ದ ನನಗೆ ಒಂದು ದಿನ ಸ್ನೇಹಿತ ನವೀನ್‌ರಾವ್ ಈ ಚಿತ್ರವನ್ನು ನಿರ್ದೇಶಿಸಲು ಪ್ರೇರೇಪಿಸಿದರು. ಆಗಷ್ಟೇ ದಿಯಾ ಹಾಗೂ 'ಲವ್ ಮಾಕ್ಟೇಲ್' ಯಶಸ್ವಿಯಾಗಿದ್ದವು. ಪ್ರಮುಖ ಪಾತ್ರಗಳನ್ನು ಪೃಥ್ವಿ ಅಂಬಾರ್ ಹಾಗೂ ಮಿಲನ ನಾಗರಾಜ್ ಕೈಲಿ ಮಾಡಿಸಬೇಕೆಂದು ನಿರ್ಧರಿಸಲಾಯಿತು. ಹೀಗೆ ಆರಂಭವಾದ ಚಿತ್ರವೀಗ ಬಿಡುಗಡೆಯ ಹಂತ ತಲುಪಿದೆ. ಫೆಬ್ರವರಿ ಹತ್ತರಂದು ಚಿತ್ರ ಬಿಡುಗಡೆಯಾಗುತ್ತಿದೆ ಎಂದರು.


ನಿರ್ಮಾಪಕ ನವೀನ್‌ರಾವ್ ಮಾತಾಡಿ ಚಿತ್ರರಂಗ ನಮಗೆ ಹೊಸದು. ನಾನು ಕೂಡ ಚಿತ್ರೀಕರಣದಲ್ಲಿ ಭಾಗಿಯಾದಾಗಿದ್ದೆ. ಒಂದು ಚಿತ್ರಕ್ಕೆ ನಿರ್ಮಾಪಕ ಹಣ ಒದಗಿಸುತ್ತಾನಷ್ಟೇ, ಆದರೆ ಇಡೀ ತಂಡ ಚಿತ್ರಕ್ಕಾಗಿ ಎಷ್ಟು ಕಷ್ಟಪಡುತ್ತದೆ ಎಂಬುದನ್ನು ಕಣ್ಣಾರೆ ನೋಡಿದೆ. ಅವರೆಲ್ಲರ ಶ್ರಮದಿಂದ ಉತ್ತಮ ಚಿತ್ರವೊಂದು ನಿರ್ಮಾಣವಾಗಿದೆ ಎಂದರು.

ನಾಯಕ ಪೃಥ್ವಿ ಅಂಬರ್ ಮಾತನಾಡಿ ನನ್ನ ತುಳು ಸಿನಿಮಾ ಆಗಷ್ಟೇ ಬಿಡುಗಡೆಯಾಗಿತ್ತು. ಅದನ್ನು ನೋಡಿದ ನಿರ್ದೇಶಕರು ನನ್ನನ್ನು ಸಂಪರ್ಕಿಸಿ ಈ ಚಿತ್ರದ ಕಥೆ ಹೇಳಿದರು. ಇಷ್ಟವಾಯಿತು. ವಾಹನ ಸೇರಿ ಎಲ್ಲದ್ದಕ್ಕೂ ರಿಜಿಸ್ಟ್ರೇಷನ್ ಕಡ್ಡಾಯ. ಆದರೆ ರಿಜಿಸ್ಟ್ರೇಷನ್ ಇಲ್ಲದ ಸಂಬಂಧಗಳಿಗೆ ಅರ್ಥವೇ ಇರುವುದಿಲ್ಲ. ಪ್ರೀತಿಗೂ ರಿಜಿಸ್ಟ್ರೇಷನ್ ಕಡ್ಡಾಯವಾದಾಗ ಹೇಗಿರುತ್ತೆ ಎಂಬುದನ್ನು ತೋರಿಸಿದ್ದೇವೆ ಎಂದರು.

ನಾಯಕಿ ಮಿಲನ ನಾಗರಾಜ್ ಮಾತನಾಡಿ ಒಳ್ಳೆಯ ತಂಡದೊಂದಿಗೆ ಉತ್ತಮ ಚಿತ್ರವೊಂದನ್ನು ಮಾಡುತ್ತಿರುವ ಖುಷಿಯಿದೆ. ಈ ಚಿತ್ರದ ಟೈಟಲ್ಲೇ ನನಗೆ ಇಷ್ಟವಾಯಿತು. ನನ್ನ ಪಾತ್ರ ಕೂಡ ಚೆನ್ನಾಗಿದೆ. ಫೆಬ್ರವರಿ ನನಗೆ ಲಕ್ಕಿ ತಿಂಗಳು. 'ಲವ್ ಮಾಕ್ಟೇಲ್' ಚಿತ್ರ ಅದೇ ತಿಂಗಳು ರಿಲೀಸಾಗಿತ್ತು. ಈ ಚಿತ್ರ ಕೂಡ ಆ ತಿಂಗಳಲ್ಲೇ ತೆರೆಗೆ ಬರುತ್ತಿದೆ ಎಂದರು. ಸಂಗೀತ ನಿರ್ದೇಶಕ ಹರೀಶ್ ಹಾಗೂ ಕಾರ್ಯಕಾರಿ ನಿರ್ಮಾಪಕ ನಿರಂಜನ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ಪೃಥ್ವಿ ಅಂಬಾರ್, ಮಿಲನ ನಾಗರಾಜ್, ರವಿಶಂಕರ್, ಬಾಬು ಹಿರಣ್ಣಯ್ಯ, ಸ್ವಾತಿ, ಸುಧಾ ಬೆಳವಾಡಿ, ತಬಲನಾಣಿ, ರಮೇಶ್‌ಭಟ್, ಸಿಹಿಕಹಿ ಚಂದ್ರು ಮುಂತಾದವರು ಚಿತ್ರದಲ್ಲಿದ್ದಾರೆ.

ಸಿನಿಪದಬಂಧ-448

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ________
ವಿಳಾಸ ________
____
ದೂರವಾಣಿ ಸಂಖ್ಯೆ ________

ಎಡದಿಂದ ಬಲಕ್ಕೆ

1. ಅಂದು ವಿಶ್ವಾಮಿತ್ರನಂತೆ ಇಂದು ಡಾರ್ಲಿಂಗ್ ಕೃಷ್ಣ 'ಗುಡ್ ಮಾರ್ನಿಂಗ್' ಹೇಳಲು ಅಣಿಯಾಗುತ್ತಿದ್ದಾನೆ 8
5. ಕಿಂಕರನ 'ಬಾಸ್' 2
8. ರಾಮಕೃಷ್ಣ- ಜೀವಿತಾಗೆ 'ಲಗ್ನ' ಕೂಡಿ ಬರಲು ಪೇರಾಲ ನಿರ್ದೇಶಕ 5
9. ಪೆದ್ದ 'ದ್ವಾರಕೀಶ್' ಜಯಿಸಿದ. 2
11. ಅನಂತ್ ನಾಗ್ ಪ್ರೀತಿಯಿಂದ ಎಣೆದ ಬಲೆ 4
12. ದಾತನಿಂದಾದ ಹುಟ್ಟು 3
13. ಬೆಕ್ಕಿನ ಕಂಗಳ ನಟಿ ಇಲ್ಲಿ ತಿರುಗಿದ್ದಾಳೆ. 3
15. ಅನಂತ್ ನಾಗ್ ಕ್ರೂರತೆಗೆ ನಂಜುಂಡೇಗೌಡ ನಿರ್ದೇಶನವಿದೆ. 4
16. ಶಿವಾನಂದ್‌ನ ಹಿಂದಿರುವ ನಟಿ ರುಜುವಾತು ಪಡಿಸಿದ್ದಾಳೆ. 2
17. ರಾಮನಿಲ್ಲದ ರಾಕ್ಷಸ ನಾಡು 5
20. ವಿಷ್ಣು – ಖುಷ್ಬೂ ಅಭಿನಯದ ಚಿತ್ರ 2
21. ಆಲೆಮನೆಯಲ್ಲಿ ಕಾಣಿಸಿಕೊಂಡ ಒಲುಮೆಯ ಬಾಂದಳದ ಚೆಲುವೆ 8

ವಿಜೇತರು: ಜಿ.ವೀರರಾಜ ಅರಸ್, ನಂ.777, ಶ್ರೀಕಂಠೇಶ್ವರ ನಿಲಯ, ಕೆಸರೆ 3ನೇ ಹಂತ, ಆರ್.ಎಸ್.ನಾಯ್ಡು ನಗರ, ಮೈಸೂರು

ಸಿನಿ ಪದಬಂಧ 447ರ ಸರಿ ಉತ್ತರ

ಕಾಂ	ತಾ	ರ			ಆ	ನಂ	ದ	ಭೈ	ರ	ವಿ
ಚ			ವಿ		ರಾ			ರ		ಷ್ಣು
ನ		ಅ	ಶ್ವ	ಮೇ	ಧ		ಮಾ	ವ	ಮಾ	ವ
ಗಂ					ನೆ					ರ್ಥ
ಗಾ	ಳಿ	ಗೋ	ಪು	ರ		ಮೀ	ರಾ	ಜಾ	ಸ್ಮಿ	ನ್
		ಕ						ಗೃ		
ಆ	ಕ	ರ್ಣ	ನಂ	ತೆ		ರ	ಕ್ತ	ತಿ	ಲ	ಕ
ತ್ಮ					ಶಾಂ					ಥಾ
ಬಂ	ದ	ಮು	ಕ್ತ		ತಿ	ರು	ಪ	ತಿ		ಸಂ
ಧ		ಕುಂ			ಕ್ರಾಂ		ರ್ವ			ಗ
ನ	ಳ	ದ	ಮ	ಯಂ	ತಿ			ಗು	ಲಾ	ಮ

ಮೇಲಿನಿಂದ ಕೆಳಕ್ಕೆ

1. ಬಿ.ಸಿ.ಪಾಟೀಲ್ ಕುರು ವಂಶಸ್ಥ 3
2. ಕಳ್ಳ, ಮಳ್ಳನೊಂದಿಗೆ "ಬಂದವನು 2
3. ಆರ್. ನಾಗೇಂದ್ರರಾಯರ ಜನ್ಮ ಕುಂಡಲಿಯ ಭವಿಷ್ಯ 5
4. ಪಾಂಡವ ಮತ್ತು ಕೌರವರ ಭವಿಷ್ಯ ವಿವರಿಸುವ ಮಹಾಕಾವ್ಯ 5
6. ಈ ಗಾದೆ ಹೇಳುವಂತೆ ಆತ್ಮ ವಿಶ್ವಾಸ ಹೊಂದಿದರೆ ಯಶಸ್ಸು ಖಂಡಿತ 7
7. – – – – ಪ್ರಣಯ 4
10. ಧ್ರುವತಾರೆ ಚಿತ್ರದ "ಕಥಾ ಲೇಖಕ 7
13. ನಂಜು ತುಂಬಿಕೊಂಡಿರುವ ಹೆಣ್ಣು 4
14. ಗಿರೀಶ್ ಕಾರ್ನಾಡ್ ಅವರ "ಕುದುರೆ ಮುಖ" 5
15. ಮೇಕೆ ಮತ್ತು ವೃಕ್ಷದ ನಡುವೆ ಸಾವಿಲ್ಲ ... 5
18. " – – – ಜೀವನ ಸಾಕ್ಷಾತ್ಕಾರ...ಮರೆಯದ ಮಮಕಾರ 3
19. ದ್ರೋಹ ವಂಚನೆ ಕಂಡು ಕೊಬ್ಬಿದ ಜನರ ಸೊಕ್ಕು ಮುರಿದವ 2

ಅಮೇಜಾನ್‌ನಲ್ಲಿ ರಾಷ್ಟ್ರಪ್ರಶಸ್ತಿ ವಿಜೇತ 'ಡೊಳ್ಳು'


'ಗೂಗ್ಲಿ', 'ರಣವಿಕ್ರಮ', 'ನಟಸಾರ್ವಭೌಮ' ಸೇರಿದಂತೆ ಹಲವು ಹಿಟ್ ಸಿನಿಮಾಗಳನ್ನು ನೀಡಿರುವ ನಿರ್ದೇಶಕ ಪವನ್ ಒಡೆಯರ್ ಅವರ ನಿರ್ಮಾಣದ ಮೊದಲ ಸಿನಿಮಾ 'ಡೊಳ್ಳು'. ಈ ಚಿತ್ರದ ಮೂಲಕ ಪವನ್ ಒಡೆಯರ್ ತಮ್ಮ ನಿರ್ಮಾಣದ ಮೊದಲ ಚಿತ್ರದಲ್ಲೇ ರಾಷ್ಟ್ರಪ್ರಶಸ್ತಿಯನ್ನೂ ಗಳಿಸಿದ್ದರು. ಅಂತರರಾಷ್ಟ್ರೀಯ ಮನ್ನಣೆಯ ಜೊತೆಗೆ ಹಲವಾರು ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡು ಕನ್ನಡಿಗರ ಕೀರ್ತಿಯನ್ನು ಹೆಚ್ಚಿಸಿರುವ 'ಡೊಳ್ಳು' ಚಿತ್ರವು ಚಿತ್ರಮಂದಿರದಲ್ಲೂ ಸಿನಿರಸಿಕರ ಮನಗೆದ್ದಿತ್ತು ಇದೀಗ ಆ ಚಿತ್ರ ಒಟಿಟಿಗೂ ಲಗ್ಗೆ ಇಟ್ಟಿದ್ದು, ಅಮೇಜಾನ್ ಪ್ರೈಮ್‌ನಲ್ಲಿ ಬಿಡುಗಡೆಗೊಂಡಿದೆ.

ಹೆಸರೇ ಹೇಳುವಂತೆ 'ಡೊಳ್ಳು' ಕುಣಿತದ ಸುತ್ತ ನಮ್ಮ ನೆಲದ ಜಾನಪದ ಸೊಗಡನ್ನು ಇಟ್ಟುಕೊಂಡು ಹೆಣೆದ ಕಥೆ ಈ ಚಿತ್ರದ ಜೀವಾಳ. ಒಡೆಯರ್ ಮೂವೀಸ್ ಬ್ಯಾನರ್‌ನಲ್ಲಿ ನಿರ್ಮಾಣವಾದ ಈ ಚಿತ್ರ ರಾಷ್ಟ್ರಪ್ರಶಸ್ತಿ ಪಡೆಯುವುದರೊಂದಿಗೆ ಹಲವಾರು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ತನ್ನ ತೆಕ್ಕೆಗೆ ಹಾಕಿಕೊಂಡಿದೆ. ಈ ಚಿತ್ರವನ್ನು ಯುವ ನಿರ್ದೇಶಕ ಸಾಗರ್ ಪುರಾಣಿಕ್ ನಿರ್ದೇಶನ ಮಾಡಿದ್ದರು. ಚಿತ್ರದಲ್ಲಿ ಕಿರುತೆರೆ ನಟ ಕಾರ್ತಿಕ್ ಮಹೇಶ್, ನಿಧಿ ಹೆಗ್ಡೆ, ಬಾಬು ಹಿರಣಯ್ಯ, ಚಂದ್ರ ಮಯೂರ್, ಶರಣ್ಯ ಸುರೇಶ್ ಮುಂತಾದ ಕಲಾವಿದರು ನಟಿಸಿದ್ದಾರೆ. ಅನಂತ್ ಕಾಮತ್ ಎಂ. ಅವರ ಸಂಗೀತ, ಅಭಿಲಾಶ್ ಕಲಥಿಟವರ ಕ್ಯಾಮೆರಾ ವರ್ಕ್, ಬಿ.ಎಸ್. ಕೆಂಪರಾಜು ಸಂಕಲನ ಡೊಳ್ಳು ಚಿತ್ರಕ್ಕಿದೆ.



ವಂದೇ ಭಾರತ್, ಶತಾಬ್ದಿ ಪ್ರತ್ಯೇಕ ಸಮಯದಲ್ಲಿ ಸಂಚರಿಸಿದರೆ ಅನುಕೂಲಕಾರಿ

ರೈಲ್ವೆ ಪ್ರಯಾಣಿಕರ ಮನವಿ



ಮೈಸೂರು, ನ.3(ಆರ್‌ಕೆ)–ಗಂಟೆಗೆ 160 ರಿಂದ 180 ಕಿ.ಮೀ. ವೇಗ ಸಾಮರ್ಥ್ಯವುಳ್ಳ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲು ಮೈಸೂರು–ಚೆನ್ನೈ ನಗರಗಳ ನಡುವೆ ಬೆಂಗಳೂರು ಮಾರ್ಗ ಸಂಚರಿಸುವಾಗ ಕೇವಲ ಗಂಟೆಗೆ 75.60 ರಿಂದ 77.53 ಕಿ.ಮೀ. ವೇಗ ಮಿತಿಯಲ್ಲಿ ಸಾಗಲಿದೆ.

ಈ ಮೂರು ನಗರಗಳಿಗೆ ಸಂಪರ್ಕ ಕಲ್ಪಿಸುವ ಶತಾಬ್ಧಿ ಎಕ್ಸ್‌ಪ್ರೆಸ್ ರೈಲಿಗಿಂತ ಸ್ವಲ್ಪ ಹೆಚ್ಚು ವೇಗವಾಗಿ ವಂದೇ ಭಾರತ್ ರೈಲು ಸಾಗಲಿದೆ. ಮೈಸೂರಿನಿಂದ ಬೆಂಗಳೂರು ಮೂಲಕ ಚೆನ್ನೈ ನಗರಕ್ಕೆ ಪ್ರಸ್ತುತ ಕಾರ್ಯಾಚರಿಸುತ್ತಿರುವ ಶತಾಬ್ಧಿ ಎಕ್ಸ್‌ಪ್ರೆಸ್ 7 ಗಂಟೆ 15 ನಿಮಿಷದಲ್ಲಿ ತಲುಪುತ್ತಿದೆ.

ಆದರೆ ಹೊಸದಾಗಿ ಪರಿಚಯಿಸುತ್ತಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ಸೆಮಿ ಹೈಸ್ಪೀಡ್ ರೈಲು 6 ಗಂಟೆ 40 ನಿಮಿಷದಲ್ಲಿ ಅಂದರೆ ಶತಾಬ್ಧಿಗಿಂತ ಕೇವಲ 35 ನಿಮಿಷ ಮುಂಚಿತವಾಗಿ ಮೈಸೂರು–ಚೆನ್ನೈ ಗುರಿ ತಲುಪಲಿದೆ. ಈ ಎರಡೂ ರೈಲುಗಳ ನಡುವೆ ಅಷ್ಟೇನೂ ಹೇಳಿಕೊಳ್ಳುವಂತಹ ಭಿನ್ನತೆ ಕಂಡು ಬರುವುದಿಲ್ಲ. ವಂದೇ ಭಾರತ್ ರೈಲು ಗಂಟೆಗೆ 160 ರಿಂದ 180 ಕಿ.ಮೀ. ವೇಗದಲ್ಲಿ ಸಂಚರಿಸುವ ಸಾಮರ್ಥ್ಯ ಹೊಂದಿದ್ದರೂ, ಮೈಸೂರು–ಚೆನ್ನೈ ನಡುವೆ ಗಂಟೆಗೆ ಕೇವಲ 75.60 ರಿಂದ 77.53 ಕಿ.ಮೀ. ವೇಗದಲ್ಲಷ್ಟೇ ಏಕೆ ಸಾಗುತ್ತದೆ ಎಂದು ರೈಲು ಬಳಕೆದಾರ ಮೈಸೂರಿನ ರಾಜೀವ್ ಪ್ರಶ್ನಿಸಿದ್ದಾರೆ.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ನೈರುತ್ಯ ರೈಲ್ವೇ ಅಧಿಕಾರಿಗಳು, ಮೈಸೂರು–ಬೆಂಗಳೂರು ನಡುವೆ ರೈಲು ಹಳಿ ಮಾರ್ಗದಲ್ಲಿ ಸಾಕಷ್ಟು ಕಡಿದಾದ ತಿರುವುಗಳಿದ್ದು, ಸುರಕ್ಷತೆ ದೃಷ್ಟಿಯಿಂದ ವೇಗ ಕಡಿಮೆಯಾಗಲಿದೆ. ಆದ್ದರಿಂದ ವಂದೇ ಭಾರತ್ ರೈಲು ದಕ್ಷಿಣ ಭಾರತದಲ್ಲಿ ಅತೀ ಕಡಿಮೆ ವೇಗದಲ್ಲಿ ಚಲಿಸಲಿದೆ ಎಂದಿದ್ದಾರೆ.

ವೇಗವನ್ನು ಗಂಟೆಗೆ 165 ಕಿ.ಮೀ.ಗೆ ಹೆಚ್ಚಿಸುವ ಸವಾಲು ಎದುರಾಗಿದೆ ಎಂದಿರುವ ರೈಲ್ವೇ ಇಲಾಖೆಯು, ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ವೇಗವನ್ನು ಗಂಟೆಗೆ 75.60 ರಿಂದ 77.53 ಕಿ.ಮೀ.ಗೆ ಮಿತಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ನವದೆಹಲಿಯಿಂದ ವಾರಣಾಸಿ ನಡುವೆ ಸಂಚರಿಸಲಿರುವ ವಂದೇ ಭಾರತ್ ಎಕ್ಸ್‌ಪ್ರೆಸ್ ಗಂಟೆಗೆ 95 ಕಿ.ಮೀ., ನವದೆಹಲಿಯಿಂದ ಜಮ್ಮು–ಕಾಶ್ಮೀರದ ಶ್ರೀ ಮಾತಾ ವೈಷ್ಣೋದೇವಿ ಕ್ಷೇತ್ರಕ್ಕೆ ಗಂಟೆಗೆ 82 ಕಿ.ಮೀ., ಮುಂಬೈ ಸೆಂಟ್ರಲ್‌ನಿಂದ ಗಾಂಧಿನಗರಕ್ಕೆ ಗಂಟೆಗೆ 84 ಕಿ.ಮೀ. ಮತ್ತು ನವದೆಹಲಿಯಿಂದ ಹಿಮಾಚಲ ಪ್ರದೇಶದ ಅಂಬಾ ಅಂದಾರ ನಡುವೆ ಗಂಟೆಗೆ 79 ಕಿ.ಮೀ. ವೇಗದಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸಂಚರಿಸಲಿವೆ.

ಕಡಿದಾದ ತಿರುವುಗಳನ್ನು ನೇರ ಮಾಡಲು ಹೆಚ್ಚುವರಿ ಭೂಮಿ ಬೇಕಾಗಿದೆ. ಮಾರ್ಗದ ಜನರಿಗೆ ಪುನರ್ವಸತಿ, ಕೆಲ ಸೇತುವೆಗಳ ಮರು ನಿರ್ಮಾಣ ಮತ್ತು ಲೆವೆಲ್ ಕ್ರಾಸಿಂಗ್‌ಗಳನ್ನು ಬಹಳಷ್ಟು ಕಡೆ ಸ್ಥಳಾಂತರಿಸಬೇಕಾಗಿರುವುದರಿಂದ ಅದಕ್ಕೆ ಹೆಚ್ಚು ಬಂಡವಾಳ ಹೂಡಬೇಕಾಗಿದೆ.

ಪ್ರತೀ ದಿನ ಬೆಳಗ್ಗೆ ಬೆಂಗಳೂರು ಬಿಟ್ಟು, ಮೈಸೂರಿಗೆ ಶತಾಬ್ಧಿ ಮಧ್ಯಾಹ್ನ 1 ಗಂಟೆಗೆ ತಲುಪುತ್ತಿದೆ. ವಂದೇ ಮಾತರಂ ರೈಲು ಸಹ ಹೆಚ್ಚೂ–ಕಡಿಮೆ ಇದೇ ವೇಳೆಗೆ ಸಂಚರಿಸಲಿದ್ದು, ಮಧ್ಯಾಹ್ನ 12.30 ಗಂಟೆಗೆ ಮೈಸೂರು ತಲುಪಲಿದೆ. ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಬೆಳಗ್ಗೆ ಅಥವಾ ಮಧ್ಯಾಹ್ನದ ನಂತರ ಸಂಚರಿಸಿದರೆ ಹೆಚ್ಚು ಅನುಕೂಲವಾಗುತ್ತದೆ. ಆದರೆ ಕೇವಲ ಅರ್ಧ ತಾಸು ವ್ಯತ್ಯಾಸದಲ್ಲಿ ಸಂಚರಿಸುವುದರಿಂದ ಪ್ರಯೋಜನವಾಗದು ಎಂದು ರೈಲು ಪ್ರಯಾಣಿಕ ವೇಣುಗೋಪಾಲ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಪ್ರತೀ ದಿನ ಬೆಳಗ್ಗೆ ಚೆನ್ನೈ ನಗರದಿಂದ ಎರಡೂ ರೈಲುಗಳು ಕಡಿಮೆ ಅಂತರದಲ್ಲಿ ಪ್ರಯಾಣ ಆರಂಭಿಸುತ್ತಿರುವುದೇಕೆ ಎಂಬುದೇ ತಿಳಿಯುತ್ತಿಲ್ಲ. ಚೆನ್ನೈನಿಂದ ಒಂದು ಹಾಗೂ ಮೈಸೂರಿನಿಂದ ಮತ್ತೊಂದು ಟ್ರೇನ್ ಏಕ ಕಾಲದಲ್ಲಿ ಹೊರಡುವಂತಾದರೆ ಬಹಳಷ್ಟು ಮಂದಿಗೆ ಅನುಕೂಲವಾಗಲಿದೆ ಎಂದು ನೀರಜ್ ವ್ಯಾಸ್ ತಿಳಿಸಿದ್ದಾರೆ.

ಶತಾಬ್ಧಿ ಮತ್ತು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳ ವೇಳಾಪಟ್ಟಿಯನ್ನು ಬದಲಿಸಿದರೆ ಒಳ್ಳೆಯದು. ಬೆಳಗ್ಗೆ ಒಂದು ಹಾಗೂ ಸಂಜೆ ಇನ್ನೊಂದರಂತೆ ಸಂಚರಿಸಿದರೆ ಮೈಸೂರು ಮತ್ತು ಬೆಂಗಳೂರು ನಡುವೆ ಪ್ರಯಾಣಿಸುವವರಿಗೆ ಅನುಕೂಲವಾಗುತ್ತದೆ ಎಂದು ಆದಿತ್ಯ ಜಗನ್ನಾಥ್ ಅಭಿಪ್ರಾಯಪಟ್ಟಿದ್ದಾರೆ.

ಚೆನ್ನೈ ಸೆಂಟ್ರಲ್–ಬೆಂಗಳೂರು–ಮೈಸೂರು ವಂದೇ ಭಾರತ್ ಎಕ್ಸ್‌ಪ್ರೆಸ್ 6 ಗಂಟೆ 40 ನಿಮಿಷದಲ್ಲಿ ತಲುಪಲಿದ್ದು, ಅದೇ ರೀತಿ ಮೈಸೂರು–ಬೆಂಗಳೂರು–ಚೆನ್ನೈ ವಂದೇ ಭಾರತ್ ಎಕ್ಸ್‌ಪ್ರೆಸ್ ಸಹ 6 ಗಂಟೆ 30 ನಿಮಿಷದಲ್ಲಿ ತಲುಪಲಿದೆ. ಮೈಸೂರು–ಬೆಂಗಳೂರು–ಚೆನ್ನೈ ಶತಾಬ್ಧಿ ಎಕ್ಸ್‌ಪ್ರೆಸ್ ಸಹ 7 ಗಂಟೆ 15 ನಿಮಿಷ ತೆಗೆದುಕೊಳ್ಳಲಿದ್ದು, ವಾಪಸ್ ಬರುವಾಗ 7 ಗಂಟೆಗೆ ತಲುಪಲಿದೆ.

ಬುಧವಾರ ಹೊರತುಪಡಿಸಿ ವಾರದಲ್ಲಿ 6 ದಿನ ವಂದೇ ಬಾರತ್ ಎಕ್ಸ್‌ಪ್ರೆಸ್ ರೈಲು ಸಂಚರಿಸಲಿದೆ. ಶತಾಬ್ಧಿ ಎಕ್ಸ್‌ಪ್ರೆಸ್ ಇನ್ನು ಮುಂದೆ ಮಂಗಳವಾರ ಹೊರತುಪಡಿಸಿ ವಾರದ 6 ದಿನ ಸಂಚರಿಸಲಿದೆ ಎಂದು ರೈಲ್ವೇ ಮೂಲಗಳು ತಿಳಿಸಿವೆ. ಪ್ರಸ್ತುತ ಶತಾಬ್ಧಿ ಬುಧವಾರ ಸಂಚರಿಸುತ್ತಿಲ್ಲ.

ಪಾಕ್ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮೇಲೆ ಗುಂಡಿನ ದಾಳಿ

ಆಸ್ಪತ್ರೆಯಲ್ಲಿ ಚಿಕಿತ್ಸೆ; ಆರೋಗ್ಯ ಸ್ಥಿರ



ಇಸ್ಲಾಮಾಬಾದ್, ನ.3–ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಮೇಲೆ ಗುರುವಾರ ಸಂಜೆ ಗುಂಡಿನ ದಾಳಿ ನಡೆಸಲಾಗಿದೆ. ರಾಜಕೀಯ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಅವರ ಮೇಲೆ ಗುಜ್ರಾನ್ ವಾಲಾ ನಗರದ ಅಲ್ಲಾಹ್ ವಾಲಾ ಚೌಕ್ ಬಳಿ ಗುಂಡಿನ ದಾಳಿ ನಡೆದಿದ್ದು, ಅವರ ಕಾಲಿಗೆ ಗುಂಡೇಟು ತಗುಲಿದೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಈ ಸಂಬಂಧ ಓರ್ವನನ್ನು ಪೊಲೀಸರು ಬಂಧಿಸಿ, ವಿಚಾರಣೆಗೊಳಪಡಿಸಿದ್ದಾರೆ. "ಪಾಕಿಸ್ತಾನದ ಜನರ ದಾರಿ ತಪ್ಪಿಸುತ್ತಿರುವ ಇಮ್ರಾನ್ ಖಾನ್‌ನನ್ನು ಕೊಲ್ಲಲು ನಾನು ಬಂದಿದ್ದೆ. ಗುಜರಾನ್ ವಾಲಾಗೆ ಬೈಕ್‌ನಲ್ಲಿ ಬಂದಿದ್ದ ನಾನು, ಅದನ್ನು ಸೋದರ ಸಂಬಂಧಿ ಮನೆ ಬಳಿ ಬಿಟ್ಟಿದ್ದೆ" ಎಂದು ದಾಳಿಕೋರ ಕ್ಯಾಮರಾ ಮುಂದೆ ಹೇಳಿಕೆ ನೀಡಿದ್ದಾನೆ. ಆದರೆ ಪ್ರತ್ಯಕ್ಷದರ್ಶಿಗಳ ಪ್ರಕಾರ ಇಬ್ಬರು ಶೂಟರ್‌ಗಳು ಇಮ್ರಾನ್ ಖಾನ್ ಮೇಲೆ ದಾಳಿ ನಡೆಸಿದ್ದರು. ಒಬ್ಬನ ಬಳಿ ಪಿಸ್ತೂಲ್ ಇದ್ದರೆ, ಮತ್ತೊಬ್ಬನ ಬಳಿ ಸ್ವಯಂಚಾಲಿತ ರೈಫಲ್ ಇತ್ತು ಎಂದು ಹೇಳಲಾಗಿದೆ.

ತನ್ನ ಕೊಲೆಗೆ ಸಂಚು ನಡೆಯುತ್ತಿದೆ ಎಂದು ಕಳೆದ 6 ತಿಂಗಳ ಹಿಂದೆಯೇ ಇಮ್ರಾನ್ ಖಾನ್ ಹೇಳಿದ್ದರು. ನನ್ನ ಕೊಲೆಯಾಗಿದ್ದೇ ಆದರೆ ಅದನ್ನು ಯಾರು ಮಾಡಿರಬಲ್ಲರು ಎಂಬುದರ ಬಗ್ಗೆ ವೀಡಿಯೋ ರೆಕಾರ್ಡ್ ಮಾಡಿ ಸುರಕ್ಷಿತ ಸ್ಥಳದಲ್ಲಿ ಇಟ್ಟಿದ್ದೇನೆ. ನಾನು ಕೊಲೆಯಾದರೆ ನನ್ನ ವೀಡಿಯೋ ರೆಕಾರ್ಡರ್ ಸಂದೇಶದಿಂದ ಅಪರಾಧಿಗಳು ಯಾರೆಂಬುದು ಜನರಿಗೆ ತಿಳಿಯಲಿದೆ ಎಂದಿದ್ದರು. ಅವರು ಹಾಗೆ ಹೇಳಿದ ಎರಡೇ ದಿನದಲ್ಲಿ ಅವರ ಮೊಬೈಲ್ ಕಳುವಾಗಿತ್ತು. ಆಗ ನಾನು ರೆಕಾರ್ಡ್ ಮಾಡಿರುವ ವೀಡಿಯೋಗಾಗಿಯೇ ಮೊಬೈಲ್ ಕದಿಯಲಾಗಿದೆ ಎಂದು ಆರೋಪಿಸಿದ್ದರು.

ಕೆಂಪುಕೋಟೆ ದಾಳಿ ಪ್ರಕರಣ: ಉಗ್ರ ಮೊಹಮ್ಮದ್ ಆರಿಫ್‌ಗೆ ಗಲ್ಲು ಶಿಕ್ಷೆ ತೀರ್ಪು ಎತ್ತಿ ಹಿಡಿದ ಸುಪ್ರೀಂಕೋರ್ಟ್

ನವದೆಹಲಿ, ನ.3– 2000 ಇಸವಿಯಲ್ಲಿ ಕೆಂಪುಕೋಟೆ ಮೇಲೆ ನಡೆದ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಲಷ್ಕರ್–ಎ–ತೊಯ್ಬಾ ಉಗ್ರ ಮೊಹಮ್ಮದ್ ಆರಿಫ್ ವಿಧಿಸಲಾಗಿದ್ದ ಗಲ್ಲುಶಿಕ್ಷೆ ತೀರ್ಪನ್ನು ಸುಪ್ರಿಂ ಕೋರ್ಟ್ ಗುರುವಾರ ಎತ್ತಿ ಹಿಡಿದಿದೆ.



ಗಲ್ಲುಶಿಕ್ಷೆ ತೀರ್ಪಿನ ವಿರುದ್ಧ ಸಲ್ಲಿಸಲಾಗಿದ್ದ ಮರುಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಳ್ಳಿ ಹಾಕಿದ್ದು, ತನ್ನ ಅಪರಾಧ ಮತ್ತು ಶಿಕ್ಷೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಮರುಶೀಲನಾ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಮತ್ತು ನ್ಯಾಯಮೂರ್ತಿ ಬೇಲಾ ಎಂ ತ್ರಿವೇದಿ ಅವರನ್ನೊಳಗೊಂಡ ಪೀಠವು ತಿರಸ್ಕರಿಸಿದೆ. ಕೆಂಪುಕೋಟೆಯಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಈ ಹಿಂದೆ ತನಿಖೆ ನಡೆಸಿದ್ದು, ಇದೀಗ ಈ ಬಗ್ಗೆ ಯಾವುದೇ ವಿಚಾರಣೆ ನಡೆಸುವ ಅಗತ್ಯವಿಲ್ಲ ಎಂದು ಸುಪ್ರೀಂ ಅಭಿಪ್ರಾಯಪಟ್ಟಿದೆ. ಈ ಅಪರಾಧದ ಬಗ್ಗೆ ಎಲ್ಲ ಸಾಕ್ಷಿಗಳು ಸಾಬೀತಾಗಿದ್ದು ಮರುಪರಿಶೀಲನೆ ಮಾಡುವ ಅಗತ್ಯವಿಲ್ಲ ಈ ಅರ್ಜಿಯನ್ನು ನಾವು ತಿರಸ್ಕರಿಸುತ್ತಿದ್ದೇವೆ ಎಂದು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಯುಯು ಲಲಿತ್ ತೀರ್ಪು ಪ್ರಕಟಿಸುವ ಸಂದರ್ಭದಲ್ಲಿ ತಿಳಿಸಿದ್ದಾರೆ.

ಹೀಗಾಗಿ 2000 ಇಸವಿಯಲ್ಲಿ ಕೆಂಪುಕೋಟೆ ಮೇಲೆ ನಡೆದ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಲಷ್ಕರ್–ಎ–ತೊಯ್ಬಾ ಉಗ್ರ ಮೊಹಮ್ಮದ್ ಆರಿಫ್‌ಗೆ ಗಲ್ಲುಶಿಕ್ಷೆ ಖಾಯಂ ಆದಂತಾಗಿದೆ. ಅಂದಿನ ದಾಳಿಯಲ್ಲಿ ಇಬ್ಬರು ಸೈನಿಕರು ಸೇರಿದಂತೆ ಒಟ್ಟು ಮೂವರು ಸಾವನ್ನಪ್ಪಿದ್ದರು.

ಮೇಲುಕೋಟೆಯಲ್ಲಿ ಅಷ್ಟತೀರ್ಥೋತ್ಸವ



ಮೇಲುಕೋಟೆ, ನ.3– ಚೆಲುವನಾರಾಯಣ ಸ್ವಾಮಿಯವರ ತೊಟ್ಟಿಲಮಡು ಜಾತ್ರೆ ಎಂದೇ ಪ್ರಖ್ಯಾತವಾಗಿರುವ ಅಷ್ಟತೀರ್ಥೋತ್ಸವ ಗುರುವಾರ ಅದ್ದೂರಿಯಾಗಿ ನೆರವೇರಿತು. ಭಾಗವಹಿಸಿದ್ದ ನೂರಾರು ಭಕ್ತರು ತೀರ್ಥಗಳಲ್ಲಿ ಪವಿತ್ರಸ್ನಾನ ಮಾಡಿ ಪುನೀತಭಾವ ಅನುಭವಿಸಿದರು

ಪುತ್ರಭಾಗ್ಯ ಅಪೇಕ್ಷಿಸಿದ ದಂಪತಿಗಳು ಅನುರೂಪ ಜೋಡಿ ಬಯಸಿದ ವಿವಾಹಾಪೇಕ್ಷಿತರೂ ಸಹ ಅಷ್ಟತೀರ್ಥದಲ್ಲಿ ಪಾಲ್ಗೊಂಡು ಹರಕೆ ಸಲ್ಲಿಸಿದರು. ಬೆಳಗ್ಗೆ 9–30ಕ್ಕೆ ವಜ್ರಖಚಿತ ಕಿರೀಟದ ಅಲಂಕಾರದೊಂದಿಗೆ ಚೆಲುವನಾರಾಯಣ ಸ್ವಾಮಿಯ ಉತ್ಸವ ನೆರವೇರಿತು. ಕಲ್ಯಾಣಿತೀರ್ಥಕ್ಕೆ ಪೂಜೆ ಸಲ್ಲಿಸಿದ ನಂತರ ಸ್ವಾಮಿಯ ಪಾದುಕೆಗೆ ವೇದಮಂತ್ರದೊಂದಿಗೆ ಅಭಿಷೇಕ ನೆರವೇರಿಸಿ ಪವಿತ್ರಸ್ನಾನದೊಂದಿಗೆ ಅಷ್ಟತೀರ್ಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಮಧ್ಯಾಹ್ನ 11–30ಕ್ಕೆ ಕಲ್ಯಾಣಿಯಿಂದ ರಾಜಮುಡಿ ಉತ್ಸವ ದೇವಾಲಯಕ್ಕೆ ಮರಳಿದ ನಂತರ ಸ್ವಾಮಿಯ ಪಾದುಕೆಯನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆಯಲ್ಲಿ ಕೊಂಡೊಯ್ದು ಎಂಟು ಪವಿತ್ರ ತೀರ್ಥಗಳಾದ ವೇದ ಪುಷ್ಕರಣಿ, ಧನುಷ್ಕೋಟಿ, ಯಾದವಾತೀರ್ಥ, ದರ್ಭ ತೀರ್ಥ, ಪಲಾಶತೀರ್ಥ, ಪದ್ಮತೀರ್ಥ, ನರಸಿಂಹತೀರ್ಥ, ನಾರಾಯಣತೀರ್ಥದಲ್ಲಿ ಅಭಿಷೇಕ ನೆರವೇರಿಸಲಾಯಿತು.

ಕಾರ್ತಿಕಮಾಸದ ರಾಜಮುಡಿ ಬ್ರಹ್ಮೋತ್ಸವ ನವೆಂಬರ್ 8ರವರೆಗೆ ನಡೆಯಲಿದೆ. ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್, ಇನ್ಸ್‌ಪೆಕ್ಟರ್ ಸುಮಾರಾಣಿ ಸೇರಿದಂತೆ ಹಲವು ಅಧಿಕಾರಿಗಳು ಗಣ್ಯರು ಭಾಗವಹಿಸಿದ್ದರು.



ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಗ್ರಾಮದಲ್ಲಿ ರಸ್ತೆ ಅಭಿವೃದ್ಧಿ ಹಾಗೂ ಶಾಲಾ ಕಟ್ಟಡ ನಿರ್ಮಾಣಕ್ಕೆ ಗುದ್ದಲಿ ಪೂಜೆಯನ್ನು ಶಾಸಕ ರವೀಂದ್ರ ಶ್ರೀಕಂಠಯ್ಯ ನೆರವೇರಿಸಿದರು. ಈ ವೇಳೆ ಪಿಡಿಓ ತಿಲಕ್, ಗ್ರಾ.ಪಂ ಉಪಾಧ್ಯಕ್ಷ ರವಿಕುಮಾರ್, ಸದಸ್ಯರಾದ ಪ್ರಕಾಶ್, ಮುಖಂಡರಾದ ಸಂತೋಷ್, ರವಿಕುಮಾರ್, ಈರೇಗೌಡ, ನಂದೀಶ್ ಎಸ್, ಹೇಮಂತ್ ಕುಮಾರ್ ಇದ್ದರು.

ಇಂದು ಬಿಜೆಪಿ ಕಾರ್ಯಕರ್ತರ ಸಂಕಲ್ಪ ಯಾತ್ರೆ

ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ನೇತೃತ್ವ

ಮಂಡ್ಯ,ನ.3– ಮುಂದಿನ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷವನ್ನು ಸದೃಢಗೊಳಿಸುವ ಉದ್ದೇಶದಿಂದ ರಾಜ್ಯಾದ್ಯಂತ ಪ್ರವಾಸ ನಡೆಸುತ್ತಿರುವ ಪಕ್ಷದ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರು ಶುಕ್ರವಾರ (ನ.4) ಶ್ರೀರಂಗಪಟ್ಟಣ ಹಾಗೂ ಮಂಡ್ಯಕ್ಕೆ ಆಗಮಿಸುತ್ತಿದ್ದಾರೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ತಿಳಿಸಿದ್ದಾರೆ.



ಸಿ.ಪಿ.ಉಮೇಶ್

ಬೆಳಗ್ಗೆ 9.30ಕ್ಕೆ ಶ್ರೀರಂಗಪಟ್ಟಣ ಎಸ್‌ಸಿ ಮತ್ತು ಎಸ್‌ಟಿ ವರ್ಗದ ಪ್ರಮುಖರ ಜತೆ ಸಂವಾದ ನಡೆಸಿ ಉಪಹಾರ ಸೇವಿಸುವರು. ಬೆಳಗ್ಗೆ 10.30ರಿಂದ 11.30ರವರೆಗೆ ಬೂತ್ ಅಧ್ಯಕ್ಷ ಹಾಗೂ ಬಿಎಲ್‌ಇ–2ಗಳ ಜತೆ ಸಭೆ ನಡೆಸುವರು. ಬೆಳಗ್ಗೆ 11.45ರಿಂದ ಮಧ್ಯಾಹ್ನ 12.45ರವರೆಗೆ ಕಾರ್ಯಕರ್ತರ ಸಂಕಲ್ಪ ಸಭೆ ನಡೆಸುವರು ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಂತರ ಮಂಡ್ಯಕ್ಕೆ ಆಗಮಿಸಲಿರುವ ಅವರು ನಗರದ ಕಾಳಿಕಾಂಬ ಕಲ್ಯಾಣಮಂಟಪದಲ್ಲಿ ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ ಬೂತ್ ಅಧ್ಯಕ್ಷರು, ಬಿಎಲ್‌ಎಗಳ ಸಭೆ ನಡೆಸಲಿದ್ದು, 4 ಗಂಟೆಯಿಂದ 5 ಗಂಟೆಯವರೆಗೆ ಕಾರ್ಯಕರ್ತರ ಸಂಕಲ್ಪ ಸಭೆ ನಡೆಸಲಿದ್ದಾರೆ. 5.30 ರಿಂದ 6.30ರವರೆಗೆ ಫಲಾನುಭವಿಗಳೊಂದಿಗೆ ಸಭೆ ನಡೆಸಿ ಉಪಹಾರ ಸೇವಿಸುವರು. ಬಳಿಕ ಬೆಂಗಳೂರಿಗೆ ತೆರಳುವರು ಎಂದರು.

ಜಿಲ್ಲೆಯಲ್ಲಿ ಸಚಿವರಾದ ಡಾ.ಸಿ.ಎನ್.ಅಶ್ವತ್ಥನಾರಾಯಣ, ಆರ್.ಅಶೋಕ್, ಕೆ.ಗೋಪಾಲಯ್ಯ, ಕೆ.ಸಿ.ನಾರಾಯಣಗೌಡ ಅವರೆಲ್ಲರೂ ಒಂದೊಂದು ಶಕ್ತಿ ಇದ್ದಂತೆ. ಅವರೆಲ್ಲರೂ ಪಕ್ಷಕ್ಕೆ ಬಲ ತುಂಬುತ್ತಿದ್ದಾರೆ. ತಮ್ಮ ತಮ್ಮ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸುತ್ತಾ ಬರುತ್ತಿದ್ದಾರೆ ಎಂದು ಸಮರ್ಥಿಸಿಕೊಂಡರು.


ನಾಲ್ಕು ವರ್ಷಗಳಿಂದ ಸ್ಥಗಿತಗೊಂಡಿದ್ದ ಮೈಶುಗರ್ ಕಾರ್ಖಾನೆಯನ್ನು ಆರಂಭಿಸಲಾಗಿದೆ. ಕೆಲವೊಂದು ತಾಂತ್ರಿಕ ದೋಷಗಳು ಎದುರಾಗಿರುವುದು ಸಹಜ ಬೆಳವಣಿಗೆ. ಅವುಗಳನ್ನು ಸರಿಪಡಿಸಿಕೊಂಡು ಮುಂದಿನ ದಿನಗಳಲ್ಲಿ ಉತ್ತಮವಾಗಿ ಕಾರ್ಯಾಚರಣೆ ನಡೆಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಉಮೇಶ್ ನಾಯಕತ್ವದಲ್ಲಿ ಬಿಜೆಪಿ ಸಂಘಟನೆ ಚುರುಕು: ಸಿ.ಪಿ.ಉಮೇಶ್ ಜಿಲ್ಲಾಧ್ಯಕ್ಷರಾದ ಮೇಲೆ ಮಂಡ್ಯದಲ್ಲಿ ಪಕ್ಷದ ಸಂಘಟನೆ ಚುರುಕಾಗಿದ್ದು, ಚುನಾವಣಾ ಹೊಸ್ತಿಲಿನಲ್ಲಿ ಜಿಲ್ಲೆಯಲ್ಲಿ ಕಾರ್ಯಕರ್ತರ ಸಭೆ, ಸಂಘಟನಾ ಸಭೆಗಳು ಸೇರಿದಂತೆ ಪಕ್ಷ ಹಾಗೂ ಸರ್ಕಾರದ ಎಲ್ಲಾ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ಹಾಗೂ ಯಶಸ್ವಿಯಾಗಿ ನಡೆಯುತ್ತಿದೆ.

ಇತ್ತೀಚೆಗೆ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್ ಅವರ ನಾಯಕತ್ವದಲ್ಲಿ ಕೆ.ಆರ್.ಪೇಟೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಆಗಮಿಸಿ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದರು. ಅದಾದ ಬಳಿಕ ಮಂಡ್ಯದ ಸರ್ಕಾರಿ ಮಹಾವಿದ್ಯಾಲಯದಲ್ಲೂ ಸಹ ಉಮೇಶ್ ಅವರ ನೇತೃತ್ವದಲ್ಲಿಯೇ ಬೃಹತ್ ಕಾರ್ಯಕ್ರಮವನ್ನು ಆಯೋಜಿಸಿ ಸಿಎಂ ಬೊಮ್ಮಾಯಿ ಅವರನ್ನು ಕರೆಸಲಾಗಿತ್ತು. ಆ ಕಾರ್ಯಕ್ರಮವೂ ಸಹ ಯಶಸ್ವಿಗೊಂಡಿತ್ತು ಎಂದರು.

ವೆಂಕಟೇಶ್ ನಿಧನ

ಪಾಂಡವಪುರ, ನ.3– ತಾಲೂಕಿನ ಚಿನಕುರಳಿ ಗ್ರಾಮದ ಸಿ.ಎಸ್.ವೆಂಕಟೇಶ್(53) ಅವರು ಗುರುವಾರ ಬೆಳಗ್ಗೆ ನಿಧನರಾದರು.



ಮೃತರು ಪತ್ನಿ ನಿರ್ಮಲ, ಮಕ್ಕಳಾದ ದೀಪಕ್ ಮತ್ತು ಧೀರಜ್ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು. ಶಾಸಕ ಸಿ.ಎಸ್.ಪುಟ್ಟರಾಜು, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ಹಾಗೂ ಕುಟುಂಬದವರು ಮೃತರ ಅಂತಿಮ ದರ್ಶನ ಪಡೆದರು.

ಒಂದನೇ ಪುಟದಿಂದ

ತಪ್ಪು ಮಾಡಲ್ಲ ಬಿಡಿ ಸಾ...

ಹಣ ಡ್ರಾ ಮಾಡಿಕೊಂಡು ಬಂದು, ದಂಡ ಪಾವತಿಸಿ, ಪೊಲೀಸರಿಂದ ಬೈಕ್ ಬಿಡಿಸಿಕೊಂಡು ಪತ್ನಿ ಹಾಗೂ ಮಗುವನ್ನು ಜಿಲ್ಲಾಸ್ಪತ್ರೆಗೆ ಕರೆದೊಯ್ದಿದ್ದಾರೆ. ನೋಟೀಸ್ ನೀಡಿ, ನ್ಯಾಯಾಲಯದಲ್ಲಿ ದಂಡ ಪಾವತಿಸುವಂತೆ ತಿಳಿ ಹೇಳಿ ಬೈಕ್ ಸವಾರನನ್ನು ಕಳುಹಿಸಬಹುದಿತ್ತಲ್ಲವೇ? ಕಾನೂನಿನಲ್ಲೂ ಮಾನವೀಯತೆಗೆ ಅವಕಾಶವಿಲ್ಲವೇ. ಪರಿಸ್ಥಿತಿಗನುಸಾರ ವಿನಾಯ್ತಿಗಳಿಲ್ಲವೇ. ಇದ್ದರೂ ಶ್ರೀಮಂತರಿಗೆ ಮಾತ್ರ ಎಂದಿನಿಸುತ್ತದೆ. ಇವು ಬಡವರ ಪಾಲಿಗಿಲ್ಲ ಅನ್ನಿಸುತ್ತೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾಜಿ ಸಿಎಂ ಹೆಚ್‌ಡಿಕೆ ಆಕ್ರೋಶ

ಮಗುವಿನ ಅನಾರೋಗ್ಯದಿಂದ ಆತಂಕಗೊಂಡಿದ್ದ ದಂಪತಿಯೊಂದಿಗೆ ಪೊಲೀಸರು ಹೀಗೆ ನಡೆದುಕೊಂಡಿದ್ದು ಅಕ್ಷಮ್ಯ ಮತ್ತು ಹೇಯ ಕೃತ್ಯ. ದಮ್ಮಯ್ಯ ಎಂದು ಬೇಡಿಕೊಂಡರೂ ಪೊಲೀಸರು ದಯೆ ತೋರಿಸಿಲ್ಲ. ಹಣಕ್ಕಾಗಿ ಪೀಡಿಸಿರುವುದು ಪೈಶಾಚಿಕ ನಡವಳಿಕೆ, ಇಲಾಖೆಯೇ ತಲೆ ತಗ್ಗಿಸುವಂತದ್ದು ಎಂದು ಕುಮಾರಸ್ವಾಮಿ ಕಿಡಿಕಾರಿದ್ದಾರೆ. ಗೃಹ ಸಚಿವರು ಈ ಬಗ್ಗೆ ಜನರಿಗೆ ಉತ್ತರ ನೀಡಬೇಕಲ್ಲದೆ, ನೊಂದ ದಂಪತಿಗೆ ಸಾಂತ್ವನ ಹೇಳಲೇಬೇಕು. ಇಂಥ ಘಟನೆಗಳು ರಾಜ್ಯದಲ್ಲಿ ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಹಾಗೂ ಪೊಲೀಸ್ ವ್ಯವಸ್ಥೆಯನ್ನು ಜನಸ್ನೇಹಿಯಾಗಿ ಮಾಡಲು ಎಲ್ಲಾ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕು ಎಂದು ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ವಯೋಮಿತಿ 2 ವರ್ಷ ಹೆಚ್ಚಳ

ಕೊರೊನಾ ಕಾರಣದಿಂದ 3 ವರ್ಷಗಳಿಂದ ಪೊಲೀಸ್ ನೇಮಕಾತಿ ನಡೆಯದ ಪರಿಣಾಮ ಆಕಾಂಕ್ಷಿಗಳು ಅವಕಾಶ ವಂಚಿತರಾಗಿದ್ದು, ಈ ಬಾರಿ ವಯೋಮಿತಿಯಲ್ಲಿ ವಿನಾಯ್ತಿ ನೀಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ಈ ಹಿನ್ನೆಲೆಯಲ್ಲಿ 2022-23ನೇ ಸಾಲಿನ ಒಂದು ಬಾರಿಯ ನೇಮಕಾತಿಗೆ ಗರಿಷ್ಠ ವಯೋಮಿತಿ ಪರಿಷ್ಕರಿಸಿ, 2 ವರ್ಷ ಹೆಚ್ಚಿಸಿ ಆದೇಶಿಸಲಾಗಿದೆ. ಪೊಲೀಸ್ ಕಾನ್ಸ್‌ಟೇಬಲ್ ಸಿಎಆರ್ ಮತ್ತು ಡಿಎಆರ್ 3,484 ಹಾಗೂ ಸಿವಿಲ್ 1591 ಹುದ್ದೆಗಳ ನೇಮಕಾತಿಗೆ ಅರ್ಜಿ ಕರೆಯಲಾಗಿದ್ದು, ಇದಕ್ಕೆ ಪರಿಶಿಷ್ಟ ಜಾತಿ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು 29 ವರ್ಷ, ಇತರೆ ಅಭ್ಯರ್ಥಿಗಳು 27 ವರ್ಷ, ಬುಡಕಟ್ಟು ಅಭ್ಯರ್ಥಿಗಳು 32 ವರ್ಷ ಗರಿಷ್ಠ ವಯೋಮಿತಿ ಅನ್ವಯವಾಗಲಿದೆ.

ಸಹೋದರನ ಪುತ್ರ ಶವವಾಗಿ ಪತ್ತೆ!

ನಾಲೆಗೆ ತಳ್ಳಿರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ. ತಮ್ಮ ಸಹೋದರನ ಮಗ ನಾಪತ್ತೆಯಾಗಿದ್ದರಿಂದ ತೀವ್ರ ದುಃಖಿತರಾಗಿದ್ದ ಶಾಸಕ ರೇಣುಕಾಚಾರ್ಯ ಚಂದ್ರಶೇಖರ್‌ನನ್ನು ಯಾರೋ ಅಪಹರಣ ಮಾಡಿದ್ದಾರೆ ಎಂಬ ಸಂಶಯ ವ್ಯಕ್ತಪಡಿಸಿದ್ದರು. ಇದೊಂದು ಪೂರ್ವ ನಿಯೋಜಿತ ಸಂಚು ಎಂದಿದ್ದ ಅವರು, ಅಪಹರಣಕಾರರು ಏನಾದರೂ ಡಿಮ್ಯಾಂಡ್ ಮಾಡಿದರೆ, ಬೇಷರತ್ತಾಗಿ ಅವರ ಬೇಡಿಕೆಯನ್ನು ಈಡೇರಿಸಲು ಸಿದ್ಧನಿದ್ದೇನೆ. ಪೊಲೀಸರಿಗೂ ದೂರು ಕೊಡಲ್ಲ. ಚಂದ್ರುವನ್ನು ಹುಡುಕಿ ಕೊಟ್ಟವರಿಗೆ ಸೂಕ್ತ ಬಹುಮಾನ ಕೊಡುತ್ತೇನೆ ಎಂದು ಘೋಷಿಸಿದ್ದರು. ಆದರೆ ಇಂದು ಚಂದ್ರಶೇಖರ್‌ನ ಶವ ಪತ್ತೆಯಾದ ಹಿನ್ನೆಲೆಯಲ್ಲಿ ಅವರ ಆಕ್ರಂದನ ಮುಗಿಲು ಮುಟ್ಟಿತ್ತು. ನನ್ನ ಮೇಲಿನ ದ್ವೇಷದಿಂದ ಚಂದ್ರಶೇಖರ್‌ನನ್ನು ಬಲಿ ಪಡೆದಿದ್ದಾರೆ. ಇದೊಂದು ವ್ಯವಸ್ಥಿತ ಕೊಲೆ ಎಂದು ಆರೋಪಿಸಿದ ರೇಣುಕಾಚಾರ್ಯ ಅವರಿಗೆ ದ್ವೇಷ ಇದ್ದಿದ್ದರೆ ನನ್ನನ್ನು ಬಲಿ ಪಡೆಯಬೇಕಾಗಿತ್ತು. ಮಗನನ್ನು ಕೊಲೆ ಮಾಡಿದ್ದು ತುಂಬಾ ನೋವನ್ನುಂಟು ಮಾಡಿದೆ. ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ಈ ಘಟನೆ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲಿ ಎಂದು ಆಗ್ರಹಿಸಿದರು.

ಇಂದು ಮಧ್ಯಾಹ್ನ ತುಂಗಭದ್ರಾ ಕಾಲುವೆಯಲ್ಲಿ ಕಾರೊಂದು ಬಿದ್ದಿದೆ ಎಂಬ ಮಾಹಿತಿ ಮೇರೆಗೆ ಹೊನ್ನಾಳಿ ತಾಲೂಕಿನ ಕಡಲಕಟ್ಟೆ ಗ್ರಾಮದ ಬಳಿ ಇರುವ ತುಂಗಾ ಕಾಲುವೆಯಲ್ಲಿ ಬಿದ್ದಿದ್ದ ಕೆಎ-17 ಎಂಎ-2534 ನೇ ನಂಬರ್‌ನ ಬಿಳಿ ಬಣ್ಣದ ಕ್ರೇಟಾ ಕಾರನ್ನು ಅಗ್ನಿಶಾಮಕ ದಳದ ಸಹಕಾರದೊಂದಿಗೆ ಪೊಲೀಸರು ಮೇಲೆತ್ತಿದಾಗ ಅದರಲ್ಲಿ ರೇಣುಕಾಚಾರ್ಯ ಸಹೋದರನ ಪುತ್ರನ ಶವ ದೊರೆತ್ತಿತ್ತು.

ಇದೊಂದು ವ್ಯವಸ್ಥಿತ ಕೊಲೆ ಎಂದು ಚಂದ್ರಶೇಖರ್‌ನ ದೊಡ್ಡಪ್ಪ ಎಂ.ಪಿ.ವಿಶ್ವಾರಾಧ್ಯ ಆರೋಪಿಸಿದ್ದಾರೆ. ನಮಗೆ ಆರಂಭದಿಂದಲೂ ಅನುಮಾನವಿತ್ತು. ರೇಣುಕಾಚಾರ್ಯರ ಮೇಲಿನ ರಾಜಕೀಯ ದ್ವೇಷದಿಂದ ಚಂದ್ರಶೇಖರ್‌ನನ್ನು ಕೊಲೆ ಮಾಡಲಾಗಿದೆ. ಈ ಸಾವಿನ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಲಿ ಎಂದು ಅವರು ಒತ್ತಾಯಿಸಿದರು.

ಹೊನ್ನಾಳಿ ಕ್ಷೇತ್ರದ ಶಾಸಕ ರೇಣುಕಾಚಾರ್ಯ ಪುತ್ರನ ಸಾವಿನ ಬಗ್ಗೆ ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಸುತ್ತೇವೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದ್ದಾರೆ. ಸಾವು ಹೇಗೆ ಸಂಭವಿಸಿದೆ ಎಂಬುದು ತನಿಖೆಯಿಂದ ಹೊರ ಬರಬೇಕಾಗಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ತಾರಾಲಯ ನಿರ್ಮಾಣ ಕಾಮಗಾರಿ ಶೀಘ್ರವೇ ಆರಂಭವಾಗುವ ನಿರೀಕ್ಷೆ

ಗ್ಲೋಬಲ್ ಟೆಂಡರ್ ಪ್ರಕ್ರಿಯೆ ಪ್ರಗತಿ



ಮೈಸೂರು, ನ.3(ಜಿಎ)- ಮೈಸೂರಿನಲ್ಲಿ ದೇಶದ ಮೊದಲ ಅತ್ಯಾಧುನಿಕ ಖಗೋಳ ತಾರಾಲಯ ನಿರ್ಮಾಣ ಯೋಜನೆ ಗ್ಲೋಬಲ್ ಟೆಂಡರ್ ಹಂತದಲ್ಲಿದ್ದು, ಕೆಲವೇ ದಿನಗಳಲ್ಲಿ ಕಾಮಗಾರಿ ಆರಂಭವಾಗುವ ನಿರೀಕ್ಷೆಯಿದೆ.

ಚಾಮುಂಡಿಬೆಟ್ಟದ ರಸ್ತೆ ಮಾರ್ಗ, ಸ್ವಾಗತ ಕಮಾನಿನ ಬಳಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಜಾಗದಲ್ಲಿ ತಾರಾಲಯ ಸಹಿತ ಕಾಸ್ಮೋಲಜಿ ಶಿಕ್ಷಣ ಮತ್ತು ಸಂಶೋಧನಾ ತರಬೇತಿ ಕೇಂದ್ರ(ಕಾಸ್ಮಾಸ್) ನಿರ್ಮಾಣಕ್ಕೆ ಗ್ಲೋಬಲ್ ಟೆಂಡರ್ ಮೂಲಕ ಜಪಾನ್ ಹಾಗೂ ಫ್ರಾನ್ಸ್ ಮೂಲದ ಕಂಪನಿಗಳು ಆಯ್ಕೆಯಾಗಿದ್ದು, ಇದರಲ್ಲಿ ಯಾವುದಾದರೊಂದು ಕಂಪನಿಯನ್ನು ಅಂತಿಮಗೊಳಿಸುವ ಪ್ರಕ್ರಿಯೆ ನಡೆದಿದೆ.

ತಜ್ಞರ ಭೇಟಿ: ಈಗಾಗಲೇ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್‌ನ ತಜ್ಞರ ಸಮಿತಿ, ಗ್ಲೋಬಲ್ ಟೆಂಡರ್ ಮೂಲಕ ಆಯ್ಕೆಯಾಗಿರುವ ಜಪಾನ್ ಮತ್ತು ಫ್ರಾನ್ಸ್ ಮೂಲದ ಕಂಪನಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ. ಅಲ್ಲಿನ ಯೋಜನೆಗಳಲ್ಲಿ ಗಮನಿಸಿರುವ ಪ್ರಮುಖಾಂಶಗಳನ್ನು ಕ್ರೋಢೀಕರಿಸಿ, ಸಿದ್ಧಪಡಿಸಿದ ವರದಿ ಸಹಿತ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಎರಡೂ ಕಂಪನಿಗಳ ಕಾರ್ಯಕ್ಷಮತೆ, ಸಾಧನೆಯನ್ನು ಅವಲೋಕಿಸಿದ ಬಳಿಕ ಒಂದನ್ನು ಆಯ್ಕೆ ಮಾಡಲಾಗುತ್ತದೆ. ಎಲ್ಲಾ ಪ್ರಕ್ರಿಯೆಗಳೂ ತ್ವರಿತಗತಿಯಲ್ಲಾಗುತ್ತಿದ್ದು, ಪ್ರಸಕ್ತ ತಿಂಗಳಾಂತ್ಯದಲ್ಲೇ ಕಾಮಗಾರಿ ಆರಂಭವಾಗಬಹುದು ಎನ್ನಲಾಗಿದೆ.

ತಾರಾಲಯದ ಉದ್ದೇಶವೇನು: ಸಾರ್ವಜನಿಕರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದರ ಜೊತೆಗೆ ಅವರಿಗೆ ಖಗೋಳ ಶಾಸ್ತ್ರ ಮತ್ತು ವಿಜ್ಞಾನದಲ್ಲಿ ಆಸಕ್ತಿ ಮೂಡಿಸುವುದು, ಡೇಟಾ ವಿಶ್ಲೇಷಣೆ ಮತ್ತು ಪ್ರಯೋಗಗಳನ್ನು ನಡೆಸುವುದು, ಖಗೋಳಶಾಸ್ತ್ರದ ಮೆಗಾ ಯೋಜನೆಗಳಲ್ಲಿ ಭಾಗವಹಿಸುವಿಕೆಗೆ ಉತ್ತೇಜಿಸುವುದು, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸುವುದು, ರಾಷ್ಟ್ರೀಯ ವಿಜ್ಞಾನ ಸಂಸ್ಥೆಗಳೊಂದಿಗೆ ಸಂಪರ್ಕ ಸಾಧಿಸಿ ವಿಜ್ಞಾನ ಶಿಕ್ಷಕರ ಕೌಶಲ್ಯ ಅಭಿವೃದ್ಧಿ ಹೆಚ್ಚಿಸುವುದು, ವಿಜ್ಞಾನ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ, ತರ್ಕಬದ್ಧತೆ ಮತ್ತು ವಿಮರ್ಶಾತ್ಮಕ ಚಿಂತನೆ ಬೆಳೆಸುವುದು ಸೇರಿದಂತೆ ಹತ್ತಾರು ಪ್ರಮುಖ ಉದ್ದೇಶಗಳು ಈ ತಾರಾಲಯ ಯೋಜನೆ ಹಿಂದಿವೆ.

ಯೋಜನೆ ವಿಶೇಷತೆಗಳು: ವಿಶ್ವವಿದ್ಯಾನಿಲಯ ಕ್ಯಾಂಪಸ್‌ನಲ್ಲಿ ದೇಶದ ಮೊದಲ ಅತ್ಯಾಧುನಿಕ ತಾರಾಲಯ ನಿರ್ಮಾಣವಾಗುತ್ತಿದ್ದು, ಇದರ ಮೂಲಕ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ಕಲ್ಪಿತವಾಗುವ ಪ್ರಮುಖ ಕೇಂದ್ರವಾಗಲಿದೆ. ನೆಲ ಮತ್ತು ಬಾಹ್ಯಾಕಾಶವನ್ನು ಟೆಲಿಸ್ಕೋಪ್‌ಗಳ ಮೂಲಕ ವೀಕ್ಷಿಸಲು ಅವಕಾಶವಾಗಲಿದೆ. ಮಿಷನ್‌ಗಳು/ದತ್ತಾಂಶ ವಿಜ್ಞಾನ, ಪರಿಕರಗಳು ಮತ್ತು ಬೋಧನೆಗಳ ಪ್ರಯೋಗಗಳ, ಡೇಟಾ ಉತ್ಪನ್ನಗಳ ಮೇಲೆ ತರಬೇತಿ ನೀಡಲಾಗುತ್ತದೆ. ಭಾರತೀಯ ದೂರದರ್ಶಕಗಳನ್ನು ಬಳಸಿಕೊಂಡು ದೂರದ ವೀಕ್ಷಣೆಗಳಲ್ಲಿ ಭಾಗವಹಿಸಬಹುದು. ಬೇಸಿಗೆ ಮತ್ತು ಚಳಿಗಾಲದಲ್ಲಿ ಶಾಲೆಗಳಲ್ಲಿ ಸಣ್ಣ ಯೋಜನೆಗಳು, ಇಂಟರ್ ಶಿಪ್‌ಗಳನ್ನು ಏರ್ಪಡಿಸುವುದು ಯೋಜನೆ ಭಾಗವಾಗಿದೆ. ಅಲ್ಲದೆ ಈ ತಾರಾಲಯದ ಮೂಲಕ ಭಾರತದ ಖಗೋಳಶಾಸ್ತ್ರದ ಪರಂಪರೆಯನ್ನು ಸಾರುವುದರಿಂದ ಇದೊಂದು ಪ್ರಮುಖ ಯೋಜನೆಯಾಗಿದೆ.

ಮೈಸೂರು ವಿವಿ ಮತ್ತು ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆಯ ಒಡಂಬಡಿಕೆಯೊಂದಿಗೆ ನಿರ್ಮಾಣವಾಗುತ್ತಿರುವ ಈ ತಾರಾಲಯಕ್ಕೆ ಕಳೆದ ಮಾರ್ಚ್ 6ರಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಶಂಕು ಸ್ಥಾಪನೆ ನೆರವೇರಿಸಿದ್ದರು.

ಈ ಯೋಜನೆಗೆ ಈಗಾಗಲೇ ಕೇಂದ್ರ ಸರ್ಕಾರದಿಂದ 81 ಕೋಟಿ ರೂ. ಹಾಗೂ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ 2 ಕೋಟಿ ರೂ. ಅನುದಾನವನ್ನು ನೀಡಿದ್ದಾರೆ.

> ಗ್ಲೋಬಲ್ ಟೆಂಡರ್‌ನಲ್ಲಿ ಆಯ್ಕೆಯಾಗಿರುವ ಕಂಪನಿಗಳಿಗೆ ಭೇಟಿ ನೀಡುವ ಉದ್ದೇಶದಿಂದ ಕಾಮಗಾರಿ ಆರಂಭವಾಗಲು ತಡವಾಯಿತು. ಈ ಯೋಜನೆಗೆ ಅಗತ್ಯವಿರುವ ಸಂಪೂರ್ಣ ಅನುದಾನ ಈಗಾಗಲೇ ಬಿಡುಗಡೆಯಾಗಿದೆ. ನಿರ್ಮಾಣ ಸ್ಥಳದ ಮಣ್ಣಿನ ಪರೀಕ್ಷೆಯನ್ನೂ ನಡೆಸಲಾಗಿದೆ. ಕೇಂದ್ರದಿಂದ ಜಪಾನ್ ಅಥವಾ ಫ್ರಾನ್ಸ್ ಮೂಲದ ಕಂಪನಿಗಳಲ್ಲಿ ಅಂತಿಮವಾಗಿ ಒಂದು ಆಯ್ಕೆಯಾಗಲಿದ್ದು, ಪ್ರಸಕ್ತ ತಿಂಗಳಲ್ಲೇ ಕಾಮಗಾರಿ ಆರಂಭವಾಗಿ ಒಂದು ವರ್ಷದಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.
>
> **-ಪ್ರೊ.ಕೆ.ಎನ್.ಲೋಕನಾಥ್, ನಿರ್ದೇಶಕ, ಮೈಸೂರು ವಿವಿ ಪಿಎಂಇಬಿ**

ಫಸಲ್ ಭಿಮಾ ಯೋಜನೆಯಡಿ ಟೊಮ್ಯಾಟೊ, ಭತ್ತಕ್ಕೆ ಗರಿಷ್ಠ ವಿಮಾ ಮೊತ್ತ ನಿಗದಿ

9 ಬೆಳೆಗಳು ವಿಮಾ ವ್ಯಾಪ್ತಿಗೆ ಆಯ್ಕೆ

ಮೈಸೂರು, ನ.3(ಎಂಕೆ)- 2022-23ನೇ ಸಾಲಿನ ಹಿಂಗಾರು ಹಾಗೂ ಬೇಸಿಗೆ ಹಂಗಾಮಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭಿಮಾ(ವಿಮಾ) ಯೋಜನೆಯಡಿ ಜಿಲ್ಲೆಯಲ್ಲಿ 9 ಬೆಳೆಗಳಿಗೆ ಅಧಿಸೂಚನೆ ನೀಡಿದ್ದು, ಟೊಮ್ಯಾಟೊ ಹಾಗೂ ಭತ್ತಕ್ಕೆ ಗರಿಷ್ಠ ವಿಮಾ ಮೊತ್ತ ನಿಗದಿಪಡಿಸಲಾಗಿದೆ.

ನೀರಾವರಿ ಹಾಗೂ ಮಳೆಯಾಶ್ರಿತ 9 ಬೆಳೆಗಳನ್ನು ಆಯ್ಕೆ ಮಾಡಲಾಗಿದೆ. 'ಮುಸುಕಿನ ಜೋಳ'(ಮಳೆಯಾಶ್ರಿತ) ಬೆಳೆ ನಷ್ಟಕ್ಕೆ ಎಕರೆಗೆ 20,000 ರೂ. ವಿಮಾ ಮೊತ್ತ ನಿಗದಿಯಾಗಿದ್ದು, ರೈತರು 303.53 ರೂ.,(ವಿಮಾ ಮೊತ್ತದ ಸುಮಾರು ಶೇ.1.50 ರಿಂದ 5ರಷ್ಟು) ವಿಮಾ ಕಂತು ಹಣವನ್ನು ಪಾವತಿಸಬೇಕಾಗಿದೆ. ಹಾಗೆಯೇ 'ರಾಗಿ'(ಮಳೆಯಾಶ್ರಿತ)ಗೆ 15,200 ರೂ. ಹಾಗೂ ನೀರಾವರಿ ಮೂಲಕ ಬೆಳೆದ 'ಮುಸುಕಿನ ಜೋಳ'ಕ್ಕೆ 23,600 ರೂ. ವಿಮಾ ಮೊತ್ತ ನಿಗದಿಯಾಗಿದೆ.

'ರಾಗಿ'(ನೀರಾವರಿ)ಗೆ 18,400 ರೂ., 'ಹುರುಳಿ'(ಮಳೆಯಾಶ್ರಿತ)ಗೆ 7,200 ರೂ., ಟೊಮ್ಯಾಟೊ ಬೆಳೆಗೆ 47,200 ರೂ., 'ಹಸಿಕಡಲೆ'(ಮಳೆಯಾಶ್ರಿತ)ಗೆ 11,600 ರೂ., ಹಾಗೂ 'ಭತ್ತ'ಕ್ಕೆ(ನೀರಾವರಿ) 34,400 ರೂ., ನಿಗದಿಪಡಿಸಲಾಗಿದೆ. ರೈತರು 'ಹುರುಳಿ' ಹಾಗೂ 'ಹಸಿಕಡಲೆ'ಗೆ ನ.30 ರೊಳಗೆ ವಿಮಾ ಕಂತು ಹಣ ಪಾವತಿಸಬೇಕಾಗಿದೆ. 'ಮುಸುಕಿನ ಜೋಳ'(ಮಳೆಯಾಶ್ರಿತ-ನೀರಾವರಿ) ಹಾಗೂ 'ರಾಗಿ'(ನೀರಾವರಿ) ಬೆಳೆಯ ವಿಮಾ ಕಂತು ಹಣವನ್ನು ಡಿ.16ರೊಳಗೆ ಹಾಗೂ 'ರಾಗಿ'(ಮಳೆಯಾಶ್ರಿತ) ಮತ್ತು ಟೊಮ್ಯಾಟೊ ಬೆಳೆಗೆ ನ.30 ರೊಳಗೆ ವಿಮಾ ಕಂತು ಹಣ ಪಾವತಿಸಲು ಅವಕಾಶ ನೀಡಲಾಗಿದೆ. ಹಾಗೆಯೇ ಬೇಸಿಗೆ ಹಂಗಾಮಿನಲ್ಲಿ ನೀರಾವರಿ ಮೂಲಕ ಬೆಳೆಯುವ ಭತ್ತ ಹಾಗೂ ರಾಗಿ ಬೆಳೆಗೆ ವಿಮಾ ಕಂತು ಹಣ ಪಾವತಿಸಲು 2023ರ ಫೆ.28ರ ವರೆಗೂ ಅವಕಾಶ ನೀಡಲಾಗಿದೆ.

8 ಸಾವಿರಕ್ಕೂ ಹೆಚ್ಚು ನೋಂದಣಿ: ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ(ವಿಮಾ) ಯೋಜನೆಯಡಿ ಜಿಲ್ಲೆಯಲ್ಲಿ ಸುಮಾರು 8.500ಕ್ಕೂ ಹೆಚ್ಚು ರೈತರು ನೋಂದಣಿ ಮಾಡಿಕೊಂಡಿದ್ದಾರೆ. ರೈತರು ಆರ್ಥಿಕ ಸಂಕಷ್ಟದಿಂದ ಹೊರ ಬರಲು ವಿಮಾ ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳುವುದು ಅತ್ಯಗತ್ಯವಾಗಿದೆ ಎಂದು ಎಂದು ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ದಸರಾ ವಸ್ತುಪ್ರದರ್ಶನದಲ್ಲಿ ಭಗವತಿ ಭಜನಾ ವಿಶೇಷ



ಮೈಸೂರು,ನ.3- ಮೈಸೂರು ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ಆಯೋಜಿಸಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಗುರುವಾರ ಸಂಜೆ ಬೆಂಗಳೂರಿನ ಭಗವತಿ ಭಜನಾ ಮಂಡಳಿ ವತಿಯಿಂದ ಭಜನಾ ಕಾರ್ಯಕ್ರಮ ನಡೆಯಿತು,

ವಿವಿಧ ದೇವರ ಭಜನೆಯ ಮೂಲಕ ಭಕ್ತಿ ಸುಧೆ ಹರಿಸಿದರು. ಈ ವೇಳೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಭಗವತಿ ಭಜನಾ ಮಂಡಳಿಯ ಕಲಾವಿದರಿಗೆ ಪ್ರಮಾಣ ಪತ್ರ ವಿತರಿಸಿದರು.

ನಂತರ ಅವರು ಮಾತನಾಡಿ, ಮೈಸೂರು ದಸರಾ ವಸ್ತುಪ್ರದರ್ಶನ ಪಿ. ಕಾಳಿಂಗ ರಾವ್ ಗಾನ ಮಂಟಪದಲ್ಲಿ ಪ್ರತಿದಿನ ಕಲಾವಿದರಿಗೆ ವೇದಿಕೆ ಕಲ್ಪಿಸಿ ಕೊಡಲಾಗುತ್ತಿದ್ದು, ಮಹಿಳಾ ತಂಡದ ಭಜನಾ ಮಂಡಳಿ ಭಾಗವಹಿಸಿದ್ದು ಸಂತಸದ ಸಂಗತಿ ಎಂದರು.

ಮುಡಾ ಸದಸ್ಯೆ ಲಕ್ಷ್ಮಿದೇವಿ, ಕರ್ನಾಟಕ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸದಸ್ಯೆ ರೇಣುಕಾರಾಜ್, ಮಾಜಿ ಗ್ರಾಮ ಪಂಚಾಯತಿ ಸದಸ್ಯೆ ನೇಹಾ ನೈನಾ ಇನ್ನಿತರರು ಉಪಸ್ಥಿತರಿದ್ದರು.

ಕೊಡವ ಕೌಟುಂಬಿಕ ರಿಂಕ್ ಹಾಕಿ ನಮ್ಮೆ ಪಂದ್ಯಾವಳಿ

ಮುಂದಿನ ಸುತ್ತಿಗೆ 28 ತಂಡಗಳು ಆಯ್ಕೆ

3 ದಿನಗಳ ಪಂದ್ಯ ಬಾಕಿ, ಭಾನುವಾರ ಫೈನಲ್



ಗೋಣಿಕೊಪ್ಪ, ನ.3- ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲಾ ಟರ್ಫ್ ಮೈದಾನದಲ್ಲಿ ಕೊಡವ ಹಾಕಿ ಅಕಾಡೆಮಿ ವತಿಯಿಂದ ನಡೆಯುತ್ತಿರುವ ಪಾಂಡಂಡ ಎಂ.ಕುಟ್ಟಪ್ಪ ಜ್ಞಾಪಕಾರ್ಥ ಕೊಡವ ಕೌಟುಂಬಿಕ ರಿಂಕ್ ಹಾಕಿ ನಮ್ಮೆಯಲ್ಲಿ ಮೊದಲ ಸುತ್ತಿನ ಎಲ್ಲ ಪಂದ್ಯಗಳು ಕೊನೆಗೊಂಡಿದ್ದು, 28 ತಂಡಗಳು ಪ್ರಶಸ್ತಿಗಾಗಿ ಹೋರಾಟ ನಡೆಸಲಿವೆ.

ಗುರುವಾರ ಮೊದಲು ಸುತ್ತಿನ ಪಂದ್ಯಗಳು ಕೊನೆಗೊಂಡಿದ್ದು, ಒಟ್ಟು 113 ತಂಡಗಳಲ್ಲಿ 85 ತಂಡಗಳು ನಿರ್ಗಮಿಸಿವೆ. 28 ತಂಡಗಳು ಶುಕ್ರವಾರದಿಂದ ಸೆಣಸಾಟ ನಡೆಸಲಿವೆ. ಗುರುವಾರ ಕಲಿಯಂಡ ತಂಡವು ಎರಡು ಗೆಲುವಿನೊಂದಿಗೆ ಫ್ರೀಕ್ವಾರ್ಟರ್‌ಗೆ ಲಗ್ಗೆ ಇಟ್ಟಿತು. ಮೂರು ದಿನಗಳ ಪಂದ್ಯಗಳು ಉಳಿದಿದ್ದು, ಭಾನುವಾರ ಫೈನಲ್ ಪಂದ್ಯ ನಡೆಯಲಿದೆ.

ಕಲಿಯಂಡವು ಮೊದಲ ಪಂದ್ಯದಲ್ಲಿ ಮಣೋಟಿರವನ್ನು 6-1 ಗೋಲುಗಳಿಂದ ಸೋಲಿಸಿತು. ಕಲಿಯಂಡ ಕಾರ್ಯಪ್ಪ 2, ಮಾಚಯ್ಯ, ಕಿರಣ್, ಬಿದ್ದಪ್ಪ ಮುತ್ತಪ್ಪ ಮಣೋಟಿರ ಅಯ್ಯಪ್ಪ ಒಂದೊಂದು ಗೋಲುಗಳನ್ನು ಹೊಡೆದರು. ಮತ್ತೊಂದು ಪಂದ್ಯದಲ್ಲಿ ಮಾಚಿಮಾಡವನ್ನು 5-3 ಗೋಲುಗಳಿಂದ ಜಯಿಸಿತು. ಕಲಿಯಂಡ ಕಿರಣ್ 3, ಬಿದ್ದಪ್ಪ, ಕಾರ್ಯಪ್ಪ ತಲಾ 1, ಮಾಚಿಮಾಡ ಮಂದಣ್ಣ 2, ಚರಣ್ 1 ಗೋಲು ಹೊಡೆದರು.

ಫಲಿತಾಂಶ; ಮಚ್ಚಾರಂಡಕ್ಕೆ ಪೊನ್ನಿಮಾಡ ವಿರುದ್ಧ 9-3 ಗೋಲುಗಳ ಜಯ ಲಭಿಸಿತು. ಮಚ್ಚಾರಂಡ ತಮ್ಮಯ್ಯ ಹಾಗೂ ಗಗನ್ ತಲಾ 4, ಮೊಣ್ಣಪ್ಪ 1, ಪೊನ್ನಿಮಾಡ ಸಂತೋಷ್ 3 ಗೋಲು ಹೊಡೆದು ತಂಡಕ್ಕೆ ನೆರವಾದರು.

ಅಪ್ಪಂಡೇರಂಡವು ಮೇರಿಯಂಡವನ್ನು 7-6 ಗೋಲುಗಳ ಅಂತರದಲ್ಲಿ ಮಣಿಸಿತು. ಅಪ್ಪಂಡೇರಂಡ ಬೋಪಣ್ಣ ಮತ್ತು ಮೇರಿಯಂಡ ರಾಯ್ ಅಯ್ಯಣ್ಣ ತಲಾ 6 ಗೋಲು ಹೊಡೆದು ಎರಡು ತಂಡದಲ್ಲಿಯೂ ಸಂಚಲನ ಮೂಡಿಸಿದರು. ಅಪ್ಪಂಡೇರಂಡ ಪೂಮಯ್ಯ 1 ಗೋಲು ಹೊಡೆದರು.

ಮಾಚಿಮಾಡಕ್ಕೆ ಕಾಡ್ಯಮಡ ವಿರುದ್ಧ 6-3 ಗೋಲುಗಳ ಜಯ ದೊರೆಯಿತು. ಮಾಚಿಮಾಡ ಕಾರ್ಯಪ್ಪ ಮತ್ತು ಕಾಡ್ಯಮಡ ಚಿಣ್ಣಪ್ಪ ತಲಾ 3 ಗೋಲು ಹೊಡೆದರು. ಮಾಚಿಮಾಡ ಮಂದಣ್ಣ 2, ಚರಣ್ 1 ಗೋಲುಗಳ ಕಾಣಿಕೆ ನೀಡಿದರು.

ಕೋಟೆರವು ಐತಿಚಂಡವನ್ನು 11-3 ಬೃಹತ್ ಅಂತರದಲ್ಲಿ ಮಣಿಸಿತು. ಕೋಟೆರ ಕೌಶಿಕ್ 7 ಗೋಲು ಹೊಡೆದು ಸಂಭ್ರಮಿಸಿದರು. ಭರತ್ 2, ನಿಖಿಲ್, ನಾಣಯ್ಯ, ಐತಿಚಂಡ ಸಜನ್, ಮಂದಣ್ಣ, ಪೊನ್ನಣ್ಣ ತಲಾ ಒಂದೊಂದು ಗೋಲು ಬಾರಿಸಿದರು.

ಮೊನ್ನೋಲ ತಂಡವು ಕುಕ್ಕೇರವನ್ನು 8-4 ಗೋಲುಗಳ ಅಂತರದಲ್ಲಿ ಸೋಲಿಸಿತು. ಮೊನ್ನೋಲ ತಂಡ ನಾಣಯ್ಯ, ಶರತ್ ತಲಾ 3 ಗೋಲು, ಅಶ್ವಿನ್, ಕುಕ್ಕೇರ ಸುಬ್ಬಯ್ಯ ತಲಾ 2 ಗೋಲು, ಚೆಂಗಪ್ಪ ಮಂದಣ್ಣ ತಲಾ ಒಂದೊಂದು ಗೋಲು ಹೊಡೆದರು.

ಕಡೇಮಡಕ್ಕೆ ಅರೆಯಡ ವಿರುದ್ಧ 4-3 ಗೋಲುಗಳ ರೋಚಕ ಗೆಲುವು ದೊರೆಯಿತು. ಕಡೇಮಡ ಚರ್ಮಣ 2, ಕುಶಾಲಪ್ಪ, ಪೂವಣ್ಣ, ಅರೆಯಡ ಗಣೇಶ್, ಚಮನ್, ಶ್ರವಣ್ ಒಂದೊಂದು ಗೋಲುಗಳ ಕಾಣಿಕೆ ನೀಡಿದರು.

ಪಾಂಡಂಡವು ಕುಂಬೇರವನ್ನು 12-3 ಗೋಲುಗಳಿಂದ ಮಣಿಸಿತು. ಪಾಂಡಂಡ ಬೋಪಣ್ಣ 4, ಕಾರ್ಲ್ ಕಾರ್ಯಪ್ಪ, ದೇಚಮ್ಮ ತಲಾ 3, ನಾಣಯ್ಯ, ಅಯ್ಯಪ್ಪ, ಕುಂಬೇರ ಪರ್ಷಿದ್, ಚಿಣ್ಣಪ್ಪ, ಅದ್ವಿತ್ ತಲಾ 1 ಗೋಲು ದಾಖಲಿಸಿದರು.

ಪೊರುಕೊಂಡಕ್ಕೆ ಚೆಯ್ಯಮಡ ವಿರುದ್ಧ 12-2 ಗೋಲುಗಳ ಜಯ ದೊರೆಯಿತು. ಪೊರುಕೊಂಡ ಅನಿಲ್ 8 ಗೋಲು ಸಿಡಿಸಿದರು. ಲವ 3, ಚೆಂಗಪ್ಪ ಚೆಯ್ಯಂಡ ಮಂಜು, ಶಂಕರಿ ತಲಾ 1 ಗೋಲು ಹೊಡೆದರು.

ಪುಚ್ಚಿಮಂಡವು ಮುದ್ದಂಡ ವಿರುದ್ಧ 12-1 ಗೋಲುಗಳ ಜಯಭೇರಿ ಸಾಧಿಸಿತು. ಪುಚ್ಚಿಮಂಡ ಭವನ್ 6, ಯಶ್ವಿನ್ 4, ವಿವತ್ 2, ಮುದ್ದಂಡ ಸುಬ್ಬಯ್ಯ 1 ಗೋಲು ಹೊಡೆದರು.

ಮುಕ್ಕಾಟೀರಕ್ಕೆ (ಪುಲಿಕೋಟ್) ಚೆರಿಯಂಡ ವಿರುದ್ಧ 4-2 ಗೋಲುಗಳ ಜಯ ದೊರೆಯಿತು. ಮುಕ್ಕಾಟೀರ ಮುತ್ತಪ್ಪ 3, ಮಾಚಯ್ಯ, ಚೆರಿಯಂಡ ತನೀಶ್, ದೀಪು ತಲಾ 1 ಗೋಲು ಬಾರಿಸಿದರು.

ಶಾಸಕ ಪುಟ್ಟರಂಗಶೆಟ್ಟಿ ವಿರುದ್ಧ ಸಿಡಿದೆದ್ದ ಕಾಂಗ್ರೆಸ್ ದಲಿತ ಮುಖಂಡರು

ದಲಿತರನ್ನು ಕಡೆಗಣಿಸುತ್ತಿರುವ ಬಗ್ಗೆ ಕೆಪಿಸಿಸಿ ಕಾರ್ಯಾಧ್ಯಕ್ಷರಿಗೆ ಲಿಖಿತ ದೂರು

- ದಲಿತ ಮುಖಂಡರ ಸಭೆ ನಡೆಸಿ ಆಕ್ರೋಶ
- ಪುಟ್ಟರಂಗಶೆಟ್ಟಿಗೆ ಈ ಬಾರಿ ಟಿಕೆಟ್ ಕೊಡಬೇಡಿ
- ಅಸಮಾಧಾನ ಬಗೆಹರಿಸಲು ಧ್ರುವನಾರಾಯಣ್ ಸಭೆ



> ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ದಲಿತ ಸಮುದಾಯ ಹಾಗೂ ಪಕ್ಷದಲ್ಲಿರುವ ದಲಿತ ಮುಖಂಡರನ್ನು ಕಡೆಗಣಿಸುತ್ತಿದ್ದಾರೆ. ಈ ಬಗ್ಗೆ ಶಾಸಕರಿಗೆ ಅನೇಕ ಬಾರಿ ಹೇಳಿದರೂ ಸಹ ಯಾವುದೇ ಪ್ರಯೋಜನ ಆಗಲಿಲ್ಲ. ಹೀಗಾಗಿ ಪಕ್ಷದಲ್ಲಿರುವ ದಲಿತ ಮುಖಂಡರು ಸಭೆ ಸೇರಿ ಶಾಸಕರ ಕಾರ್ಯವೈಖರಿ ಬಗ್ಗೆ ಪಕ್ಷದ ಹೈಕಮಾಂಡ್‌ಗೆ ದೂರು ಸಲ್ಲಿಸಲು ತೀರ್ಮಾನಿಸಲಾಯಿತು.
>
> **-ಸಿ.ಕೆ. ರವಿಕುಮಾರ್, ಕಾಂಗ್ರೆಸ್, ಮುಖಂಡರು, ಚಾಮರಾಜನಗರ.**

ಸಿದ್ದಲಿಂಗಸ್ವಾಮಿ

ಚಾಮರಾಜನಗರ, ನ.3- ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರ ವಿರುದ್ಧ ಆದೇ ಪಕ್ಷದ ದಲಿತ ಮುಖಂಡರು ಅಸಮಾಧಾನಗೊಂಡಿದ್ದು, ಇದೀಗ ಅದು ಬಹಿರಂಗಗೊಂಡಿದೆ.

ಶಾಸಕ ಪುಟ್ಟರಂಗಶೆಟ್ಟಿ ಅವರ ಕಾರ್ಯವೈಖರಿ ಬಗ್ಗೆ ತೀವ್ರ ಅಸಮಾಧಾನಗೊಂಡಿರುವ ಪಕ್ಷದ ಮುಖಂಡರು ನಗರದಲ್ಲಿ ಸಭೆ ನಡೆಸಿದ್ದಾರೆ. ಈ ಮೂಲಕ ಪುಟ್ಟರಂಗಶೆಟ್ಟಿ ಅವರ ವಿರುದ್ಧ ಬಂಡಾಯ ಸಾರಿರುವ ದಲಿತ ಮುಖಂಡರು ಪಕ್ಷದ ಕಾರ್ಯಾಧ್ಯಕ್ಷರು ಆಗಿರುವ ಮಾಜಿ ಸಂಸದ ಆರ್. ಧ್ರುವನಾರಾಯಣ್ ಅವರಿಗೆ ಲಿಖಿತ ದೂರು ನೀಡಿದ್ದಾರೆ.

ಚಾಮರಾಜನಗರ ಕ್ಷೇತ್ರದಿಂದ ಮೂರು ಬಾರಿ ಗೆಲುವು ಸಾಧಿಸಿರುವ ಪುಟ್ಟರಂಗಶೆಟ್ಟಿ ಅವರು ದಲಿತ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. ಪಕ್ಷದಲ್ಲಿರುವ ದಲಿತ ಮುಖಂಡರನ್ನು ಕಡೆಗಣಿಸುತ್ತಿದ್ದಾರೆ. ಪಕ್ಷದಲ್ಲಿರುವ ದಲಿತರಿಗೆ ಸೂಕ್ತ ಸ್ಥಾನಮಾನಗಳನ್ನು ಕಲ್ಪಿಸುತ್ತಿಲ್ಲ. ಗುತ್ತಿಗೆ ಕೆಲಸಗಳನ್ನು ಪಕ್ಷದ ಮುಖಂಡರಿಗೆ ಹಾಗೂ ಅರ್ಹರಿಗೆ ನೀಡದೇ ಹಣದ ಆಸೆಗಾಗಿ ಹೊರ ಜಿಲ್ಲೆಯವರಿಗೆ ಮಾರಿಕೊಳ್ಳುತ್ತಿದ್ದಾರೆ. ಹಿರಿಯ ರಾಜಕಾರಣಿ ಮಲ್ಲಿಕಾರ್ಜುನ ಖರ್ಗೆ ಅವರು, ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ಪುಟ್ಟರಂಗಶೆಟ್ಟಿ ಅವರು ಫ್ಲೆಕ್ಸ್ ಹಾಕಿಸಲಿಲ್ಲ. ವಿಜಯೋತ್ಸವವನ್ನು ಕಾಟಾಚಾರಕ್ಕೆ ಮಾಡಲಾಯಿತು. ತಮ್ಮ (ಪುಟ್ಟರಂಗಶೆಟ್ಟಿ) ಚುನಾವಣೆಗೆ ಶ್ರಮ ಹಾಕುವಷ್ಟು ಬೇರೆಯವರ ಚುನಾವಣೆಗಳಲ್ಲಿ ಶ್ರಮ ಹಾಕುವುದಿಲ್ಲ. ಇದು ಅನೇಕ ಚುನಾವಣೆಗಳಲ್ಲಿ ಸಾಬೀತಾಗಿದೆ. ದಲಿತರನ್ನು ಪುಟ್ಟರಂಗಶೆಟ್ಟಿ ಅವರು ಕಡೆಗಣಿಸುವುದು ಮತ್ತು ನಿರ್ಲಕ್ಷಿಸುವುದು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಪಕ್ಷದಲ್ಲಿರುವ ದಲಿತ ಮುಖಂಡರು ಸಭೆ ನಡೆಸಿದ್ದು ನಿಜ ಎಂದು ಪಕ್ಷದ ಮುಖಂಡ ಸಿ.ಕೆ. ರವಿಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಭೆಗೆ ಕ್ಷೇತ್ರದ ಎಲ್ಲಾ ಗ್ರಾಮಗಳಿಂದ ಪಕ್ಷದ ದಲಿತ ಮುಖಂಡರು ಸುಮಾರು 200 ರಿಂದ 250 ಜನರು ಆಗಮಿಸಿದ್ದರು. ಸಭೆಯಲ್ಲಿ ಪಾಲ್ಗೊಂಡಿದ್ದ ಎಲ್ಲರೂ ಪುಟ್ಟರಂಗಶೆಟ್ಟಿ ಅವರ ಕಾರ್ಯವೈಖರಿ ಬಗ್ಗೆ ಖಂಡಿಸಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದರು.

ನಿರ್ಣಯ: ಚಾಮರಾಜನಗರ ಕ್ಷೇತ್ರದಲ್ಲಿ ದಲಿತರಿಗೆ ಟಿಕೆಟ್ ನೀಡಬೇಕು. ಪುಟ್ಟರಂಗಶೆಟ್ಟಿ ಅವರಿಗೆ ಟಿಕೆಟ್ ನೀಡಬಾರದು. ಉಪ್ಪಾರ ಸಮುದಾಯಕ್ಕೆ ಟಿಕೆಟ್ ನೀಡಬೇಕು ಎಂದು ಹೈಕಮಾಂಡ್ ತೀರ್ಮಾನಿಸಿದರೆ, ಚಾಮರಾಜನಗರ ತಾಲೂಕಿಗೆ ಸೇರಿದ ಉಪ್ಪಾರ ಮುಖಂಡರಿಗೆ ಟಿಕೆಟ್ ನೀಡಬೇಕು ಎಂದು ಪಕ್ಷದ ಹೈಕಮಾಂಡ್‌ನ್ನು ಒತ್ತಾಯಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು ಎಂದು ತಿಳಿದು ಬಂದಿದೆ.

ಮೈಸೂರು ಭಾಗದ ಪಕ್ಷದ ಉಸ್ತುವಾರಿ ಹೊತ್ತಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರನ್ನು ಭೇಟಿ ಮಾಡಿ ಪುಟ್ಟರಂಗಶೆಟ್ಟಿ ವಿರುದ್ಧ ಲಿಖಿತ ದೂರು ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಗಿತ್ತು ಅದರಂತೆ ನಂಜನಗೂಡು ಪ್ರವಾಸಿ ಮಂದಿರದಲ್ಲಿ ಬುಧವಾರ ರಾತ್ರಿ ಧ್ರುವನಾರಾಯಣ್ ಅವರನ್ನು ಭೇಟಿ ಮಾಡಿರುವ ದಲಿತ ಮುಖಂಡರು ಪುಟ್ಟರಂಗಶೆಟ್ಟರ ವಿರುದ್ಧ ಲಿಖಿತ ದೂರು ಸಲ್ಲಿಸಿದರು ಎಂದು ತಿಳಿದು ಬಂದಿದೆ.

ಪಕ್ಷದ ಈ ಬೆಳವಣಿಗೆ ಬಗ್ಗೆ ಚರ್ಚಿಸಲು ಧ್ರುವನಾರಾಯಣ್ ಅವರು ಪುಟ್ಟರಂಗಶೆಟ್ಟಿ ಹಾಗೂ ಪಕ್ಷದ ದಲಿತ ಮುಖಂಡರ ಸಭೆ ಕರೆಯಲು ನಿರ್ಧರಿಸಿದ್ದಾರೆ ಎಂದು ಹೇಳಲಾಗಿದೆ. ಈ ಬಗ್ಗೆ ಚಾಮರಾಜನಗರ ಕ್ಷೇತ್ರದಾದ್ಯಂತ ಗುಸುಗುಸು ಚರ್ಚೆ ನಡೆಯುತ್ತಿದೆ.

ಮುದ್ದವ್ವ ನಿಧನ

ನಾಪೋಕ್ಲು, ನ.3- ಸ್ಥಳೀಯ ಗ್ರಾಮ ಪಂಚಾಯಿತಿ ಬೇತು ಗ್ರಾಮದ ದಿ.ಕಾಳೆಯಂಡ ಅಯ್ಯಣ್ಣ ಅವರ ಧರ್ಮಪತ್ನಿ ಮುದ್ದವ್ವ (83) ಬುಧವಾರ ನಿಧನರಾದರು.



ಅಂತ್ಯಕ್ರಿಯೆ ಗುರುವಾರ ಬೇತು ಗ್ರಾಮದ ಸ್ವಗ್ರಾಮದಲ್ಲಿ ನಡೆಯಿತು. ಮೃತರು ಇಬ್ಬರು ಪುತ್ರರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

ವೇಣುಗೋಪಾಲ್

ಕುಶಾಲನಗರ, ನ.3- ನೀರಾವರಿ ನಿಗಮದ ನಿವೃತ್ತ ನೌಕರ ಕುಶಾಲ ನಗರದ ಕರಿಯಪ್ಪ ಬಡಾವಣೆ ನಿವಾಸಿ ಡಿ.ಎಸ್.ವೇಣುಗೋಪಾಲ್(75) ಗುರುವಾರ ನಿಧನರಾದರು. ಮೃತರು ಪತ್ನಿ ಹಾಗೂ ಐವರು ಮಕ್ಕಳನ್ನು ಅಗಲಿದರು. ಮೃತರ ಅಂತ್ಯಕ್ರಿಯೆ ಕುಶಾಲನಗರದಲ್ಲಿ ನೆರವೇರಿತು.



ವಿ.ಪೇಟೆಯಲ್ಲಿ 3.25 ಕೋಟಿ ಕಾಮಗಾರಿಗೆ ಚಾಲನೆ



ವಿರಾಜಪೇಟೆ, ನ.3- ಸರ್ಕಾರದಿಂದ ಪುರಸಭೆಗೆ ಬಿಡುಗಡೆಯಾಗಿರುವ ಅನುದಾನವನ್ನು ರಸ್ತೆ, ಚರಂಡಿ, ಶುದ್ಧ ಕುಡಿಯುವ ನೀರಿನ ಸೌಲಭ್ಯ ಹಾಗೂ ಇತರ ಅಭಿವೃದ್ಧಿ ಕಾರ್ಯಗಳಿಗೆ ಬಳಸಿಕೊಳ್ಳಬೇಕು ಎಂದು ಶಾಸಕ ಕೆ.ಜಿ.ಬೋಪಯ್ಯ ತಿಳಿಸಿದ್ದಾರೆ.

ವಿರಾಜಪೇಟೆ ಪುರಸಭೆಯ ವಿಜಯನಗರ ವಾರ್ಡ್‌ನಲ್ಲಿ 3.25 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ನಗರದ ಹಲವೆಡೆ ಬಾಕಿಯಿರುವ ರಸ್ತೆ, ಚರಂಡಿ, ಕುಡಿಯುವ ನೀರಿನ ಸೌಲಭ್ಯ ಹಾಗೂ ಬಾಕಿ ಉಳಿದಿರುವ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಬೇಕು. ಕಾಮಗಾರಿ ನಡೆಯುವ ಸಂದರ್ಭದಲ್ಲಿ ಅಲ್ಲಿನ ವಾರ್ಡ್ ಸದಸ್ಯರು ಕಾಮಗಾರಿ ಕಳಪೆಯಾಗದಂತೆ ನೋಡಿಕೊಳ್ಳುವುದು ಉತ್ತಮ. ಗುತ್ತಿಗೆದಾರರು ಎಲ್ಲಾ ಕಾಮಗಾರಿಗಳನ್ನು ಮಾರ್ಚ್ ತಿಂಗಳಲ್ಲಿಯೇ ಮುಗಿಸುವಂತಾಗಬೇಕು ಎಂದರು.

ಭೂಮಿ ಪೂಜೆ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ, ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಮಾತನಾಡಿದರು.

ಈ ವೇಳೆ ಪುರಸಭೆ ಅಧ್ಯಕ್ಷೆ ಸುಸ್ಮಿತಾ, ಉಪಾಧ್ಯಕ್ಷ ವಿನಾಂಕ್ ಕುಟ್ಟಪ್ಪ, ಮುಖ್ಯಾಧಿಕಾರಿ ಚಂದ್ರ ಕುಮಾರ್, ಅಭಿಯಂತರ ಹೇಮ್ ಕುಮಾರ್, ಸದಸ್ಯರಾದ ಎಂ.ಕೆ.ದೇಚಮ್ಮ, ಎಸ್.ಹೆಚ್.ಮತೀನ್, ಆಶಾ ಸುಬ್ಬಯ್ಯ, ಜೂನಾ, ರಜನಿಕಾಂತ್, ಮಹ್ಮದ್ ರಫಿ, ಡಿ.ಪಿ.ರಾಜೇಶ್, ತಸ್ನಿಂ ಅಕ್ತರ್, ಫಸಿಹಾ ತಬಸವ್, ಅನಿತಾ, ಗುತ್ತಿಗೆದಾರ ಎನ್.ಬಿ.ನವಿನ್ ಹಾಗೂ ಸ್ಥಳೀಯ ನಿವಾಸಿಗಳು ಭಾಗವಹಿಸಿದ್ದರು.

ಸಚಿವ ವಿ.ಸೋಮಣ್ಣರಿಂದ ಮಹಿಳೆಗೆ ಕಪಾಳಮೋಕ್ಷ ಪ್ರಕರಣ

ದೂರು ನೀಡಿದ್ದರೂ ದಾಖಲಿಸದ ಠಾಣೆ ಎದುರು ಪ್ರತಿಭಟನೆ



ಗುಂಡ್ಲುಪೇಟೆ, ನ.3- ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಹಂಗಳ ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಿಳೆಗೆ ಕಪಾಳಮೋಕ್ಷ ಮಾಡಿರುವ ಹಿನ್ನೆಲೆಯಲ್ಲಿ ಅವರ ವಿರುದ್ಧ ಸುಮೋಟೋ ಕೇಸನ್ನು ದಾಖಲಿಸುವಂತೆ ವಿವಿಧ ಪ್ರಗತಿಪರ ಸಂಘಟನೆಗಳು ದೂರು ನೀಡಿದ್ದರೂ ಸಹ ಪೊಲೀಸರು ದೂರು ದಾಖಲಿಸಿಕೊಂಡಿಲ್ಲ ಎಂದು ಆರೋಪಿಸಿ ಸಂಘಟನೆಗಳ ಮುಖಂಡರು ಮತ್ತು ಪದಾಧಿಕಾರಿಗಳು ಪಟ್ಟಣದ ಠಾಣೆ ಮುಂಭಾಗ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಕೆಆರ್‌ಎಸ್ ಪಕ್ಷದ ಯುವ ಘಟಕದ ಅಧ್ಯಕ್ಷ ಹಾಗೂ ವಕೀಲ ರವಿಕುಮಾರ್, ಇತ್ತೀಚೆಗೆ ಹಂಗಳ ಗ್ರಾಮದಲ್ಲಿ ಹಕ್ಕುಪತ್ರ ವಿತರಣಾ ಸಮಯದಲ್ಲಿ ಗ್ರಾಮದ ಮಹಿಳೆ ಕೆಂಪಮ್ಮ ಎಂಬುವವರಿಗೆ ವೇದಿಕೆಯಲ್ಲಿಯೇ ಸೋಮಣ್ಣ ಕಪಾಳಮೋಕ್ಷ ಮಾಡಿರುವುದಕ್ಕೆ ವೀಡಿಯೋ ಸಾಕ್ಷಿಯೇ ಇದೆ. ಆದರೂ ಸಹ ಆ ಮಹಿಳೆಯಿಂದ ಸುಳ್ಳು ಹೇಳಿಕೆಯನ್ನು ನೀಡಿಸಿದ್ದಾರೆಂದು ಕಿಡಿಕಾರಿದರು. ಕಪಾಳಮೋಕ್ಷಕ್ಕೆ ಒಳಗಾದ ಮಹಿಳೆಯಿಂದ ಸುಳ್ಳು ಹೇಳಿಕೆ ನೀಡಿಸುವುದರೊಂದಿಗೆ ಪ್ರಕರಣವನ್ನು ತಿರುಚುತ್ತಿದ್ದಾರೆ. ಆದ್ದರಿಂದ ಪೊಲೀಸರು ಸೋಮಣ್ಣ ವಿರುದ್ಧ ಸುಮೋಟೊ ದೂರು ದಾಖಲಿಸಿಕೊಂಡು ಎಸ್‌ಸಿ ಎಸ್‌ಟಿ ದೌರ್ಜನ್ಯ ನಿಯಂತ್ರಣ ಕಾಯ್ದೆಯನ್ವಯ ಕ್ರಮ ಕೈಗೊಳ್ಳಬೇಕು ಹಾಗೂ ಮಹಿಳೆಯನ್ನು ಮಂಪರು ಪರೀಕ್ಷೆಗೆ ಒಳಪಡಿಸಿ ಸತ್ಯಾಂಶವನ್ನು ಹೊರತರಬೇಕು ಎಂದು ಒತ್ತಾಯಿಸಿದರು.

ನಂತರ ಅಡಿಷನಲ್ ಎಸ್‌ಪಿ ಸುಂದರ್ ರಾಜು ಅವರಿಗೆ ಒತ್ತಾಯಿಸಿರುವ ಮನವಿ ಸಲ್ಲಿಸಲಾಯಿತು. ಈ ಪ್ರತಿಭಟನೆಯಲ್ಲಿ ಕೆ.ಆರ್.ಎಸ್.ಪಕ್ಷದ ಪದಾಧಿಕಾರಿಗಳು, ವಿವಿಧ ಪ್ರಗತಿಪರ ಸಂಘಟನೆಗಳ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಮೈಸೂರು ಮಿತ್ರ

ಒಂದನೇ ಪುಟದಿಂದ

ವರಿಷ್ಠರಿಂದಲೇ ಅಭ್ಯರ್ಥಿಗಳ ಆಯ್ಕೆ

ನಾಯಕರು, ಬಹಳಷ್ಟು ವರ್ಗಗಳು ಪಕ್ಷಕ್ಕಾಗಿ ದುಡಿದರೂ, ಅವರ ಸೇವೆ ಹಾಗೂ ಸಜ್ಜನಿಕೆಗೆ ಬೆಲೆ ಕಾಂಗ್ರೆಸ್ ಪಕ್ಷದಲ್ಲಿಲ್ಲ ಎಂದು ಸಂಪೂರ್ಣ ಖಾತ್ರಿಯಾದ ನಂತರ ಭಾಜಪ ದೇಶಭಕ್ತ, ವಿಶ್ವಮಾನ್ಯ ನಾಯಕ ನರೇಂದ್ರ ಮೋದಿಯವರ ನೇತೃತ್ವದ ಪಕ್ಷವಾಗಿದ್ದು, ಡಬಲ್ ಇಂಜಿನ್ ಸರ್ಕಾರ ಕರ್ನಾಟಕದ ಏಳಿಗೆಗಾಗಿ, ಪ್ರಗತಿಗಾಗಿ ಕೆಲಸ ಮಾಡಲಾಗುತ್ತಿದೆ ಎಂಬ ವಿಶ್ವಾಸದೊಂದಿಗೆ ಎಲ್ಲ ಪ್ರಮುಖರು ಇಂದು ಭಾಜಪವನ್ನು ಸೇರಿದ್ದಾರೆ ಎಂದರು. ಮುದ್ದಹನುಮೇಗೌಡ ತುಮಕೂರು ಜಿಲ್ಲೆಯ ನಾಯಕರಾಗಿ, ಶಾಸಕರಾಗಿ, ಸಂಸದರಾಗಿ ವಿಧಾನಸಭೆಯಲ್ಲಿ ಹಾಗೂ ಸಂಸತ್ತಿನಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದ ಸಜ್ಜನ ಮತ್ತು ಜನಪರ ಧ್ವನಿ ಎತ್ತುವ ರಾಜಕಾರಣಿಯಾಗಿ ಸಾರ್ವಜನಿಕ ಜೀವನದಲ್ಲಿರುವವರು. ಅವರು ಇಂದು ಭಾಜಪಕ್ಕೆ ಸೇರ್ಪಡೆಯಾಗಿರುವುದು ನಮ್ಮ ಪಕ್ಷಕ್ಕೆ ಬಹಳ ದೊಡ್ಡ ಬಲ ಬಂದಿದೆ ಎಂದರು.

ಶಶಿಕುಮಾರ್ ಅವರು ಸಂಸತ್ ಸದಸ್ಯರಾಗಿದ್ದು, ಭಾಜಪದಲ್ಲಿದ್ದರೆ ಗೌರವ ಎಂದು ಅರಿತು ನಮ್ಮಲ್ಲಿ ಸೇರಿದ್ದಾರೆ. ಖ್ಯಾತ ಚಲನಚಿತ್ರ ನಟರಾಗಿರುವ ಅವರು ರಾಜ್ಯಾದ್ಯಂತ ಅಭಿಮಾನಿಗಳನ್ನು ಹೊಂದಿದ್ದು, ಎಸ್‌ಟಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಇವರ ಸೇರ್ಪಡೆಯಿಂದ ಪಕ್ಷಕ್ಕೆ ಶಕ್ತಿ ಬಂದಿದೆ. ಸೇವಾದಳದಲ್ಲಿ ಕಾರ್ಯ ನಿರ್ವಹಿಸಿದ ಹನುಮಂತರಾವ್, ಅಂತಹ ಪರಿಶ್ರಮಿಗೂ ಬೇರೆ ಪಕ್ಷದಲ್ಲಿ ಬೆಲೆಯಿಲ್ಲ ಎಂದು ಮನಗಂಡು ಭಾಜಪ ಸೇರಿದ್ದಾರೆ. ಅವರ ಸೇವೆಯನ್ನು ಪಕ್ಷ ಬಯಸುತ್ತದೆ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಬಿ.ಹೆಚ್.ಅನಿಲ್‌ಕುಮಾರ್ ಅವರು ಸರಕಾರ ಜನಪರ ಕೆಲಸ ಮಾಡಿದ್ದು, ಅವರೊಂದಿಗೆ ಸುಮಾರು 35 ವರ್ಷಗಳ ಬಾಂಧವ್ಯ ಇದೆ. ವಿಶೇಷವಾಗಿ ದೀನದಲಿತರ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ಅವರು ಎಸ್‌ಸಿ ಸಮುದಾಯಕ್ಕೆ ಸೇರಿದ್ದು, ಮೌಲಿಕ ರಾಜಕಾರಣಕ್ಕೆ ಇಂದು ಬೆಲೆ ದೊರೆತಿದೆ. ರಮೇಶ್ ಮುನಿಯಪ್ಪನವರು ಆಡಳಿತದಲ್ಲಿ ಅಪಾರವಾದ ಅನುಭವ ಹೊಂದಿದವರು. ದಿಲ್ಲಿಯಲ್ಲಿದ್ದ ಇವರಿಗೆ ರಾಷ್ಟ್ರೀಯ ರಾಜಕಾರಣದ ಬಗ್ಗೆ ಅನುಭವವಿದೆ. ಈ ಎಲ್ಲ ನಾಯಕರನ್ನು ಭಾರತೀಯ ಪಕ್ಷಕ್ಕೆ ತುಂಬು ಹೃದಯದಿಂದ ಸ್ವಾಗತಿಸುತ್ತಿರುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

50 ಕೋಟಿ ಬಿಡುಗಡೆ: ಸಂಪುಟ ಒಪ್ಪಿಗೆ

ಹಾಸನ ಹಾಗೂ ಮಂಡ್ಯ ಜಿಲ್ಲೆಯ ಕ್ಯಾನ್ಸರ್ ರೋಗಿಗಳಿಗೆ ಉಚಿತವಾಗಿ ಉತ್ತಮ ಸೇವೆ ಒದಗಿಸುವ ನಿಟ್ಟಿನಲ್ಲಿ ಕಿದ್ವಾಯಿ ಕ್ಯಾನ್ಸರ್ ಕೇಂದ್ರ ಸ್ಥಾಪಿಸಲು ಅಗತ್ಯ ಸ್ಥಳದೊಂದಿಗೆ 50 ಕೋಟಿ ಅನುದಾನ ನೀಡುವುದು ಅವಶ್ಯವಾಗಿದೆ ಎಂದು ಮನವಿಯ ಮಾಡಿಕೊಟ್ಟಿದ್ದರು. ಇದರನ್ವಯ ಇಂದು ನಡೆದ ಸಂಪುಟ ಸಭೆಯಲ್ಲಿ ಮೈಸೂರಲ್ಲಿ ಕಿದ್ವಾಯಿ ಕ್ಯಾನ್ಸರ್ ಕೇಂದ್ರ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ.

ಜಿಪಿಎಸ್ ಕಡ್ಡಾಯ: ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಅದರಲ್ಲೂ ಮಹಿಳೆಯರು ಮತ್ತು ಮಕ್ಕಳನ್ನು ಗಮನದಲ್ಲಿಟ್ಟುಕೊಂಡು ಟ್ಯಾಕ್ಸಿ ಮತ್ತು ಇತರ ಸಾರಿಗೆ ವಾಹನಗಳಿಗೆ ಜಿಪಿಎಸ್ ಕಡ್ಡಾಯಗೊಳಿಸುವ ಸಂಬಂಧ ಸಂಪುಟ ನಿರ್ಧಾರ ಕೈಗೊಂಡಿದೆ. 20.36 ಕೋಟಿ ರೂ. ವೆಚ್ಚದಲ್ಲಿ ಸಾರಿಗೆ ವಾಹನಗಳಿಗೆ ಎಮರ್ಜೆನ್ಸಿ ಪ್ಯಾನಿಕ್ ಬಟನ್ ಅಳವಡಿಸಲು ಸಂಪುಟದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ರಾಮನಗರ ಜಿಲ್ಲೆ ಚೆನ್ನಪಟ್ಟಣ ತಾಲೂಕಿನ ತಗಚಗೆರೆ ಗ್ರಾಮದಲ್ಲಿ ಕರ್ನಾಟಕ ಗೃಹ ಮಂಡಳಿ ಭೂ ಸ್ವಾಧೀನಪಡಿಸಿಕೊಂಡಿದ್ದ ಜಮೀನಿನಲ್ಲಿ ರೈತರಿಗೆ ನಿವೇಶನ ಹಂಚಿಕೆ ಮಾಡಲು ಸಂಪುಟ ಒಪ್ಪಿಗೆ ನೀಡಿದೆ. ರಾಜ್ಯದಲ್ಲಿ ಹೊಸದಾಗಿ ಎರಡು ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕೆ ಸಂಪುಟ ಅನುಮೋದನೆ ನೀಡಿದ್ದು, ಬಳ್ಳಾರಿಯಲ್ಲಿ 19.26 ಎಕರೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ಕಟಿಪಳ್ಳದಲ್ಲಿ 23.25 ಎಕರೆ ಜಮೀನು ನೀಡಲು ಸಂಪುಟ ಅನುಮೋದಿಸಿದೆ. 262 ಹೊಸ 108 ಅಂಬುಲೆನ್ಸ್ ಖರೀದಿಗೆ 98.9 ಕೋಟಿ ರೂ. ನೀಡಲು ಸಂಪುಟ ಅಸ್ತು ಎಂದಿದೆ.



ಕ್ಯಾನ್ಸರ್ ರೋಗಿಗಳ ಚಿಕಿತ್ಸೆಗಾಗಿ ಮೈಸೂರಿನ ಕಿದ್ವಾಯಿ ಸ್ವಾಯತ್ತ ಗ್ರಂಥಿ ಸಂಸ್ಥೆಯ ಘಟಕ ಸ್ಥಾಪನೆ ಸಂಬಂಧ ತ್ವರಿತ ಕ್ರಮ ವಹಿಸುವಂತೆ ಆರೋಗ್ಯ ಸಚಿವರಾದ ಡಾ.ಕೆ.ಸುಧಾಕರ್ ಅವರಿಗೆ ಮನವಿ ಮಾಡಲಾಗಿತ್ತು. ಸದ್ಯ ಇಂದಿನ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಿದ್ದು, ಕಟ್ಟಡ ನಿರ್ಮಾಣಕ್ಕೆ 50 ಕೋಟಿ ಅನುದಾನ ಮಂಜೂರು ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ವೈದ್ಯಕೀಯ ಸಚಿವ ಡಾ.ಸುಧಾಕರ್ ಹಾಗೂ ಈ ಕಾರ್ಯಕ್ಕೆ ಸಹಕರಿಸಿದ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕರಾದ ನಾಗೇಂದ್ರ ಅವರಿಗೆ ಧನ್ಯವಾದಗಳು. **–ಸಂಸದ ಪ್ರತಾಪ್ ಸಿಂಹ**



ಮೈಸೂರಿನಲ್ಲಿ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ನಿರ್ಮಾಣಕ್ಕೆ ಸಚಿವ ಸಂಪುಟ ಅನುಮೋದನೆ ನೀಡಿದ್ದು, ಇದಕ್ಕಾಗಿ 50 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ. ನಮ್ಮ ಮನವಿಯನ್ನು ಪುರಸ್ಕರಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ರಾಜ್ಯ ಸರ್ಕಾರಕ್ಕೆ ಮೈಸೂರಿನ ಜನತೆ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. **–ಶಾಸಕ ಎಲ್.ನಾಗೇಂದ್ರ**

ಗುಜರಾತ್ ವಿಧಾನಸಭೆ ಚುನಾವಣೆ

ಪರಿಶೀಲನೆಗೆ ನ.15 ಕೊನೇ ದಿನ. ನಾಮಪತ್ರ ಹಿಂಪಡೆಯಲು ನ.17ರವರೆಗೆ ಕಾಲಾವಕಾಶ ನೀಡಲಾಗಿದೆ. ಡಿ.1ಕ್ಕೆ ಮತದಾನ ನಡೆಯಲಿದ್ದು, 8ಕ್ಕೆ ಫಲಿತಾಂಶ ಹೊರಬೀಳಲಿದೆ.

ಎರಡನೇ ಹಂತ: ನ.10ರಂದು ಅಧಿಸೂಚನೆ ಹೊರಬೀಳಲಿದೆ. ನಾಮಪತ್ರ ಸಲ್ಲಿಸಲು ನ.17 ಮತ್ತು ನಾಮಪತ್ರ ಪರಿಶೀಲನೆಗೆ ನ.18 ಕೊನೆಯ ದಿನವಾಗಿದೆ. ನಾಮಪತ್ರ ಹಿಂಪಡೆಯಲು ನ.21ರವರೆಗೆ ಕಾಲಾವಕಾಶ ನೀಡಲಾಗಿದೆ. ಡಿ.5ಕ್ಕೆ ಮತದಾನ ನಡೆಯಲಿದ್ದು, 8ಕ್ಕೆ ಫಲಿತಾಂಶ ಹೊರಬೀಳಲಿದೆ. ಡಿ.10ಕ್ಕೆ ಸಂಪೂರ್ಣ ಚುನಾವಣೆ ಪ್ರಕ್ರಿಯೆ ಮುಗಿಯಲಿದೆ ಎಂದರು. ಕಳೆದ ಅ. 14ರಂದು ಚುನಾವಣಾ ಆಯೋಗ ಹಿಮಾಚಲ ಪ್ರದೇಶದ ವಿಧಾನಸಭಾ ಚುನಾವಣಾ ದಿನಾಂಕವನ್ನು ಘೋಷಿಸಿದೆ. ಹಿಮಾಚಲ ಪ್ರದೇಶದ 68 ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ನ.12ರಂದು ಮತದಾನ ನಡೆಯಲಿದೆ ಡಿ.8ರಂದು ಮತ ಎಣಿಕೆ ನಡೆಯಲಿದೆ. ಗುಜರಾತ್ ಅಸೆಂಬ್ಲಿಯ ಅವಧಿಯು 2023ರ ಫೆಬ್ರವರಿ 18ಕ್ಕೆ ಕೊನೆಗೊಳ್ಳುತ್ತದೆ. ಹಿಮಾಚಲ ಪ್ರದೇಶ ಸದನದ ಅವಧಿಯು 2023ರ ಜನವರಿ 8ಕ್ಕೆ ಮುಗಿಯಲಿದೆ. ಹಾಗಾಗಿ ಈ ಎರಡೂ ರಾಜ್ಯಗಳಿಗೆ ಒಂದೇ ಸಮಯದಲ್ಲಿ ಚುನಾವಣಾ ದಿನಾಂಕ ಘೋಷಣೆಯಾಗಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಕೇಂದ್ರ ಚುನಾವಣಾ ಆಯೋಗವು ಅ.14ರಂದು ಹಿಮಾಚಲಪ್ರದೇಶಕ್ಕೆ ಮಾತ್ರ ಚುನಾವಣೆ ದಿನಾಂಕ ಘೋಷಿಸಿತು.

ಕೇರಳ ವ್ಯಕ್ತಿ ವಿರುದ್ಧ ಕೇಸ್

ತಾನು ದೊಡ್ಡ ಉದ್ಯಮಿಯೆಂದು ಬಿಂಬಿಸಿಕೊಂಡಿದ್ದ ಈತ ಸಾಫ್ಟ್‌ವೇರ್ ಇಂಜಿನಿಯರ್ ಅನ್ನು 2022ರ ಜನವರಿ 11ರಂದು ಬೆಂಗಳೂರಿನ ಕೆಂಪೇಗೌಡ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಥಮ ಬಾರಿಗೆ ಭೇಟಿಯಾಗಿದ್ದಾನೆ. ಆ ವೇಳೆ ತಾನು ವ್ಯವಹಾರಿಕ ವಿಚಾರವಾಗಿ ಕತ್ತಾರ್‌ಗೆ ಹೋಗಿ ಹಿಂದಿರುಗಿರುವುದಾಗಿ ಅವರನ್ನು ನಂಬಿಸಿದ್ದಾನೆ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ. ಮದುವೆಯಾಗುವುದಾಗಿ ನಂಬಿಸಿ ದೈಹಿಕ ಸಂಪರ್ಕವನ್ನು ಹೊಂದಿದ ಆತ 2022ರ ಮಾರ್ಚ್ 3ರಂದು ಬೆಂಗಳೂರು ಸಮೀಪದ ಬೇಗೂರಿನ ಪಂಚಲಿಂಗ ನಾಗೇಶ್ವರ ದೇವಾಲಯದಲ್ಲಿ ಮದುವೆಯಾಗಿದ್ದಾನೆ. ನಂತರ ತನ್ನ ವ್ಯವಹಾರಕ್ಕೆ ಅವಶ್ಯಕತೆ ಇದೆ ಎಂದು ಸಾಫ್ಟ್‌ವೇರ್ ಇಂಜಿನಿಯರ್‌ನಿಂದ 55 ಲಕ್ಷ ರೂ.ಗಳನ್ನು ಪಡೆದಿದ್ದಾನೆ ಎಂದು ದೂರಿನಲ್ಲಿ ಹೇಳಲಾಗಿದೆ. ಸಾಫ್ಟ್‌ವೇರ್ ಇಂಜಿನಿಯರ್ ಅನ್ನು ವಿವಾಹವಾಗಿ ಆಗಿಂದಾಗ್ಗೆ ಅವರೊಂದಿಗೆ ದೈಹಿಕ ಸಂಪರ್ಕವನ್ನು ಹೊಂದಿ, ಹಣವನ್ನೂ ಈತ ಪಡೆಯುತ್ತಿದ್ದಾಗ ಕಳೆದ ಮೇ ತಿಂಗಳಿನಲ್ಲಿ ಈತ ಇದೇ ರೀತಿ ಬೇರೊಬ್ಬ ಶ್ರೀಮಂತ ಮಹಿಳೆಯನ್ನು ವಿವಾಹವಾಗಿ ಆಕೆಯಿಂದಲೂ ಹಣ ಹಾಗೂ ಚಿನ್ನಾಭರಣ ಪಡೆದಿರುವುದು ಸಾಫ್ಟ್‌ವೇರ್ ಇಂಜಿನಿಯರ್ ಗಮನಕ್ಕೆ ಬಂದಿದೆ. ಈತನ ಬಗ್ಗೆ ಅವರು ಮತ್ತಷ್ಟು ವಿಚಾರಿಸಿದಾಗ ಸುನೀಶ್‌ಪಿಳ್ಳೈ 2022ರ ಏಪ್ರಿಲ್ 27ರಂದು ಗುರುವಾಯೂರು ದೇವಾಲಯದಲ್ಲಿ ತನ್ನ ತಂದೆ-ತಾಯಿ ಸಮ್ಮುಖದಲ್ಲೇ ಬೇರೊಂದು ಮಹಿಳೆಯನ್ನು ವಿವಾಹವಾಗಿರುವುದು ಕೂಡ ಕಂಡುಬಂದಿದೆ. ಅಲ್ಲದೆ, ಈತನ ವಿರುದ್ಧ ಕೇರಳದ ಇರಿಂಜಲಕುಡ ಪೊಲೀಸ್ ಠಾಣೆಯಲ್ಲಿ ಅಪಹರಣ ಪ್ರಕರಣ ಮತ್ತು ತೆಲಂಗಾಣದ ರಾಯದುರ್ಗ ಪೊಲೀಸ್ ಠಾಣೆಯಲ್ಲಿ ಶ್ರೀಮಂತ ಮಹಿಳೆಯನ್ನು ವಿವಾಹವಾಗಿ ಹಣ ಪಡೆದು ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿರುವುದೂ ಕೂಡ ಸಾಫ್ಟ್‌ವೇರ್ ಇಂಜಿನಿಯರ್ ಗಮನಕ್ಕೆ ಬಂದಿದೆ. ಇದು ಮಾತ್ರವಲ್ಲದೆ, ಡೈವರ್ಸಿ ಮ್ಯಾಟ್ರಿಮೋನಿಯಲ್ಲಿ ಶ್ರೀಮಂತ, ವಿಚ್ಛೇದಿತ ಮಹಿಳೆಯರನ್ನು ವಿವಾಹವಾಗಿ ಅವರನ್ನು ದೈಹಿಕವಾಗಿ ಬಳಸಿಕೊಳ್ಳುವುದು ಮಾತ್ರವಲ್ಲದೆ, ಹಣ ಪಡೆದು ವಂಚಿಸಿರುವ ಹಲವಾರು ಪ್ರಕರಣಗಳು ಬೆಳಕಿಗೆ ಬಂದಿವೆ.

ಈ ಸಂಬಂಧ ಸಾಫ್ಟ್‌ವೇರ್ ಇಂಜಿನಿಯರ್ ಯಲಹಂಕ ಪೊಲೀಸ್ ಠಾಣೆಯಲ್ಲಿ ಜು.4ರಂದು ದೂರು ನೀಡಿದ್ದರೆ, ಇತ್ತ ಮೈಸೂರಿನಲ್ಲಿರುವ ಸುನೀಶ್‌ಪಿಳ್ಳೈ ಪತ್ನಿ ಪ್ರೀತಿಸಿಂಗ್ ಸೆ.29ರಂದು ಈತನ ವಿರುದ್ಧ ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣದಲ್ಲಿ ಈತನ ತಂದೆ ಸೋಮನ್‌ಪಿಳ್ಳೈ ಮತ್ತು ತಾಯಿ ಉಮಾ ಅವರನ್ನು ಕೂಡ ಆರೋಪಿಗಳಾಗಿಸಿದ್ದು, ಬೆಂಗಳೂರಿನ ಮೇಘನಾ ಎಂಬಾಕೆ ತಾನು ಸುನೀಶ್‌ಪಿಳ್ಳೈನ ಮದುವೆಯಾಗಿರುವುದಾಗಿಯೂ, ಪೊಲೀಸರಿಗೆ ದೂರು ನೀಡಿದರೆ ಮೈಸೂರಿಗೆ ಬಂದು ಕೊಲೆ ಮಾಡುವುದಾಗಿಯೂ ತಮ್ಮ ದೂರಿನಲ್ಲಿ ಪ್ರೀತಿಸಿಂಗ್ ಆರೋಪಿಸಿದ್ದಾರೆ. ಅಲ್ಲದೆ, ಪತಿ ಸುನೀಶ್‌ಪಿಳ್ಳೈ ಬೇರೆ ಬೇರೆ ಹುಡುಗಿಯನ್ನು ಮದುವೆಯಾಗಿ ಹಣ ಪಡೆದು ಮೋಸ ಮಾಡಿದ್ದಾನೆ ಎಂಬುದನ್ನು ಕೂಡ ಉಲ್ಲೇಖಿಸಿದ್ದಾರೆ. ಒಟ್ಟಾರೆ ಉದ್ಯಮಿಯ ಸೋಗಿನಲ್ಲಿ ವಿಚ್ಛೇದಿತ ಶ್ರೀಮಂತ ಮಹಿಳೆಯರಿಗೆ ಗಾಳ ಹಾಕಿ, ಅವರಿಂದ ಲಕ್ಷಾಂತರ ರೂ. ಹಣ ಪಡೆದು ವಂಚಿಸುವುದನ್ನೇ ಹವ್ಯಾಸ ಮಾಡಿಕೊಂಡಿರುವ ಸುನೀಶ್‌ಪಿಳ್ಳೈ ಬಂಧನಕ್ಕಾಗಿ ಕರ್ನಾಟಕ, ತೆಲಂಗಾಣ ಮತ್ತು ಕೇರಳ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ. ಬೆಂಗಳೂರಿನ ಕೆಲ ಠಾಣೆಗಳಲ್ಲಿ ಈತನ ವಿರುದ್ಧ ಪ್ರಕರಣಗಳು ದಾಖಲಾಗಿದ್ದರೆ, ಹಲವಾರು ಮಹಿಳೆಯರು ಅಧಿಕೃತವಾಗಿ ದೂರು ನೀಡಲು ಹಿಂಜರಿದಿದ್ದು, ತಮ್ಮಿಂದ ಆತ ಪಡೆದಿರುವ ಹಣವನ್ನು ಕೊಡಿಸುವಂತೆ ಪೊಲೀಸರಿಗೆ ಮನವಿ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ.

ಎಐಸಿಸಿ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನ.6ರಂದು ಬೆಂಗಳೂರಲ್ಲಿ ಅಭಿನಂದನೆ

ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ಮೈಸೂರು ಕಾಂಗ್ರೆಸ್ಸಿಗರ ನಿರ್ಧಾರ; ಖರ್ಗೆ ಬಗ್ಗೆ ಗುಣಗಾನ

ಮೈಸೂರು, ನ.3(ಎಂಟಿವೈ)– ಎಐಸಿಸಿ ನೂತನ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನ.6ರಂದು ಬೆಂಗಳೂರಲ್ಲಿ ನಡೆಯಲಿರುವ ಅಭಿನಂದನಾ ಸಮಾರಂಭದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಗುರುವಾರ ಪೂರ್ವಭಾವಿ ಸಭೆ ಕಾಂಗ್ರೆಸ್ ಭವನದಲ್ಲಿ ನಡೆಯಿತು.



ಸಭೆಯಲ್ಲಿ ಮೈಸೂರು ನಗರ ಹಾಗೂ ಗ್ರಾಮಾಂತರ ಸಮಿತಿಯ ಮುಖಂಡರು ಹಾಗೂ ಕಾರ್ಯಕರ್ತರು, ನೂತನ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಭಿನಂದನೆ ಸಲ್ಲಿಸಿದರಲ್ಲದೆ, ಬೆಂಗಳೂರಿನಲ್ಲಿ ನೆಡೆಯಲಿರುವ ಅಭಿನಂದನಾ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಲಾಯಿತು.

ಸಭೆಯಲ್ಲಿ ಮಾಜಿ ಶಾಸಕ ವಾಸು ಮಾತನಾಡಿ, ಎಐಸಿಸಿಯ ಅಧ್ಯಕ್ಷರಾಗಿ, ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಆಯ್ಕೆಯಾಗಿದ್ದು ಸಂತೋಷ ತಂದಿದೆ. ಅವರೊಂದಿಗೆ ಮೊದಲಿನಿಂದಲೂ ನಾನು ಉತ್ತಮ ಒಡನಾಟ ಹೊಂದಿದ್ದೇನೆ ರಾಷ್ಟ್ರೀಯ ಪಕ್ಷವಾದ ಕಾಂಗ್ರೆಸ್ ಎಂದರೆ ರೋಮಾಂಚನವಾಗುತ್ತದೆ. ಸಂಸದ, ಶಾಸಕ, ಸಚಿವರಾಗಿ ಸೇವೆ ಸಲ್ಲಿಸಿದ ಖರ್ಗೆ ಅವರನ್ನು ಅತ್ಯಂತ ಸಮೀಪದಿಂದಲೇ ನೋಡಿದ್ದೇನೆ. ಬಡತನ ಮತ್ತು ಹೋರಾಟದ ಹಿನ್ನೆಲೆಯಿಂದ ಬಂದು, ವಕೀಲರಾಗಿಯೂ ಸೇವೆ ಸಲ್ಲಿಸಿರುವ ಅವರಿಗೆ ಅಗಾಧವಾದ ಅನುಭವವಿದೆ. ಸೂಕ್ಷ್ಮಮತಿಯಾದ ಖರ್ಗೆಯವರಲ್ಲಿ ದ್ವೇಷದ ಭಾವನೆ ಇಲ್ಲ. ಅಪಾರ ನೆನಪಿನ ಶಕ್ತಿ ಮತ್ತು ಸಮಯ ಪ್ರಜ್ಞೆ ಖರ್ಗೆ ಅವರಲ್ಲಿದೆ. ಇದನ್ನು ಎಲ್ಲರೂ ಅವರಿಂದ ಕಲಿಯಬೇಕು ಎಂದು ಹೇಳಿದರು.

ಜಿ.ಪಂ. ಮಾಜಿ ಅಧ್ಯಕ್ಷ ಕೆ.ಮರೀಗೌಡ ಮಾತನಾಡಿ, ಸಂಘಟನಾ ಚತುರರೂ ಹಾಗೂ ಅಪಾರ ಅನುಭವಿಯೂ ಆಗಿರುವ ಹಿರಿಯ ರಾಜಕಾರಣಿ ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿರುವುದು ಹೆಮ್ಮೆಯ ಸಂಗತಿ. ಕಾಂಗ್ರೆಸ್‌ನ ಅತ್ಯುನ್ನತ ಹುದ್ದೆ ಅಲಂಕರಿಸಿದ ಎರಡನೇ ಕನ್ನಡಿಗರಾಗಿದ್ದಾರೆ. ಬೆಂಗಳೂರಲ್ಲಿ ನಡೆಯುತ್ತಿರುವ ಅಭಿನಂದನಾ ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದಲೂ ನೂರಾರು ಮಂದಿ ಕಾರ್ಯಕರ್ತರು ಸ್ವಯಂ ಪ್ರೇರಣೆಯಿಂದ ತೆರಳಲಿದ್ದಾರೆ. ಖರ್ಗೆಯವರ ಅಭಿನಂದನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ನಮ್ಮ ಹೆಮ್ಮೆಯಾಗಿದೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿ, ಹುಟ್ಟು ಕಾಂಗ್ರೆಸ್ಸಿಗರಾಗಿರುವ ಖರ್ಗೆ ಅವರು ಪಕ್ಷಕ್ಕೆ ನಿಷ್ಠೆ ತೋರಿದ್ದಾರೆ. ನಮಗೆ ಮಾರ್ಗದರ್ಶಕರೂ ಆಗಿದ್ದಾರೆ. ಸಂವಿಧಾನದ 371 ಎ ವಿಧಿಯನ್ನು ಜಾರಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿ, ಉತ್ತರ ಕರ್ನಾಟಕದ ಜನರ ಪಾಲಿಗೆ ಮೆಚ್ಚಿನ ನಾಯಕರಾಗಿದ್ದಾರೆ ಎಂದರು.

ಸಭೆಯಲ್ಲಿ ಪಕ್ಷದ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ನಗರಾಧ್ಯಕ್ಷ ಆರ್. ಮೂರ್ತಿ, ಮಾಜಿ ಮೇಯರ್‌ಗಳಾದ ಮೋದಾಮಣಿ, ಟಿ.ಬಿ.ಚಿಕ್ಕಣ್ಣ, ನಾರಾಯಣ್, ಬಿ.ಕೆ.ಪ್ರಕಾಶ್, ಪುಷ್ಪಲತಾ ಜಗನ್ನಾಥ್, ನಗರಪಾಲಿಕೆ ಮಾಜಿ ಸದಸ್ಯರಾದ ನಾಗಭೂಷಣ್, ಪ್ರಶಾಂತ್‌ಗೌಡ, ಪ್ರದೀಪ್ ಕುಮಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಚಂದ್ರಮೌಳಿ, ಮುಖಂಡರಾದ ಕೆ.ಹರೀಶ್‌ಗೌಡ, ಶಿವನಾಗಪ್ಪ, ಲೋಕೇಶ್‌ರಾವ್, ಜೇಸುದಾಸ್, ಭಾಸ್ಕರ್, ಶ್ರೀನಾಥ್‌ಬಾಬು, ಕಾಂಗ್ರೆಸ್ ಪದಾಧಿಕಾರಿಗಳಾದ ಹೆಡತಲೆ ಮಂಜುನಾಥ್, ಎನ್.ಶಿವಪ್ರಸಾದ್, ಹುಣಸೂರು ಬಸವಣ್ಣ, ಈಶ್ವರ್ ಚಕ್ಕಡಿ, ಸುನಂದ ಕುಮಾರ್, ಗಿರೀಶ್, ಅಶೋಕ್, ಸತೀಶ್ ಕುಮಾರ್, ಗುರುಸ್ವಾಮಿ, ಮಂಜು, ಲಕ್ಷ್ಮಣ್, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ತಲಕಾಡು ಮಂಜುನಾಥ್, ಅರುಣ್ ಕುಮಾರ್ ಇನ್ನಿತರರು ಪಾಲ್ಗೊಂಡಿದ್ದರು.

> ಖರ್ಗೆಯವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿರುವುದು ಎಲ್ಲರಿಗೂ ತಂತಸ ತಂದಿದೆ. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿ, ಅಧ್ಯಕ್ಷ ಸ್ಥಾನಕ್ಕೆ ಏರಿದ ಮಹಾ ಅನುಭವಿ. ಜೀವನದ ಹಲವಾರು ಏಳು-ಬೀಳುಗಳನ್ನು ಗೆದ್ದು ಇಂದು ಗದ್ದುಗೆ ಏರಿದ್ದಾರೆ. ಆದ ಕಾರಣ ಇಂತಹ ಶ್ರಮ ಜೀವಿಯ ಅಭಿನಂದನಾ ಸಮಾರಂಭಕ್ಕೆ ಎಲ್ಲರೂ ಸ್ವಯಂ ಪ್ರೇರಣೆಯಿಂದ ಬರಬೇಕು. ಅದು ನಮ್ಮ ನೈತಿಕ ಕರ್ತವ್ಯ. ಮುಂದಿನ ಚುನಾವಣೆಯಲ್ಲಿ ನಮ್ಮ ಕೆಲಸವನ್ನು ಅತ್ಯಂತ ಬದ್ಧತೆಯಿಂದ ಮಾಡಬೇಕು.
> **–ವಾಸು, ಮಾಜಿ ಶಾಸಕ**



ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಸಚಿವ ಹಾಗೂ ಮಾಜಿ ಶಾಸಕರೂ ಆದ ಅರಕಲಗೂಡು ಎ.ಮಂಜು ಅವರನ್ನು ಅರಕಲಗೂಡಿನಲ್ಲಿ 'ಲಾ ಗೈಡ್' ಕನ್ನಡ ಕಾನೂನು ಮಾಸಪತ್ರಿಕೆ ಬಳಗದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿ, ಶುಭಾಶಯ ಕೋರಲಾಯಿತು. ಇದೇ ವೇಳೆ ಎ.ಮಂಜು ಅವರ ಆಕರ್ಷಕ ಫೋಟೋವನ್ನು ನೀಡಲಾಯಿತು. ಲಾ ಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಸಂಪಾದಕ, ಪತ್ರಿಕೆ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಹೆಗ್ಡೆ ಗ್ರೂಪ್ಸ್‌ನ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ಹಿರಿಯ ಪತ್ರಕರ್ತ ಎಂ.ಬಿ. ಮರಂಕಲ್, ಉದ್ಯಮಿ ನಾಯಕಂಡ ತಿಮ್ಮಯ್ಯ, ಮೈಸೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ನಿವೃತ್ತ ಪೊಲೀಸ್ ಅಧಿಕಾರಿ ಆರ್.ಗಿರಿಜೇಶ್, ಡಿವೈಎಸ್‌ಪಿ ಧರ್ಮೇಂದ್ರ, ವಕೀಲರಾದ ರವಿಕಾಂತ್, ನಾಗರಾಜು ಇನ್ನಿತರರು ಉಪಸ್ಥಿತರಿದ್ದರು.

ಪ್ರಾಸ್ಟೇಟ್ ಗ್ರಂಥಿಯ ಕಾಯಿಲೆಗಳಿಗೆ ಹೋಲ್ಮಿಯಂ ಲೇಸರ್ ಆಧಾರಿತ ಅತ್ಯಾಧುನಿಕ ಶಸ್ತ್ರಚಿಕಿತ್ಸೆ

ಮೈಸೂರು,ನ.3–ಇತ್ತೀಚಿನ ದಿನಗಳಲ್ಲಿ ಪುರುಷರಲ್ಲಿ ಹೆಚ್ಚಾಗಿ ಕಂಡುಬರುತ್ತಿರುವ ಪ್ರಾಸ್ಟೇಟ್ (ಪುರುಷನ ಜನನೇಂದ್ರೀಯಕ್ಕೆ ಸಂಬಂಧಿಸಿದ ಒಂದು ಗ್ರಂಥಿ) ಕಾಯಿಲೆಗಳನ್ನು ಗುಣಪಡಿಸಲು ನಗರದ ಪ್ರತಿಷ್ಠಿತ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 100 ವ್ಯಾಟ್ ಹೋಲ್ಮಿಯಂ ಲೇಸರ್ ಆಧಾರಿತ ಅತೀ ಕಡಿಮೆ ಆಕ್ರಮಣಕಾರಿ ಹಾಗೂ ಪರಿಣಾಮಕಾರಿ ಶಸ್ತ್ರಚಿಕಿತ್ಸೆಯ ಸೇವೆಯನ್ನು ಪ್ರಾರಂಭಿಸಲಾಗಿದೆ. ನಿಖರ, ಕಡಿಮೆ ನೋವಿನ ಈ ಶಸ್ತ್ರ ಚಿಕಿತ್ಸೆಯಿಂದ ರೋಗಿಯು ಶೀಘ್ರವಾಗಿ ಚೇತರಿಸಿಕೊಳ್ಳಲಿದ್ದಾರೆ.



ಪ್ರಾಸ್ಟೇಟ್ ಕಾಯಿಲೆಯ ಗುಣಲಕ್ಷಣಗಳು: ಮೂತ್ರ ವಿಸರ್ಜನೆಯಲ್ಲಿ ತೊಂದರೆ, ತುರ್ತು ಮೂತ್ರ ವಿಸರ್ಜನೆಯ ಅನುಭವ, ಮೂತ್ರ ವಿಸರ್ಜನೆ ಟ್ರಾಕ್ಟ್ ಸೋಂಕು, ಮೂತ್ರ ಕೋಶ ಕಲ್ಲುಗಳು. ಈ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳು ಕೂಡಲೇ ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ತಜ್ಞ ವೈದ್ಯರನ್ನು ಮೊ. 95380 52378 ಮೂಲಕ ಸಂಪರ್ಕಿಸಿ, ಈ ಸಮಸ್ಯೆಗಳಿಗೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ.

ಡಾ.ಪಂ.ಪುಟ್ಟರಾಜ ಗವಾಯಿಯವರ ವಚನಗಳ ಗಾಯನ ಸ್ಪರ್ಧೆ



ಮೈಸೂರು,ನ.3(ಪಿಎಂ)– ಮೈಸೂರಿನ ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ಮತ್ತು ಧಾರವಾಡದ ಚಿಲಿಪಿಲಿ ಸಂಗೀತ ಸಾಂಸ್ಕೃತಿಕ ಕಲಾ ಅಕಾಡೆಮಿ ಜಂಟಿ ಆಶ್ರಯದಲ್ಲಿ ಪದ್ಮಭೂಷಣ ಡಾ.ಪಂ.ಪುಟ್ಟರಾಜ ಗವಾಯಿಯವರ ಜನ್ಮದಿನದ ಪ್ರಯುಕ್ತ ಅವರು ರಚಿಸಿದ ವಚನಗಳ ಗಾಯನ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಸಂಗೀತ ಸಭಾದ ಅಧ್ಯಕ್ಷ ಭೀಮಾಶಂಕರ ಬಿದನೂರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲು ವಿಭಾಗ ಮಟ್ಟ, ಬಳಿಕ ರಾಜ್ಯಮಟ್ಟದಲ್ಲಿ ಗಾಯನ ಸ್ಪರ್ಧೆ ನಡೆಯಲಿದೆ. ನ.6ರಂದು ಬೆಳಗ್ಗೆ 10ರಿಂದ ಮೈಸೂರು ವಿಭಾಗ ಮಟ್ಟದ ಸ್ಪರ್ಧೆಯು ಮೈಸೂರಿನ ನಾದ ಬ್ರಹ್ಮ ಸಂಗೀತ ಸಭಾದಲ್ಲಿ ನಡೆಯಲಿದೆ ಎಂದರು. ನ.11ರಂದು ಬೆಳಗ್ಗೆ 10ರಿಂದ ಬೆಳಗಾವಿ ವಿಭಾಗ ಮಟ್ಟದ ಸ್ಪರ್ಧೆಯು ಧಾರವಾಡದ ಗುಬ್ಬಚ್ಚಿಗೂಡು ಪ್ರೌಢಶಾಲೆ ಆವರಣದಲ್ಲಿ ನಡೆಯಲಿದೆ. ನ.13ರಂದು ಬೆಳಗ್ಗೆ 10ರಿಂದ ಕಲ್ಬುರ್ಗಿ ವಿಭಾಗ ಮಟ್ಟದ ಸ್ಪರ್ಧೆಯು ರಾಯಚೂರಿನ ಬಸವ ಕೇಂದ್ರದಲ್ಲಿ ನಡೆಯಲಿದೆ. ನ.20ರಂದು ಬೆಳಗ್ಗೆ 10ರಿಂದ ಬೆಂಗಳೂರು ವಿಭಾಗ ಮಟ್ಟದ ಸ್ಪರ್ಧೆಯು ದಾವಣಗೆರೆಯ ಶ್ರೀವೀರಶ್ವರ ಪುಣ್ಯಾಶ್ರಮದಲ್ಲಿ ನಡೆಸಲಾಗುವುದು. ಗದುಗಿನ ಶ್ರೀ ವೀರಶ್ವರ ಪುಣ್ಯಾಶ್ರಮದಲ್ಲಿ ರಾಜ್ಯಮಟ್ಟದ ಸ್ಪರ್ಧೆ ನಡೆಸಲು ಉದ್ದೇಶಿಸಿದ್ದು, ಸದ್ಯ ದಿನಾಂಕ ನಿಗದಿ ಮಾಡಿಲ್ಲ ಎಂದು ತಿಳಿಸಿದರು.

15ರಿಂದ 25 ವರ್ಷದೊಳಗಿನ ವಯೋಮಿತಿಯವರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ದೂರವಾಣಿ (99450 47633) ಮೂಲಕ ಆಯಾಯ ವಿಭಾಗದ ಮಟ್ಟದ ಸ್ಪರ್ಧೆ ನಡೆಯುವ ಹಿಂದಿನ ದಿನದ ಒಳಗಾಗಿ ನೋಂದಣಿ ಮಾಡಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೂ ಇದೇ ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಬಹುದು. 200 ರೂ. ನೋಂದಣಿ ಶುಲ್ಕ, ಆಧಾರ ಕಾರ್ಡ್ ಪ್ರತಿ, ವಯೋಮಿತಿ ದೃಢೀಕರಣ ಪತ್ರದ ಪ್ರತಿಯನ್ನು ಸ್ಪರ್ಧೆಯ ದಿನದಂದೇ ಸಲ್ಲಿಸಬೇಕು. ವಿಭಾಗ ಮಟ್ಟದಲ್ಲಿ ಆಯ್ಕೆಯಾಗುವವರು ರಾಜ್ಯ ಮಟ್ಟದಲ್ಲಿ ಸ್ಪರ್ಧಿಸಲು ಅರ್ಹತೆ ಪಡೆಯಲಿದ್ದಾರೆ ಎಂದರು.

ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿದವರಿಗೆ ವಚನಗಾನ ಶ್ರೀ ಪುರಸ್ಕಾರದೊಂದಿಗೆ 10 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ದ್ವಿತೀಯ ಸ್ಥಾನ ಗಳಿಸಿದವರಿಗೆ 7 ಸಾವಿರ ರೂ. ನಗದು ಹಾಗೂ ತೃತೀಯ ಸ್ಥಾನ ಗಳಿಸಿದವರಿಗೆ 5 ಸಾವಿರ ರೂ. ನಗದು ನೀಡಿ ಗೌರವಿಸಲಾಗುವುದು ಎಂದರು. ಸಂಗೀತ ಸಭಾದ ಪೋಷಕರಾದ ಜಗದೀಶ್ ಬಾಬು, ಗಿರೀಶ್ ಶಿಲ್ಪಿ, ಉಪಾಧ್ಯಕ್ಷ ಮೃತ್ಯುಂಜಯ ಹೀರೇಮಠ, ಗಾಯಕಿ ನೇತ್ರಾವತಿ ಗೋಷ್ಠಿಯಲ್ಲಿದ್ದರು.

ಇಂದು ತುಳಸಿ ಹಬ್ಬ: ಬೆಟ್ಟದ ನೆಲ್ಲಿಕಾಯಿ ಗೊನೆಗೆ ಡಿಮ್ಯಾಂಡ್

ಮೈಸೂರು, ನ.3(ಎಂಕೆ)– ಮೈಸೂರಿನಲ್ಲಿ ತುಳಸಿ ಹಬ್ಬದ ಸಂಭ್ರಮ ಗರಿಗೆದರಿದ್ದು, ಬೆಟ್ಟದ ನೆಲ್ಲಿಕಾಯಿ ಕಡ್ಡಿಗಳಿಗೆ(ಬೆಟ್ಟದ ನೆಲ್ಲಿಕಾಯಿ ಹಾಗೂ ಎಲೆಗಳನ್ನೊಳಗೊಂಡ ಸಣ್ಣ ಸಣ್ಣ ರೆಂಬೆ) ಡಿಮ್ಯಾಂಡ್ ಹೆಚ್ಚಾಗಿದೆ...! ಹಿಂದೂ ಧರ್ಮದಲ್ಲಿ ತುಳಸಿ ವಿವಾಹ ಅಥವಾ ಹಬ್ಬಕ್ಕೆ ವಿಶೇಷ ಮಹತ್ವವಿದ್ದು, ಕಾರ್ತಿಕ ಮಾಸದ ಏಕಾದಶಿಯ ದಿನದಂದು ಅಂದರೆ ಈ ವರ್ಷ ನಾಳೆ(ನ.4) ತುಳಸಿ ಹಬ್ಬ ಆಚರಿಸಲಾಗುತ್ತಿದೆ. ಮನೆ ಆವರಣದಲ್ಲಿರುವ ತುಳಸಿ ಗಿಡ ಅಥವಾ ತುಳಸಿ ಕಟ್ಟೆಗಳಿಗೆ ವಿಶೇಷ ಅಲಂಕಾರ ಹಾಗೂ ತುಳಸಿ ಗಿಡದ ಜೊತೆಗೆ ಬೆಟ್ಟದ ನೆಲ್ಲಿಕಾಯಿ ಗಿಡವನ್ನಿಟ್ಟು ಪೂಜೆ ಮಾಡಲಾಗುತ್ತದೆ.


ತುಳಸಿ ಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನ ದೇವರಾಜ ಮಾರುಕಟ್ಟೆ ಹಾಗೂ ಸಯ್ಯಾಜಿರಾವ್ ರಸ್ತೆ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಹೂ-ಹಣ್ಣುಗಳ ಜೊತೆಗೆ ಬೆಟ್ಟದ ನೆಲ್ಲಿಕಾಯಿ ಕಡ್ಡಿಗಳ ರಾಶಿ ರಾಶಿ ವ್ಯಾಪಾರ ಜೋರಾಗಿದ್ದು, ಒಂದು ಕಡ್ಡಿಗೆ 30-50 ರೂ.ವರೆಗೆ ಮಾರಾಟ ಮಾಡಲಾಗುತ್ತಿದೆ. ಮಹಿಳೆಯರು ಹೂ-ಹಣ್ಣು ಜೊತೆಗೆ ಬೆಟ್ಟದ ನೆಲ್ಲಿಕಾಯಿ ಕಡ್ಡಿಗಳನ್ನು ಕೊಂಡೊಯ್ಯುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಎರಡು ದಿನ ಹಬ್ಬ: ತುಳಸಿ ಹಬ್ಬ ನಾಳೆ(ನ.4) ಮತ್ತು ನಾಡಿದ್ದು(ನ.5) ಆಚರಿಸಲಾಗುವುದು. ತುಳಸಿ ಗಿಡಕ್ಕೆ ವಿಶೇಷ ಅಲಂಕಾರ ಮಾಡಿ ಪೂಜಿಸಲಾಗುವುದು ಎಂದು ಕೆಲ ಮಹಿಳೆಯರು ತಿಳಿಸಿದರೆ, ಹಿರಿಯ ಮಹಿಳೆಯೊಬ್ಬರು ಬೆಟ್ಟದ ನೆಲ್ಲಿಕಾಯಿ ಕಡ್ಡಿಯನ್ನಿಟ್ಟು ಪೂಜೆ ಮಾಡುವುದು ಮೊದಲಿನಿಂದಲೂ ನಡೆದುಕೊಂಡು ಬಂದಿದೆ ಎಂದು ತಿಳಿಸಿದರು.

ಬೆಳಿಗ್ಗೆಯಿಂದಲೂ ವ್ಯಾಪಾರ: ಬೆಟ್ಟದ ನೆಲ್ಲಿಕಾಯಿ ಕಡ್ಡಿಗಳ ವ್ಯಾಪಾರವನ್ನು ಬೆಳಿಗ್ಗೆಯಿಂದಲೂ ಮಾಡುತ್ತಿದ್ದು, ವ್ಯಾಪಾರ ಚೆನ್ನಾಗಿದೆ. ಈಗಾಗಲೇ 20 ಪಿಂಡಿ(ಒಂದು ಕಟ್ಟು) ಖಾಲಿಯಾಗಿದೆ ಎಂದು ವ್ಯಾಪಾರಿ ಇಲವಾಲದ ಮಂಜುನಾಯ್ಕ ತಿಳಿಸಿದರು. ಬೆಟ್ಟದ ನೆಲ್ಲಿಕಾಯಿ ಜೊತೆಗೆ ಬಾಳೆ ಕಂದು ಹಾಗು ಮಾವಿನ ಸೊಪ್ಪನ್ನು ಮಾರಾಟ ಮಾಡುತ್ತಿದ್ದೇವೆ ಎಂದರು.

ಕಬ್ಬು ಬೆಳೆಗಾರರ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆ

ನಾಲ್ಕನೇ ದಿನವೂ ಮುಂದುವರಿಕೆ ; ತಟ್ಟೆ–ಲೋಟ ಬಡಿದು ವಿಭಿನ್ನ ಹೋರಾಟ



ಮೈಸೂರು,ನ.3(ಪಿಎಂ)– ಕಬ್ಬಿಗೆ ಎಫ್‌ಆರ್‌ಪಿ ದರ ಹೆಚ್ಚಿಸಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನಾ ಧರಣಿ ನಾಲ್ಕನೇ ದಿನವಾದ ಗುರುವಾರವೂ ಮುಂದುವರೆಯಿತು.

ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಡಳಿತ ರೈತರನ್ನು ಕಡೆಗಣಿಸಿದ್ದು, ನ್ಯಾಯಯುತವಾಗಿ ಕಬ್ಬಿಗೆ ಬೆಲೆ ನೀಡದೇ ಸರ್ಕಾರ ಭಿಕ್ಷುಕರ ರೀತಿ ವರ್ತಿಸುತ್ತಿದೆ ಎಂದು ಕಿಡಿಕಾರಿದರಲ್ಲದೆ, ತಟ್ಟೆ-ಲೋಟ ಬಡಿದು ಅಣಕಿಸುವ ಮೂಲಕ ವಿಭಿನ್ನ ರೀತಿ ಹೋರಾಟ ನಡೆಸಿದರು.

ಕೇಂದ್ರ ಸರ್ಕಾರ ನಿಗದಿ ಮಾಡಿರುವ ಎಫ್‌ಆರ್‌ಪಿ ದರ ಅವೈಜ್ಞಾನಿಕ. ಇದಕ್ಕೆ ಹೆಚ್ಚುವರಿಯಾಗಿ ಎಸ್‌ಎಪಿ ದರ ಸೇರಿಸಿ ಟನ್‌ಗೆ 3,500 ರೂ. ಬೆಲೆ ನಿಗದಿ ಮಾಡಬೇಕು. ಈಗಾಗಲೇ ಕಾರ್ಖಾನೆಗಳು ಮುಂಗಡ ಹಣವೆಂದು ಟನ್‌ಗೆ ಕೇವಲ 2,500 ರೂ. ನೀಡಿರುವುದು ಸರಿಯಲ್ಲ. ಈಗ ನಿಗದಿಯಾದ ಎಫ್‌ಆರ್‌ಪಿ ದರದಂತೆ 3,050 ರೂ. ಮುಂಗಡ ಹಣ ನೀಡಬೇಕು. ನಮ್ಮ ಬೇಡಿಕೆಯಂತೆ ಎಸ್‌ಎಪಿ ದರ ನಿಗದಿಯ ನಂತರ ಅಂತಿಮ ಕಂತು ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ನಿಮ್ಮ ಬೇಡಿಕೆಗಳನ್ನು ಈಡೇರಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಜಿಲ್ಲಾಡಳಿತದಿಂದ ಪತ್ರ ಬರೆಯಲಾಗಿದೆ. ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮಾತನಾಡಿದ್ದು, ನ.8ರಂದು ಸಭೆ ನಡೆಸುವುದಾಗಿ ತಿಳಿಸಿದ್ದಾರೆ. ಒಂದು ವೇಳೆ ಕಾರಣಾಂತರದಿಂದ ಸಚಿವರು ಅಂದು ಮೈಸೂರಿಗೆ ಬರಲು ಸಾಧ್ಯವಾಗದೇ ಇದ್ದಲ್ಲಿ ನಾನೇ ಸಭೆ ನಡೆಸಿ, ನಿಮ್ಮ ಬೇಡಿಕೆಗಳನ್ನು ಸರ್ಕಾರ ಹಾಗೂ ಸಚಿವರ ಗಮನಕ್ಕೆ ತರುತ್ತೇನೆ. ಹಾಗಾಗಿ ಹೋರಾಟವನ್ನು ಇಲ್ಲಿಗೆ ಕೈಬಿಡಬೇಕೆಂದು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಪ್ರತಿಭಟನಾಕಾರರು, ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ನಮ್ಮೆಲ್ಲಾ ಬೇಡಿಕೆಗಳನ್ನು ಈಡೇರಿಸಿದರೆ ಮಾತ್ರವೇ ಹೋರಾಟ ಕೈಬಿಡುವುದಾಗಿ ತಿಳಿಸಿದರಲ್ಲದೆ, ಪ್ರತಿಭಟನೆ ಮುಂದುವರೆಸಿದ್ದಾರೆ.

ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜು, ಜಿಲ್ಲಾಧ್ಯಕ್ಷ ಪಿ.ಸೋಮಶೇಖರ್, ಜಿಲ್ಲಾ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜ್, ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ಮುಖಂಡರಾದ ಹಾಡ್ಯ ರವಿ, ಅಂಬಳೆ ಮಂಜುನಾಥ್, ಕೆರೆಹುಂಡಿ ಶಿವಣ್ಣ, ಚುಂಚರಾಯನಹುಂಡಿ ಮಂಜು, ಸಿದ್ದರಾಮ, ಮಲ್ಲಪ್ಪ, ಶಿವು, ಗಿರೀಶ್, ಕುಮಾರ್, ರಾಜಣ್ಣ, ರಾಜೇಶ್, ಮಾರ್ಬಳ್ಳಿ ನೀಲಕಂಠಪ್ಪ, ಹಿರೇನಂದಿ ಮಹದೇವಪ್ಪ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾಡಳಿತದ ವ್ಯಾಪ್ತಿಯ ಬೇಡಿಕೆ ಈಡೇರಿಸಲು ತ್ವರಿತ ಕ್ರಮ

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ

ಮೈಸೂರು,ನ.3(ಪಿಎಂ)– ಕಬ್ಬು ಬೆಳೆಗಾರರ ಹೋರಾಟಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತದ ವ್ಯಾಪ್ತಿಗೆ ಬರುವ ಬೇಡಿಕೆಗಳನ್ನು ಈಡೇರಿಸಲು ತ್ವರಿತ ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಪ್ರತಿಭಟನಾನಿರತ ಕಬ್ಬು ಬೆಳೆಗಾರರನ್ನು ಗುರುವಾರ ಭೇಟಿ ಮಾಡಿದ ಬಳಿಕ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಕಬ್ಬಿನ ಎಫ್‌ಆರ್‌ಪಿ ದರ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿದ್ದಾರೆ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದೇನೆ. ರೈತರ ಬೇಡಿಕೆಗಳಲ್ಲಿ ಹಲವು ಜಿಲ್ಲಾಡಳಿತ ವ್ಯಾಪ್ತಿ ಮೀರಿದ್ದಾಗಿವೆ. ಕೆಲ ಬೇಡಿಕೆಗಳ ಸಂಬಂಧ ಸಚಿವ ಸಂಪುಟ, ಮುಖ್ಯಮಂತ್ರಿಗಳ ಹಂತದಲ್ಲಿ ತೀರ್ಮಾನ ಆಗಬೇಕಾಗುತ್ತದೆ. ಜಿಲ್ಲಾಡಳಿತದ ವ್ಯಾಪ್ತಿಗೆ ಬರುವ ಬೇಡಿಕೆಗಳನ್ನು ಈಡೇರಿಸಲು ತ್ವರಿತ ಕ್ರಮ ವಹಿಸಲಾಗುವುದು ಎಂದರು.

ನ.8ರಂದು ಸಭೆ: ರೈತರ ಬೇಡಿಕೆಯಂತೆ ಸಭೆ ನಡೆಸಬೇಕೆಂಬ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದಿದ್ದೇನೆ. ಅವರು ನ.8ರಂದು ತಮ್ಮ ಅಧ್ಯಕ್ಷತೆಯಲ್ಲಿ ಸಭೆ ನಡೆಸುವುದಾಗಿ ತಿಳಿಸಿದ್ದಾರೆ. ಒಂದು ವೇಳೆ ನ.11ರಂದು ಪ್ರಧಾನಿಗಳ ಬೆಂಗಳೂರು ಭೇಟಿ ಹಿನ್ನೆಲೆಯಲ್ಲಿ ಅವರು ಸಭೆ ನಡೆಸಲು ಸಾಧ್ಯವಾಗದೇ ಇದ್ದರೆ, ನಾನೇ ಸಭೆ ನಡೆಸುವುದಾಗಿ ರೈತರಿಗೆ ತಿಳಿಸಿದ್ದೇನೆ ಎಂದು ತಿಳಿಸಿದರು. ಹಕ್ಕು ಪತ್ರಕ್ಕೆ ಆಗ್ರಹಿಸಿ ಏಕಲವ್ಯನಗರ ನಿವಾಸಿಗಳು ನಡೆಸುತ್ತಿರುವ ಅನಿರ್ದಿಷ್ಟಾವಧಿ ಅಹೋರಾತ್ರಿ ಪ್ರತಿಭಟನೆ ಸಂಬಂಧ ಪ್ರತಿಕ್ರಿಯಿಸಿ, ಅವರ ಬೇಡಿಕೆಯನ್ನು ಯಾವ ರೀತಿ ಈಡೇರಿಸಲು ಸಾಧ್ಯ ಎಂದು ಪರಿಶೀಲಿಸಿ, ಸೂಕ್ತ ಕ್ರಮ ವಹಿಸಲಾಗುವುದು ಎಂದರು.

ಮೈಸೂರು ಮಿತ್ರ

ನ.11, ಪ್ರಧಾನಿ ಮೋದಿಯಿಂದ ಕೆಂಪೇಗೌಡರ ಪ್ರತಿಮೆ ಅನಾವರಣ

ತಲಕಾಡಿನಲ್ಲಿ ಶ್ರೀಪುರುಷರ ಸಮಾಧಿಗೆ ಪೂಜೆ ಸಲ್ಲಿಸಿದ ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ್

ತಿ.ನರಸೀಪುರ, ನ.3– ತಮ್ಮ ದೂರದೃಷ್ಟಿ ಮೂಲಕ ಬೆಂಗಳೂರನ್ನು ನಿರ್ಮಿಸಿದ ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆಯನ್ನು ಬೆಂಗಳೂರಿನಲ್ಲಿ ನ.11ರಂದು ಪ್ರಧಾನಿ ಮೋದಿ ಅನಾವರಣಗೊಳಿಸಲಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ್ ತಿಳಿಸಿದರು.

ತಾಲೂಕಿನ ತಲಕಾಡಿನಲ್ಲಿ ಶ್ರೀಪುರುಷರ ಸಮಾಧಿಗೆ ಪೂಜೆ ಸಲ್ಲಿಸಿ, ಮೃತ್ತಿಕೆ ಸಂಗ್ರಹಿಸಿ ಮಾತನಾಡಿದ ಅವರು, ಈ ಪವಿತ್ರ ಕ್ಷೇತ್ರದಲ್ಲಿ ಶ್ರೀಪುರುಷರ ವೀರ ಸಮಾಧಿ ಇದೆ. ಶ್ರೀಪುರುಷರು ತಲಕಾಡಿನಲ್ಲಿ ಆಡಳಿತ ನಡೆಸಿದ್ದಾರೆ. ಅವರು ನಮ್ಮ ನಾಡಿನ ಹೆಮ್ಮೆ. ಅವರಿದ್ದ ಈ ಪುಣ್ಯ ಸ್ಥಳದಿಂದ ಮೃತ್ತಿಕೆ ಸಂಗ್ರಹಿಸಿ ನಾವು ಬೆಂಗಳೂರಿಗೆ ಕೊಂಡೊಯ್ಯುತ್ತಿದ್ದೇವೆ. ಅವರ ಆಶೀರ್ವಾದದಿಂದ ನಾಡನ್ನು ಕಟ್ಟುವ ಕಾರ್ಯ ಸದೃಢವಾಗಬೇಕು. ರಾಜ್ಯದ ಗ್ರಾಮಗಳು ಪುಣ್ಯ ಸ್ಥಳಗಳಿಂದ ಸಂಗ್ರಹವಾಗುವ ಮಣ್ಣನ್ನು ಬೆಂಗಳೂರಿನಲ್ಲಿ ಒಂದೆಡೆ ಹಾಕಿ ನಿರ್ಮಿಸಲಾಗುತ್ತಿದೆ. ಈ ಕಾರ್ಯಕ್ರಮಕ್ಕೆ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದರು.



ಮುಡುಕುತೊರೆ ಬಳಿಯ ವೀರಭೂಮಿ ಗಂಗರಾಜ ಶ್ರೀಪುರುಷನ ಸಮಾಧಿ ಅಭಿವೃದ್ಧಿ ಹಾಗೂ ಉದ್ಯಾನವನ ನಿರ್ಮಿಸಿ ಅಭಿವೃದ್ಧಿಗೊಳಿಸುವ ಭರವಸೆ ನೀಡಿದರು.

ಸಂಸದ ಪ್ರತಾಪ್ ಸಿಂಹ ಮಾತನಾಡಿ, ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡರ ಪ್ರತಿಮೆ ನಿರ್ಮಿಸಲು ಕಾರಣ ಸಚಿವ ಅಶ್ವಥ್ ನಾರಾಯಣ್. ಬೆಂಗಳೂರಿಗೆ ಯಾರೇ ಬಂದರೂ ಕೆಂಪೇಗೌಡರನ್ನು ಸ್ಮರಿಸಬೇಕೆಂಬ ಆಶಯದೊಂದಿಗೆ ಈ ಹಿಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಮನವೊಲಿಸಿ ಕೆಂಪೇಗೌಡರ ಪ್ರತಿಮೆ ಸ್ಥಾಪನೆಗೆ ಕಾರಣರಾದರು. ನ.11ರಂದು ಪ್ರಧಾನಿ ಮೋದಿ ಅವರು ಉದ್ಘಾಟಿಸಲಿದ್ದು, ಈ ಪ್ರತಿಮೆಯ ದ್ಯೋತಕವಾಗಿ ರಾಜ್ಯದ ಮೂಲೆ ಮೂಲೆಗಳಿಂದ ಮಣ್ಣನ್ನು ಸಂಗ್ರಹಿಸಿ ಬೆಂಗಳೂರಿನಲ್ಲಿ ಇಡಲಾಗುತ್ತಿದೆ. ಇಂತಹ ಪುಣ್ಯ ಕಾರ್ಯ ವನ್ನು ಜವಾಬ್ದಾರಿಯುತವಾಗಿ ನಡೆಸಿಕೊಡುತ್ತಿ ರುವ ಸಚಿವ ಅಶ್ವಥ್ ನಾರಾಯಣ್ ಅವರಿಗೆ ಜನತೆ ಹಾಗೂ ತಮ್ಮೆಲ್ಲರ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಸಚಿವರು ತಲಕಾಡಿನ ವೈದ್ಯನಾಥೇಶ್ವರ ದೇವಾಲಯಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಇದೇ ವೇಳೆ ಮಾಜಿ ಶಾಸಕರಾದ ಡಾ. ಎನ್.ಎಲ್.ಭಾರತಿ ಶಂಕರ್, ಸಿ.ರಮೇಶ್, ಜಿಲ್ಲಾ ಗ್ರಾಮಾಂತರ ಅಧ್ಯಕ್ಷೆ ಮಂಗಳಾ ಸೋಮಶೇಖರ್, ಕ್ಷೇತ್ರ ಅಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜು, ಎಂ.ದಾಸಯ್ಯ, ತಹಸೀಲ್ದಾರ್ ಸಿ.ಜೆ.ಗೀತಾ, ತಾಪಂ ಇಓ ಸಿ.ಕೃಷ್ಣ, ಅರ್ಚಕ ಆನಂದ್ ದೀಕ್ಷಿತ್, ಪಂಚಲಿಂಗ ಸಮೂಹ ದೇವಾಲಯಗಳ ಇಓ ಬಿ.ಕೆ. ದಿನೇಶ್, ಗ್ರಾಪಂ ಅಧ್ಯಕ್ಷ ನಾಗರಾಜು ಇತರರಿದ್ದರು.

ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ



ಮಲ್ಕುಂಡಿ, ನ.3– ಡಾ.ಪುನೀತ್ ರಾಜ್‌ಕುಮಾರ್ ಪುಣ್ಯಸ್ಮರಣೆ ಅಂಗವಾಗಿ ಹಲ್ಲರೆ ಗ್ರಾಮದ ಡಾ.ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗದವರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ನೋಟ್‌ಬುಕ್, ಲೇಖನಿಗಳನ್ನು ವಿತರಿಸಿದರು.

ಗ್ರಾಮದ ಮುಖಂಡ ಪುಟ್ಟಬುದ್ಧಿ ಮಾತನಾಡಿ, ಬಾಲ್ಯದಲ್ಲೇ ಚಿತ್ರರಂಗಕ್ಕೆ ಕಾಲಿಟ್ಟ ಪುನೀತ್, ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಪುನೀತ್‌ಗೆ ಮಕ್ಕಳೆಂದರೆ ಅಪಾರ ಪ್ರೀತಿ. ಅವರನ್ನು ಕಳೆದುಕೊಂಡಿರುವುದು ರಾಜ್ಯಕ್ಕೆ ತುಂಬಲಾರದ ನಷ್ಟ. ಗ್ರಾಮದ ಮಕ್ಕಳು ಉತ್ತಮ ಶಿಕ್ಷಣ ಪಡೆದು ಗ್ರಾಮಕ್ಕೆ ಒಳ್ಳೆಯ ಹೆಸರು ತರಬೇಕು ಎಂದರು.

ಈ ವೇಳೆ ಡಾ.ಪುನೀತ್ ರಾಜ್ ಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ರೇವಣ್ಣ, ಮುಖಂಡರಾದ ಮಹದೇವಸ್ವಾಮಿ, ಸಂಪತ್ತು, ಆಕಾಶ್ ಸೇರಿದಂತೆ ಶಾಲೆಯ ಶಿಕ್ಷಕ ವೃಂದ ಹಾಜರಿದ್ದರು.

ಕೋಟೆಯಲ್ಲಿ ದಿ.ಚಿಕ್ಕಮಾದು, ಪುನೀತ್ ಪುಣ್ಯಸ್ಮರಣೆ

ಹೆಚ್.ಡಿ.ಕೋಟೆ, ನ.3– ಮಾಜಿ ಶಾಸಕ ದಿ.ಚಿಕ್ಕಮಾದು, ನಟ ಪುನೀತ್ ರಾಜಕುಮಾರ್ ರಾಜ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡುವ ಮೂಲಕ ಸಮಾಜದ ಏಳಿಗೆಗೆ ದುಡಿದ ಮಹನೀಯರು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಬಾಪೂಜಿ ಸರ್ಕಲ್‌ನಲ್ಲಿ ಮಾಜಿ ಶಾಸಕ ದಿ.ಚಿಕ್ಕಮಾದು ಅವರ 5ನೇ ವರ್ಷದ ಪುಣ್ಯಸ್ಮರಣೆ ಹಾಗೂ ನಟ ಡಾ. ಪುನೀತ್ ರಾಜಕುಮಾರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಚಿಕ್ಕಮಾದು, ಪುನೀತ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಚಿಕ್ಕಮಾದು ಅವರು ತಮ್ಮ ಅಧಿಕಾರವಧಿಯಲ್ಲಿ ತಾಲೂಕಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದು, ನಾಯಕ ಹಾಗೂ ಹಿಂದುಳಿದ ವರ್ಗಗಳ ಧ್ವನಿಯಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ ಎಂದರು.

ನಮ್ಮ ತಂದೆ ಮಾಡಿರುವ ಅಭಿವೃದ್ಧಿ ಕಾರ್ಯಗಳು ನನಗೆ ಶ್ರೀರಕ್ಷೆಯಾಗಿದ್ದು, ನನ್ನ ತಂದೆ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ ಎಂದರು.



ನಟ ಪುನೀತ್ ರಾಜಕುಮಾರ್ ಅವರು ಉತ್ತಮ ಚಿತ್ರಗಳ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡಿದ್ದಾರೆ. ಅವರ ಆದರ್ಶಗಳು ನಮಗೆಲ್ಲರಿಗೂ ಮಾದರಿ ಎಂದರು.

ಕಾರ್ಯಕ್ರಮದಲ್ಲಿ ದಿ.ಚಿಕ್ಕಮಾದು ಅವರ ಪತ್ನಿ ನಾಗಮ್ಮ, ಶಾಸಕ ಅನಿಲ್ ಪತ್ನಿ ಸೌಮ್ಯ, ಚಿಕ್ಕಮಾದು ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ನಾಗರಾಜ್, ತಾಲೂಕು ಅಧ್ಯಕ್ಷ ರಾಜನಾಯಕ, ಮುಖಂಡರಾದ ಸತೀಶ್‌ಗೌಡ, ಸೋಮೇಶ್, ಪುಟ್ಟ ಬಸವನಾಯ್ಕ, ದಾಸ ನಾಯಕ, ಪ್ರದೀಪ, ರವಿ, ರಾಜು, ಪರಶಿವಮೂರ್ತಿ, ನಂಜರಾಜ್, ಗಣೇಶ್ ಆಚಾರ್, ಅಶೋಕ್, ಸೌಮ್ಯ, ರವಿ ಇತರರಿದ್ದರು.


ಬಿಜೆಪಿಯಿಂದ ಸಂವಿಧಾನಾತ್ಮಕ ಆಶಯಗಳು ಧೂಳೀಪಟ

ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಆರೋಪ

ನಂಜನಗೂಡು, ನ.3– ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ದಲಿತರು, ಮಹಿಳೆಯರು, ಅಲ್ಪ ಸಂಖ್ಯಾತರ ವಿಚಾರಗಳು ಹಿಂದೆ ಸರಿಯುತ್ತಿದ್ದು, ಕೋಮು ಸೌಹಾರ್ದತೆಗೆ ಧಕ್ಕೆಯಾಗಿದೆ. ಜನಪರ ಆಡಳಿತ ನಡೆಸಬೇಕಾದ ಬಿಜೆಪಿ ಪ್ರಜಾಪ್ರಭುತ್ವ ವಿರೋಧಿ ಮನಸ್ಥಿತಿಯಲ್ಲಿ ಅಧಿಕಾರ ನಡೆಸುತ್ತಿದೆ ಎಂದು ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಆರೋಪಿಸಿದರು.

ನಗರದ ಹೌಸಿಂಗ್ ಬೋರ್ಡ್‌ನಲ್ಲಿರುವ ಗೃಹ ಕಚೇರಿಯಲ್ಲಿ ಗುರುವಾರ ಬೆಂಬಲಿಗರ ಸಭೆ ನಡೆಸಿ ಮಾತನಾಡಿದ ಅವರು ಗ್ಯಾಸ್, ಪೆಟ್ರೋಲ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಂವಿಧಾನಾತ್ಮಕ ಆಶಯಗಳು ಧೂಳೀಪಟವಾಗುತ್ತಿವೆ. ಸೂಕ್ಷ್ಮ ಭಾವನಾತ್ಮಕ ವಿಚಾರಗಳು ಹಿಂದೆ ಸರಿಯುತ್ತಿವೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸಂವಿಧಾನದ ಜಾತ್ಯಾತೀತ ತತ್ವ, ಆಶಯಗಳಿಗೆ ಬದ್ಧವಾಗಿದೆ ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮುಂಬರುವ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದಾರೆ. ಯಾವ ಕ್ಷೇತ್ರಗಳಿಗೂ ಅಭ್ಯರ್ಥಿ ಆಯ್ಕೆಯಾಗಿಲ್ಲ. ಸಂಸದೀಯ ಸಮಿತಿ ಜನರ ಅಭಿಪ್ರಾಯ ಸಂಗ್ರಹಿಸಿ ಪರಿಶೀಲನೆ ನಡೆಸಿ ಕೇಂದ್ರ ಕಮಿಟಿಗೆ ಕಳುಹಿಸುತ್ತಾರೆ. ಅಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಟಿಕೆಟ್ ಸಿಗುತ್ತದೆ.



ನಾನು ಕ್ಷೇತ್ರಕ್ಕೆ ಹೊಸಬನಲ್ಲ. ಕಳೆದ 40 ವರ್ಷಗಳಿಂದ ಕ್ಷೇತ್ರದ ಜನತೆಯೊಂದಿಗೆ ಒಡನಾಡ ಹೊಂದಿದ್ದೇನೆ. ನಾನು ಸಚಿವನಾಗಿದ್ದಾಗ ನಂಜನಗೂಡು ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ನಡೆಸಿದ್ದೇನೆ. ಪ್ರತಿ ಹಳ್ಳಿಗಳಲ್ಲಿ ನನ್ನ ಅಭಿವೃದ್ಧಿ ಕಾರ್ಯಗಳನ್ನು ಜನ ನೆನೆಪಿಸಿಕೊಳ್ಳುತ್ತಿದ್ದಾರೆ. ಇಲ್ಲಿನ ಜನ, ಬೆಂಬಲಿಗರು ಕ್ಷೇತ್ರದಿಂದ ಸ್ಪರ್ಧೆ ಮಾಡುವಂತೆ ಒತ್ತಾಯಿಸಿದ್ದಾರೆ. ಈ ಬಗ್ಗೆ ವರಿಷ್ಠರು ತೀರ್ಮಾನಿಸಲಿದ್ದಾರೆ ಎಂದರು.

ರಾಜ್ಯದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿರುವುದು ರಾಜ್ಯ ಹೆಮ್ಮೆ ಪಡುವ ವಿಚಾರ. ಆಡಳಿತದಲ್ಲಿ ಅಪಾರ ಅನುಭವ ಹೊಂದಿರುವ ಮಲ್ಲಿಕಾರ್ಜುನ ಖರ್ಗೆ ತಮ್ಮ ನಾಯಕತ್ವ, ಮುತ್ಸದ್ದಿತನ ಬಳಸಿಕೊಂಡು ಪಕ್ಷವನ್ನು ಯಶಸ್ವಿಯಾಗಿ ಮುನ್ನಡೆಸಲಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯವರು ನ.6 ರಂದು ಬೆಂಗಳೂರಿಗೆ ಆಗಮಿಸಲಿದ್ದು, ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಜಾತ್ಯಾತೀತ ತತ್ವದಲ್ಲಿ ನಂಬಿಕೆ ಇಟ್ಟಿರುವ ಪಕ್ಷದ ಕಾರ್ಯಕರ್ತರು ಕೋಮು ಶಕ್ತಿಗಳ ವಿರುದ್ಧ ಪಕ್ಷ ಸಂಘಟಿಸಿ, ಜನಪರ ಹೋರಾಟದಲ್ಲಿ ಪಾಲ್ಗೊಳ್ಳಬೇಕು ಎಂದರು. ಸಭೆಯಲ್ಲಿ ಮುಖಂಡರಾದ ಮಹದೇವಪ್ಪ, ಇಂಧನ್ ಬಾಬು, ಕೆ.ಬಿ.ಸ್ವಾಮಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ, ಚಾಮರಾಜು, ಮೂಗಶೆಟ್ಟಿ, ಪಿ.ಶ್ರೀನಿವಾಸ್, ಅಜ್ಗರ್ ಅಹಮ್ಮದ್, ನಾಸಿರ್ ಅಹಮ್ಮದ್, ನಿಂಗಪ್ಪ, ಕೃಷ್ಣ, ಸಿದ್ದೇಶ್, ನಟರಾಜು, ಉಪಸ್ಥಿತರಿದ್ದರು.

ನ.6ಕ್ಕೆ, ಮಲ್ಲಿಕಾರ್ಜುನಖರ್ಗೆ ಬೆಂಗಳೂರಿಗೆ ಆಗಮನ

ಅಭಿನಂದನಾ ಕಾರ್ಯಕ್ರಮದಲ್ಲಿ ಕ್ಷೇತ್ರದ ಸಾವಿರಾರು ಮಂದಿ ಭಾಗಿ

ತಿ.ನರಸೀಪುರ ನ.3– ಎಐಸಿಸಿ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನ.6ರಂದು ಬೆಂಗಳೂರಿಗೆ ಆಗಮಿಸುತ್ತಿದ್ದು, ಅವರನ್ನು ಸ್ವಾಗತಿಸಲು ತಿ.ನರಸೀ ಪುರ ವಿಧಾನಸಭಾ ಕ್ಷೇತ್ರದ ಸಾವಿರಾರು ಕಾರ್ಯಕರ್ತರು ತೆರಳಲಿದ್ದಾರೆ ಎಂದು ಯುವ ಮುಖಂಡ ಸುನೀಲ್ ಬೋಸ್ ತಿಳಿಸಿದ್ದಾರೆ.

50 ವರ್ಷಗಳ ನಂತರ ಕರ್ನಾಟಕದ ನಾಯಕರೊಬ್ಬರು ಎಐಸಿಸಿ ಅಧ್ಯಕ್ಷ ಹುದ್ದೆ ಅಲಂಕರಿಸಿದ್ದು, ಇದು ಪಕ್ಷದ ಕಾರ್ಯಕರ್ತರು ಹಾಗೂ ನಾಡಿನ ಜನತೆಗೆ ಹೆಮ್ಮೆಯ ವಿಚಾರ. ಅವರನ್ನು ಬರಮಾಡಿಕೊಳ್ಳಲು ಅರಮನೆ ಮೈದಾನದಲ್ಲಿ ಆಯೋಜಿಸಿರುವ ಅಭಿನಂದನಾ ಸಮಾರಂಭದಲ್ಲಿ ತಿ.ನರಸೀಪುರದಿಂದಲೂ ಸಾವಿರಾರು ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಸುನೀಲ್ ಬೋಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ನಗರದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ಕೆ.ಆರ್.ನಗರ, ನ.3– ಯಾವುದೇ ಜಾತಿ, ಧರ್ಮ, ಪಂಥಗಳ ಬೇಧವಿಲ್ಲದೆ ಒಗ್ಗಟ್ಟಿನಿಂದ ಕನ್ನಡ ರಾಜ್ಯೋತ್ಸವ ಆಚರಿಸೋಣ ಎಂದು ಶಾಸಕ ಸಾ.ರಾ. ಮಹೇಶ್ ತಿಳಿಸಿದರು.

ಪಟ್ಟಣದ ಡಾ.ರಾಜ್ ಬಾನಾಂಗಳದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ. ಕರ್ನಾಟಕ ರಾಜ್ಯೋತ್ಸವ ಅಥವಾ ಕನ್ನಡ ದಿನ, ಇದನ್ನು ಕರ್ನಾಟಕ ರಚನೆಯ ದಿನ ಅಥವಾ ಕರ್ನಾಟಕ ದಿನ ಎಂದು ಕರೆಯುತ್ತಾರೆ. ಇದನ್ನು ಪ್ರತಿ ವರ್ಷ ನ.1 ರಂದು ಆಚರಿಸುವ ಮೂಲಕ ಕನ್ನಡಿಗರು ಸಾರ್ವಭೌಮತ್ವ ಮೆರೆಯೋಣ ಎಂದರು.

ವೇದಿಕೆಯಲ್ಲಿ ಪತ್ರಕರ್ತರಾದ ಚುಂಚನಕಟ್ಟೆ ಸಿ.ಜಿ.ಮಧು, ಎಸ್. ಯೋಗಾನಂದ್, ಡಾ.ಮೆಹಬೂಬ್ ಖಾನ್, ಡಾ.ಕೆ. ಎಸ್.ಮಹೇಂದ್ರಪ್ಪ, ಡಾ. ಚಂದ್ರಕಲಾ, ಡಾ.ದೇವೇಂದ್ರಕುಮಾರ್, ಪುರಸಭಾ ಮಾಜಿ ಸದಸ್ಯ ಅಸ್ಲಾಂ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರು ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಕನ್ನಡ ಭಾಷೆಯಲ್ಲಿ ನೂರಕ್ಕೆ ನೂರರಷ್ಟು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಪುರಸಭಾ ಮುಖ್ಯಾಧಿಕಾರಿ ಡಾ. ಜಯಣ್ಣ ಮಾತನಾಡಿದರು. ಈ ವೇಳೆ ಪುರಸಭಾಧ್ಯಕ್ಷ ಪ್ರಕಾಶ್, ಉಪಾಧ್ಯಕ್ಷೆ ಸೌಮ್ಯ, ಖ್ಯಾತ ಮೂಳೆತಜ್ಞ ಡಾ.ಮೆಹಬೂಬ್ ಖಾನ್, ತಹಸೀಲ್ದಾರ್ ಗಳಾದ ಎಸ್.ಸಂತೋಷ್, ಎಂ.ಎಎಸ್. ಯಧುಗೀರಿಶ್, ತಾಪಂ ಇಓ ಸತೀಶ್, ಹಾರಂಗಿ ಇಇ ಹಿರಣ್ಣನಾಯಕ, ಎಇಇ ಗಳಾದ ವಿನುತ್, ಸೆಸ್ಕಾಂ ಎಇಇ ಅರ್ಕೇಶ್ ಮೂರ್ತಿ, ಕಸಪಾ ತಾಲೂಕು ಅಧ್ಯಕ್ಷ ಶಂಕರ್, ಬಿಸಿಎಂ ಅಧಿಕಾರಿ ಜಿ.ಜೆ.ಮಹೇಶ್, ಬಿಇಓ ಗಾಯತ್ರಿ, ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್ ಸೇರಿದಂತೆ ಇನ್ನಿತರರಿದ್ದರು.



ಇತ್ತೀಚೆಗೆ ಚಿರತೆ ದಾಳಿಯಿಂದ ಸಾವನ್ನಪ್ಪಿದ ತಿ.ನರಸೀಪುರ ತಾಲೂಕಿನ ಎಂ.ಎಲ್.ಹುಂಡಿ ಗ್ರಾಮದ ಯುವಕ ಮಂಜುನಾಥ್ ನಿವಾಸಕ್ಕೆ ಬಿಜೆಪಿ ಮುಖಂಡ ಎಸ್.ಅರವಿಂದ್ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿ, ವೈಯಕ್ತಿಕ ನೆರವು ನೀಡಿದರು. ಈ ವೇಳೆ ಗ್ರಾಪಂ ಸದಸ್ಯ ಪ್ರಭುಸ್ವಾಮಿ, ನಂಜುಂಡೇಗೌಡ, ಬೋರೇಗೌಡ, ಮಹದೇವಸ್ವಾಮಿ, ಚಂದ್ರಪ್ಪ, ಆಡಿಟರ್ ಮಂಜುನಾಥ್, ರೈತ ಮುಖಂಡ ಮಹದೇವಸ್ವಾಮಿ ಇತರರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿ ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 67ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಶಾಲಾ ಮುಖ್ಯಶಿಕ್ಷಕ ಬಿ.ಎನ್. ನಾಗಾರ್ಜುನ, ಶಿಕ್ಷಕಿ ಎಂ.ವೇದಾವತಿ, ಎಸ್‌ಡಿಎಂಸಿ ಅಧ್ಯಕ್ಷ ಯಶೋಧ, ಉಪಾಧ್ಯಕ್ಷ ಪಿ. ರವಿಕುಮಾರ್, ಸದಸ್ಯರಾದ ಗೋವಿಂದಾಜು, ಹೆಚ್.ಎಸ್. ಶಿವಕುಮಾರ್, ಗೀತಾ ಹಾಗೂ ಗ್ರಾಪಂ ಸದಸ್ಯರಾದ ರವಿಕುಮಾರ್ ಉಪಸ್ಥಿತರಿದ್ದರು.

ನಂಜನಗೂಡಲ್ಲಿ ಶಿಕ್ಷಕ ಆತ್ಮಹತ್ಯೆ

ನಂಜನಗೂಡು, ನ.3– ಶಿಕ್ಷಕರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದಲ್ಲಿ ಗುರುವಾರ ರಾತ್ರಿ ನಡೆದಿದೆ.



ನಗರದ ದೇವಿರಮ್ಮನಹಳ್ಳಿ ಸಮೀಪದ ರಾಮಸ್ವಾಮಿ ಲೇಔಟ್ ನಿವಾಸಿ ಹಾಗೂ ತಾಲೂಕಿನ ಕೂಡ್ಲಾಪುರ ಸರ್ಕಾರಿ ಪ್ರೌಢಶಾಲೆ ಶಿಕ್ಷಕ ಶಂಭುಲಿಂಗು(47) ಆತ್ಮಹತ್ಯೆ ಮಾಡಿಕೊಂಡವರು. ಗುರುವಾರ ಎಂದಿನಂತೆ ಶಾಲೆಗೆ ತೆರಳಿದ್ದ ಶಿಕ್ಷಕ ಶಂಭುಲಿಂಗು ಕೆಲಸ ಮುಗಿಸಿಕೊಂಡು ಸಂಜೆ ಮನೆಗೆ ಬಂದಿದ್ದರು. ಆನಂತರ ಮನೆಯಿಂದ ಹೊರಹೋದವರು ರಾತ್ರಿ 7 ಗಂಟೆಯಾದರೂ ಹಿಂದಿರುಗದ ಹಿನ್ನೆಲೆಯಲ್ಲಿ ಮನೆಯವರು ಹುಡುಕಾಟ ನಡೆಸಿದ್ದಾರೆ. ಅಂತಿಮವಾಗಿ ಮನೆ ಸಮೀಪದ ಕಾರ್ ಶೆಡ್‌ಗೆ ಹೋಗಿ ನೋಡಲಾಗಿ ಶಿಕ್ಷಕ ಶಂಭುಲಿಂಗ ನೇಣು ಬಿಗಿದ ಸ್ಥಿತಿಯಲ್ಲಿ ಕಂಡುಬಂದಿದ್ದಾರೆ. ತಕ್ಷಣ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ಕರೆದೊಯ್ದರಾದರೂ, ಅಷ್ಟರಲ್ಲಿ ಅವರು ಸಾವನ್ನಪ್ಪಿದ್ದರು. ಕಳೆದ ಒಂದೂವರೆ ತಿಂಗಳ ಹಿಂದೆ ಮುಂಜಾನೆಯೇ ಕೊರಿಯರ್ ಕೊಡುವ ನೆಪದಲ್ಲಿ ದುಷ್ಕರ್ಮಿಗಳು ಮನೆಗೆ ನುಗ್ಗಿ ಶಂಭುಲಿಂಗ ಅವರ ಪತ್ನಿ ದಾಕ್ಷಾಯಿಣಿ ಅವರ ಕೈ ಕಾಲು ಕಟ್ಟಿ 173 ಗ್ರಾಂ ಚಿನ್ನಾಭರಣ ದೋಚಿ ಪರಾರಿಯಾಗಿದ್ದರು. ಇವರು ಹಣಕಾಸು ವ್ಯವಹಾರ ನಡೆಸುತ್ತಿದ್ದರಿಂದ ಈ ದರೋಡೆ ಪ್ರಕರಣ ಚರ್ಚೆಗೆ ಗ್ರಾಸವಾಗಿತ್ತು. ಇದೀಗ ಶಂಭುಲಿಂಗು ಆತ್ಮಹತ್ಯೆಗೆ ಶರಣಾಗಿರುವುದು ಮತ್ತಷ್ಟು ಅನುಮಾನ ಹುಟ್ಟಿಸಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಗರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಚಿರತೆ ದಾಳಿಗೆ ಯುವಕ ಬಲಿ: ಮೃತನ ಕುಟುಂಬಕ್ಕೆ 25 ಲಕ್ಷ ರೂ. ನೀಡಲು ಆಗ್ರಹ



ತಿ.ನರಸೀಪುರ, ನ.3– ಚಿರತೆ ದಾಳಿಗೆ ಬಲಿಯಾದ ತಾಲೂಕಿನ ಎಂ.ಎಲ್.ಹುಂಡಿ ಗ್ರಾಮದ ಯುವಕ ಮಂಜುನಾಥ್ ಕುಟುಂಬಕ್ಕೆ ಸರ್ಕಾರ 25 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಮಾಜಿ ಶಾಸಕ ಡಾ.ಎಲ್.ಎನ್.ಭಾರತಿ ಶಂಕರ್ ಒತ್ತಾಯಿಸಿದರು.

ಮಂಜುನಾಥ್ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಂಜುನಾಥ್ ಚಿರತೆ ದಾಳಿಗೆ ಬಲಿಯಾಗಿರುವುದು ವಿಷಾದನೀಯ. ತಾಲೂಕಿನಲ್ಲಿ ಇಂತಹ ಘಟನೆ ನಡೆಯಬಾರದಿತ್ತು. ಅರಣ್ಯಾಧಿಕಾರಿಗಳು ಮತ್ತೆ ಇಂತಹ ಘಟನೆ ನಡೆಯದಂತೆ ಎಚ್ಚರಿಕೆ ವಹಿಸುವಂತೆ ತಿಳಿಸಿದ್ದೇನೆ. ಅರಣ್ಯ ಇಲಾಖೆಯವರು ಈಗಾಗಲೇ ಚಿರತೆ ಸೆರೆಗೆ ಬೋನ್ ಇಟ್ಟಿರುವುದಾಗಿ ತಿಳಿಸಿದ್ದಾರೆ ಎಂದರು.

ಮಲ್ಲಪ್ಪನ ಬೆಟ್ಟ ಹಾಗೂ ವಡ್ಗಲ್ ರಂಗನಾಥಸ್ವಾಮಿ ಬೆಟ್ಟದ ಸುತ್ತಮುತ್ತಲಿನ ಗ್ರಾಮಸ್ಥರು ಭಯದಿಂದ ವಾಸಿಸುವ ಪರಿಸ್ಥಿತಿ ನಿರ್ಮಾಣವಾಗದಂತೆ ಎಚ್ಚರ ವಹಿಸಿ, ಚಿರತೆ ಸೆರೆ ಹಿಡಿದು ನೆಮ್ಮದಿ ಜೀವನ ನಡೆಸಲು ಅವಕಾಶ ಕಲ್ಪಿಸಿ ಕೊಡಬೇಕೆಂದು ಅರಣ್ಯ ಇಲಾಖೆಗೆ ಮನವಿ ಮಾಡಿದ್ದೇನೆ ಎಂದರು.

ಘಟನೆ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಹಾಗೂ ತಲಕಾಡಿಗೆ ಭೇಟಿ ನೀಡಿದ್ದ ಉನ್ನತ ಶಿಕ್ಷಣ ಸಚಿವ ಡಾ.ಅಶ್ವಥ್ ನಾರಾಯಣ್ ಅವರೊಂದಿಗೆ ಚರ್ಚಿಸಿದ್ದು, ಸರ್ಕಾರದಿಂದ 25 ಲಕ್ಷ ರೂ. ಪರಿಹಾರ ನೀಡಬೇಕೆಂದು ಒತ್ತಾಯಿಸಿರುವುದಾಗಿ ತಿಳಿಸಿದರು.

ಬೆಲೆ ಏರಿಕೆ, ಭ್ರಷ್ಟಾಚಾರ, ಲೂಟಿ ಬಿಜೆಪಿ ಸರ್ಕಾರದ ಸಾಧನೆ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್

ನಂಜನಗೂಡು, ನ.3– ಬಿಜೆಪಿ ಸರ್ಕಾರ ಬಡವರ ಪರವಾದ ಯಾವುದೇ ಯೋಜನೆ ಜಾರಿಗೊಳಿಸಿಲ್ಲ. ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ, ಭ್ರಷ್ಟಾಚಾರದಲ್ಲಿ ತೊಡಗಿ ಲೂಟಿ ಮಾಡಿದ್ದೇ ಅವರ ದೊಡ್ಡ ಸಾಧನೆ. ಮುಂಬರುವ ಚುನಾವಣೆಯಲ್ಲಿ ಜನತೆ ಬಿಜೆಪಿಗೆ ತಕ್ಕಪಾಠ ಕಲಿಸಲಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ತಿಳಿಸಿದರು.


ತಾಲೂಕಿನ ದೇವನೂರು, ದೊಡ್ಡಕವಲಂದೆ, ಕೂಡ್ಲಾಪುರ, ನೇರಳೆ ಗ್ರಾಪಂ ವ್ಯಾಪ್ತಿಯಲ್ಲಿ ಸ್ವಾತಂತ್ರ್ಯ ನಡಿಗೆ ಪಾದಯಾತ್ರೆ ವೇಳೆ ಗಟ್ಟವಾಡಿಪುರ ಗ್ರಾಮದಲ್ಲಿ ಮಾತನಾಡಿದ ಅವರು, ದೊಡ್ಡಕವಲಂದೆ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ಕವಲಂದೆ ಭಾಗದ 56 ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮೂಲಕ ನದಿಯಿಂದ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಕೆಲಸ ಮಾಡಿದೆ. ನಮ್ಮ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಈ ಭಾಗದ ಎಲ್ಲಾ ಕೆರೆಗಳನ್ನು ತುಂಬಿಸುವ ಕೆಲಸ ಮಾಡಿದ್ದರಿಂದಾಗಿ ಅಂತರ್ಜಲ ಹೆಚ್ಚಾಗಿ ಕೃಷಿಗೂ ನೀರು ದೊರಕುವಂತಾಗಿದೆ. ಸಿದ್ದರಾಮಯ್ಯ ಅವಧಿಯಲ್ಲಿ ನೀಡಿದ್ದ 150 ಭರವಸೆಗಳನ್ನು ಈಡೇರಿಸಲಾಗಿದೆ. ಅನ್ನಭಾಗ್ಯ ಯೋಜನೆಯಿಂದ ಕೊರೊನಾ ವೇಳೆ ಬಡವರು ಬದುಕುವಂತಾಯಿತು. ಆದರೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷ ಕಳೆದರೂ ಬಡವರ ಪರ ಯಾವುದೇ ಯೋಜನೆ ಜಾರಿಗೆ ತಂದಿಲ್ಲ.



ಅಭಿವೃದ್ಧಿ ಕೆಲಸ ಮಾಡದೆ ಜಾತಿ, ಧರ್ಮಗಳನ್ನು ಆಧಾರವಾಗಿಟ್ಟುಕೊಂಡು ಮತ ಕೇಳುತ್ತಿದ್ದಾರೆ. ಅಲ್ಲದೆ ಮಾಜಿ ಸಿಎಂ ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸಿ ಅವರಿಂದ ಕಣ್ಣೀರು ಹಾಕಿಸಿದ ಬಿಜೆಪಿಗರು ಈಗ ಅವರದೇ ನಾಯಕತ್ವವೆಂದು ನಾಟಕವಾಡುತ್ತಿದ್ದಾರೆ. ಆದ್ದರಿಂದ ಕಾಂಗ್ರೆಸ್ ಅನ್ನು ಬೆಂಬಲಿಸುವ ಮೂಲಕ ಅವಕಾಶವಾದಿ ಬಿಜೆಪಿ ಪಕ್ಷಕ್ಕೆ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಿ ಎಂದು ಕರೆ ನೀಡಿದರು.

ಈ ವೇಳೆ ಹರಗಿನಪುರ ಗ್ರಾಪಂ ಸದಸ್ಯ ಸಿದ್ದಲಿಂಗಪ್ಪ, ನಾಗೇಶ್, ಬಸವಣ್ಣ, ಬಸವರಾಜು, ಜಗದೀಶ, ದೊರೆಸ್ವಾಮಿ, ಮಹೇಶ್, ರವಿ, ಗಟ್ಟವಾಡಿಪುರದ ವೀರಶೈವ ಮುಖಂಡರಾದ ಮಹದೇವಪ್ಪ, ಸದಾಶಿವಪ್ಪ, ಸೋಮಶೇಖರಪ್ಪ, ರಾಜಶೇಖರಪ್ಪ, ಕೆ.ಪಿ.ಶಿವಪ್ಪ, ಕೂಸಪ್ಪ, ಬಸವಣ್ಣ, ರಂಗಸ್ವಾಮಿ, ಮಂಜುನಾಥ್, ಪ್ರಸಾದ್, ನಾರಾಯಣ ನಾಯಕ, ನಾಗರಾಜಶೆಟ್ಟಿ, ಮುದ್ದಶೆಟ್ಟಿ, ಮಾದಣ್ಣ, ಸೇರಿದಂತೆ 30 ಮಂದಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ಲತಾ, ಮುಖಂಡರಾದ ಶಿವಪ್ಪದೇವರು, ಕುಳ್ಳಯ್ಯ, ರಾಜೇಶ್, ಶಿವಣ್ಣ, ಗ್ರಾಪಂ ಅಧ್ಯಕ್ಷ ಶಂಕರ್ ನಾಯಕ, ಸದಸ್ಯರಾದ ಗುರುಪಾದ, ಶಂಕರ್, ಬಸವಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್‌ರಾಜ್, ಮಾಜಿ ಸದಸ್ಯ ಪದ್ಮನಾಭ ಸೇರಿದಂತೆ ಕಾರ್ಯಕರ್ತರು ಇದ್ದರು.


2ನೇ ವರ್ಷದ ಸವಿನೆನಪು



ಎಂ.ಹನುಮಂತಪ್ಪ

ಪತ್ನಿ ಮತ್ತು ಮಕ್ಕಳು ಹಾಗೂ ಕುಟುಂಬದವರು

2ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಸುಬ್ಬಯ್ಯನವರು
KSRTC
ನಿಧನ: 04–11–2020

ನೀವು ನಮ್ಮನ್ನಗಲಿ ಎರಡು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು:
ಶ್ರೀಮತಿ ಪದ್ಮಮ್ಮ ಸುಬ್ಬಯ್ಯ
ಮಕ್ಕಳು,
ಸೊಸೆಯಂದಿರು ಹಾಗೂ
ಮೊಮ್ಮಕ್ಕಳು, ಮೈಸೂರು

PUBLIC NOTICE


Notice is hereby given that (1) **SMT. K.N.NIRMALA,** wife of Late M.Basappaji, **(2) SRI. CHIDANANDA TEJASWI .M.B** and (3) **SRI.DAYANANDA TEJASWI.M.B,** sons of Late M.Basappaji, are desirous to sell the under mentioned property to my client and any person or persons claiming any interest on the under mentioned property or any part thereof, is hereby required to communicate the same to me with documentary evidence at my Office, situated at **DOOR No.2765/1A D13/A1, "KEYANS", 5TH MAIN ROAD, V.V. PURAM (V.V. MOHALLA), MYSORE – 570 002**, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived for all intents and purposes.

SCHEDULE PROPERTY

Residential Property bearing No.145/A New No.D-18/1A, situated at 1st Main, Yadavagiri Extension, Devaraja Mohalla, Mysore City with building thereon, site measuring East to West – 25.60 Meters and North to South – 12.19 Meters, totally measuring 312.06 Square Meters, bounded on: East – Road, West – Property bearing No.145/C, North – MUDA Land and Passage and South – Property bearing No.145/B.

Sd/- Dhirendra Kumar R. Mehta
Advocate
KEY-ANS LAW SOLUTIONS
Date: 03.11.2022
Place: Mysore

11ನೇ ವರ್ಷದ ಸವಿನೆನಪು



ನಿಧನ : 04.11.2011

ಶ್ರೀ ಬಿ.ಪಾಪಯ್ಯ ಕಂಟ್ರಾಕ್ಟರ್

ಮಾಜಿ ಅಧ್ಯಕ್ಷರು, ಗ್ರಾಮಾಭಿವೃದ್ಧಿ ಸಂಘ, ವಿನಾಯಕನಗರ (ಪಡುವಾರಹಳ್ಳಿ), ಮೈಸೂರು. ನಂ.61, 6ನೇ ಮೇನ್, ವಿನಾಯಕನಗರ, ಮೈಸೂರು–12.

ಸದಾ ನಿಮ್ಮ ನೆನಪಿನಲ್ಲಿರುವ

ಪತ್ನಿ: ಶ್ರೀಮತಿ ಚಾಮಮ್ಮ, ಮಕ್ಕಳು: ಪಿ.ಮಾದಪ್ಪ, ಪಿ. ಬಸವರಾಜು ಮತ್ತು ಕುಟುಂಬವರ್ಗದವರು ಹಾಗೂ ಪಿ.ಎಸ್. ಭರತೇಶ್ ಮಾಜಿ ನಗರಸಭಾ ಸದಸ್ಯರು. ಪಡುವಾರಹಳ್ಳಿ (ವಿನಾಯಕನಗರ)

(ಕರ್ನಾಟಕ ಸರ್ಕಾರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಹಾಸನ ವಿಭಾಗ, ಹಾಸನ,
Ph:08172-261640 Email ID:eerdwsd.hsn@gmail.com

ಏಕ–ಲಕೋಟೆ ಪದ್ಧತಿಯಲ್ಲಿ ಅಲ್ಪಾವದಿ ಟೆಂಡರ್ ಪ್ರಕಟಣೆ: 12/2022–23 ದಿನಾಂಕ: 03–11–2022

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ ರವರಿಂದ WQMSP 2215 – 034 (ಯೋಜನೇತರ) ಮತ್ತು JJM support activity ಯೋಜನೆಯಡಿ ಅನುಮೋದನೆಯಾಗಿರುವ ಹಾಸನ ವಿಭಾಗ ಮತ್ತು ಉಪ–ವಿಭಾಗಗಳ ಕಾಮಗಾರಿಗೆ ಈ ಕೆಳಕಂಡಂತೆ ಟೆಂಡರ್‌ಅನ್ನು ಆಹ್ವಾನಿಸಲಾಗಿರುತ್ತದೆ. ಏಕ–ಲಕೋಟೆ ಪದ್ಧತಿ ಕಾಮಗಾರಿಗಳು ಹಾಸನ ತಾಲ್ಲೂಕಿನ 1 ಕಾಮಗಾರಿ ಹಾಸನ ವಿಭಾಗ ಮತ್ತು ಉಪವಿಭಾಗಗಳ 3 ಕಾಮಗಾರಿಗಳು ಸದರಿ ಕಾಮಗಾರಿಗಳಿಗೆ ಏಕ ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕ ಟೆಂಡರ್‌ನ್ನು e-procurement portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ದಿನಾಂಕ: 10–11–2022, 05:00 ಘಂಟೆಯವರೆಗೆ ಟೆಂಡರ್‌ನ್ನು ನಿಗದಿತ ನಮೂನೆಗಳನ್ನು www.e-procurement. karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ದಿನಾಂಕ 09–11–2022 ರ ಸಂಜೆ 5:00 ರವರೆಗೆ ಗುತ್ತಿಗೆದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ಏಕ–ಲಕೋಟೆ ಪದ್ಧತಿ ಕಾಮಗಾರಿಗಳ ತಾಂತ್ರಿಕ & ಆರ್ಥಿಕ ಬಿಡ್ ಅನ್ನು ದಿನಾಂಕ:14–11–2022 ರಂದು 11:00 ಘಂಟೆಯ ನಂತರ ತೆರೆಯಲಾಗುವುದು ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಹಾಸನ ವಿಭಾಗ, ಹಾಸನ

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/693/2022–23

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ
ಪರಿಸರವನ್ನು ಕಾಪಾಡಿ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಶ್ರೀರಾಂಪುರ

ಮೈಸೂರು ಜಿಲ್ಲೆ – 570008
ದೂರವಾಣಿ ಸಂ. –0821-2330109 ಇ–ಮೇಲ್ : itstaff_ulb_srirampura@yahoo.com
ಫ್ಯಾಕ್ಸ ಸಂ. ವೆಬ್ ಸೈಟ್

ಶ್ರೀ.ಪ.ಪ./ಜಿ.ಇ./ಟಿ.ಪ್ರ./04/2022–23 ದಿನಾಂಕ : 25.10.2022

ಟೆಂಡರ್ ಪ್ರಕಟಣೆ

ಪಟ್ಟಣ ಪಂಚಾಯಿತಿ ಶ್ರೀರಾಂಪುರ ಮುಖ್ಯಾಧಿಕಾರಿರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಕೆಡಬ್ಲ್ಯೂಜಿ–1ರ ಹಾಗೂ ಕೆಡಬ್ಲ್ಯೂ–1ರ ನಿಯಮದನ್ವಯ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 2022–23 ನೇ ಸಾಲಿನ 15ನೇ ಹಣಕಾಸು ಅನುದಾನದ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಯ ಘನತ್ಯಾಜ್ಯ ನಿರ್ವಹಣೆಗಾಗಿ ಈ ಕೆಳಗಿನ ವಾಹನಗಳ ಸರಬರಾಜಿಗಾಗಿ ಅರ್ಹ ನೊಂದಾಯಿತ ಆಟೋ ಕಂಪೆನಿ/ಡೀಲರ್ಸ್‌ಗಳಿಂದ ಹಾಗೂ ಕಾಮಗಾರಿಗಳಿಗೆ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ವೆಬ್‌ಸೈಟ್ www.eproc.karnataka.gov.in ಮೂಲಕ ಇ.ಎಂ.ಡಿ, ಗುತ್ತಿಗೆ ಹಾಗೂ ಇತರೆ ಷರತ್ತುಗಳನ್ನು ಗಮನಿಸಿಕೊಳ್ಳುವುದು. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ : www.srirampuratown.mrc.gov.in ನಿಂದ ಪಡೆದುಕೊಳ್ಳಬಹುದು..

ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 09.11.2022 ಸಮಯ ಸಂಜೆ 5.00 ಗಂಟೆ
ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ ದಿನಾಂಕ : 10.11.2022

ಕ್ರ.ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ
1	DMA/2022-23/IND14425	14.57
2	DMA/2022-23/IND14556	10.00
3	DMA/2022-23/IND14557	8.00
4	WORK_INDENT137657 (2ನೇ ಕರೆ)	11.00
5	WORK_INDENT137689 (2ನೇ ಕರೆ)	2.50

ಸಹಿ/–(ಗಿರೀಶ್ ಬಿ.ಎನ್)
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯಿತಿ,
ಶ್ರೀರಾಂಪುರ

ಸಹಿ/–(ಎ.ಎಮ್.ಶ್ರೀಧರ್)
ಮುಖ್ಯಾಧಿಕಾರಿ
ಪಟ್ಟಣ ಪಂಚಾಯಿತಿ
ಶ್ರೀರಾಂಪುರ

Form No. URC-2

Advertisement Giving Notice About Registration Under Part I Of Chapter XXI
[Pursuant to section 374 (b) of the companies Act, 2013 and rule 4 (1) of the companies (Authorised to Register) Rules, 2014]

1. Notice is hereby given that in pursuance of sub-section (2) of section 366 of the Companies Act, 2013, an application is proposed to be made after fifteen days hereof but before the expiry of thirty days hereinafter to the Registrar of Companies at Central Registration Center (CRC) Indian Institute of Corporate Affairs (IICA) Plot No. 6, 7, 8, Sector 5, IMT Manesar, District Gurgaon (Haryana), PIN 122050 that M/s. Paramount Construction Company a Registered partnership firm may be registered under Part I of Chapter XXI of the Companies Act 2013 as a company limited by shares.

2. The principal objects of the company are as follows:

a) To carry on the business as builders, property developers, Engineering Contractors, Civil, mechanical and labour contractors, building and erection engineers consultants, dealers in, importers, exporters and manufactures of prefabricated and precast houses, materials, tools, implements, machinery and metalware in connection therewith or incidental thereto and also to alter, demolish, removal or carry out repairs on such favourable terms and deemed fit and to carry on the business of designers, Real Estate owners, layout promoters and also act as real estate brokers, realtors and agents and other service providers and to carry on any other business that is customarily, usually and conveniently carried on therewithin or outside India and to purchase, acquire, take on lease or in exchange or in any other lawful manner any area, land, buildings structures and to turn the same into account, develop the same, dispose off or maintain the same and give away for rentals

b) To carry on the business of contractors, sub-contractors, quasi contractors and to undertake contracts and subcontracts relating to construction, modification, repairing, alteration, construction, removal redecoration, redesigning, enlarging, improving and designing of civil work, building for whatever use, roads, approach roads, streets, circles, squares, parks, gardens, statues, parking places, bridges, dams, watercourses and reservoirs, tunnels, earthworks, sewers, tanks, drains, sewage, lighthouses, towers, transmission towers, pipelines, underground cables, railway tracks, railway sidings, runways shipyards, stockyards, culverts, channels whether on a turnkey basis or on labour contracts or otherwise.

c) To carry on the business of establishing and/or promoting support services whether information technology enabled or otherwise including but not limited to placement services, enterprise content and data services, web services, transports Back office operations, manpower supply, maintenance of information systems and act as consultants for the aforementioned services and businesses."

3. A copy of the draft memorandum and articles of association of the proposed company may be inspected at the office at No 2902/1, 2nd Floor, Loyal World Building, Temple Road, V. V. Mohalla, Mysuru 570002.

4. Notice is hereby given that any person objecting to this application may communicate their objection in writing to the Registrar of Companies at Central Registration Center (CRC), Indian Institute of Corporate Affairs (IICA) Plot No. 6, 7, 8, Sector 5, IMT Manesar, District Gurgaon (Haryana), PIN 122050, within twenty-one days from the date of publication of this notice, with a copy to the company at its registered office.

Name(s) of Applicant
Dated this 02nd Day of November, 2022 **Madhusudhan Raju Shabeer Ali Puthiyottil**

3ನೇ ವರ್ಷದ ಸವಿನೆನಪು



ಶಿವಕುಮಾರ್ ಬಿ.
ಜನನ: 25-12-1966 ಮರಣ: 4-11-2019
ದುಃಖತಪ್ತರು: ಪತ್ನಿ ಸಾವಿತ್ರಮ್ಮ ಮತ್ತು ಮಕ್ಕಳು ಪ್ರೊ॥ ಶರತ್ (ಪೈಲು) ಸುಧಾ, ಸೊಸೆ: ರಮ್ಯ, ಮೊಮ್ಮಕ್ಕಳು ಹಾಗೂ ಬಂಧುಮಿತ್ರರು, ಕುಂಬಾರಕೊಪ್ಪಲು

|| OM SHRI MANJUNATHAYA NAMAHA ||
MMK & SDM MAHILA MAHA VIDYALAYA AND CENTER FOR PG STUDIES
Managed by S.D.M. Educational Society®, Ujire

APPOINTMENT NOTIFICATION
Wanted Asst. Professor in Computer Science

Qualification : Masters Degree in the Concerned Subject with Minimum 55% of marks & NET / SLET. Preference will be given for Ph.D., Candidates.
Interested Candidates may walk-in for an interview on 7/11/2022 or apply to:
The Principal,
SDM MMK MAHILA MAHA VIDYALAYA,
Krishnamurthypuram, Mysore - 570 004
Email : principal@sdmmmkmysore.in
Principal